ವಾರ್ಷಿಕ ಚಂದಾ ರೂ.25/-


# ಮಾರ್ಚ್ ಜನಪದ

ಸಂಪುಟ–04 • ಸಂಚಿಕೆ–07 • ಏಪ್ರಿಲ್ 2021



ಏಪ್ರಿಲ್
2021





## ಕೋವಿಡ್ ಲಸಿಕೆ ಅಭಿಯಾನದಲ್ಲಿ
## ಕರ್ನಾಟಕದ ಮುನ್ನಡೆ

Download From : www.kpscvaani.com



ಕೋವಿಡ್–19 ಸ್ಥಿತಿಗತಿಯ ಕುರಿತು ಚರ್ಚಿಸಲು ಮಾರ್ಚ್ 17 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ನಡೆಸಿದ ವಿಡಿಯೋ ಸಂವಾದದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪಾಲ್ಗೊಂಡಿರುವುದು. ಈ ಸಂದರ್ಭದಲ್ಲಿ ಆರೋಗ್ಯ ಸಚಿವರಾದ ಡಾ. ಕೆ. ಸುಧಾಕರ್, ಗೃಹ ಸಚಿವರಾದ ಬಸವರಾಜ ಬೊಮ್ಮಾಯಿ, ಮುಖ್ಯ ಕಾರ್ಯದರ್ಶಿಗಳಾದ ಪಿ.ರವಿಕುಮಾರ್ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು



ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ **KCET, NEET** ಮತ್ತು **JEE** ಪರೀಕ್ಷೆಗಳಿಗೆ ಸಿದ್ಧತಾ ಸಾಮಗ್ರಿಯನ್ನು ಒದಗಿಸುವ ನಿಟ್ಟಿನಲ್ಲಿ ಸಿದ್ಧಪಡಿಸಲಾಗಿರುವ **GetCETgo (http://www.getcetgo.in)** ಎಂಬ ವೆಬ್ ಪೋರ್ಟಲ್‌ಅನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಾರ್ಚ್ 22 ರಂದು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಾ: ಸಿ.ಎನ್. ಅಶ್ವತ್ಥ ನಾರಾಯಣ, ಆರೋಗ್ಯ ಸಚಿವರಾದ ಡಾ: ಕೆ. ಸುಧಾಕರ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಸುರೇಶ್ ಕುಮಾರ್ ಉಪಸ್ಥಿತರಿದ್ದರು.

Download From : www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ–04 • ಸಂಚಿಕೆ–07 • ಏಪ್ರಿಲ್ 2021

ಏಪ್ರಿಲ್
2021




ಆರ್ಥಿಕ ಸಂಕಷ್ಟಗಳ ಸವಾಲುಗಳ ಮಧ್ಯೆ **ಸಮತೋಲನದ ಬಜೆಟ್**
• ಮಾಧವ




ವಿದುರಾಶ್ವತ್ಥದಲ್ಲಿ **ಸ್ವಾತಂತ್ರ್ಯದ ಅಮೃತ ಮಹೋತ್ಸವ**
• ಎಂ.ಕೃಷ್ಣಪ್ಪ ಕೆವಿಎನ್‌ಹಳ್ಳಿ

17 ಅಂತರರಾಷ್ಟ್ರೀಯ ಮಾರುಕಟ್ಟೆ ವಿಸ್ತರಣೆಗೆ ಮುಂದಾದ **ಕರಕುಶಲ ಅಭಿವೃದ್ಧಿ ನಿಗಮ**
• ಜಡಿಯಪ್ಪ ಗೆದ್ಲಗಟ್ಟಿ

25 ಕೋವಿಡ್ -19 ಎರಡನೇ ಅಲೆ: **ಇರಲಿ ಜಾಗ್ರತೆ**
• ಡಾ. ಎಸ್.ಎಂ.ತಿಮ್ಮಾಪೂರ

28 ಕೋವಿಡ್ ವಿರುದ್ಧದ ಕದನಕ್ಕೆ ಭರ್ತಿ **ಒಂದು ವರ್ಷ**
• ಬಿ. ಸಮೀವುಲ್ಲಾ




ಕೋವಿಡ್ ಲಸಿಕೆ ಅಭಿಯಾನದಲ್ಲಿ **ಕರ್ನಾಟಕದ ಮುನ್ನಡೆ**
• ಕೆ. ವಿಶ್ವನಾಥ್




**ಅಂಕಿತ ಮಾಧ್ಯಮಕ್ಕೆ ಅಂಕೆ ಇದೆಯೇ**
• ಡಿ.ಪಿ.ಮುರಳೀಧರ್

33 ಪುಸ್ತಕ ಪ್ರಾಧಿಕಾರದ **ಅಧ್ಯಕ್ಷರೊಂದಿಗೆ ಮಾತು ಮಂಥನ**
• ಚಂದ್ರಮುಖಿ

43 **ಅರಿವಿನೆಡೆಗೆ ಭಾರತ ಭಾಗ್ಯ ವಿಧಾತನ ನಡಿಗೆ**
• ಮಂಜುನಾಥ ಡಿ. ಡೊಳ್ಳಿನ

47 'ಯುಗಾದಿ' ನಿಸರ್ಗದ ಸೊಬಗಿನೊಂದಿಗೆ ವೈಜ್ಞಾನಿಕವಾಗಿ **ಆಚರಣೆ**
• ಪ್ರೊ.ಮಂಜುನಾಥ ಉಲವತ್ತಿ ಶೆಟ್ಟರ್

50 ಪದಬಂಧ-17




ಕರಿ ಬಂಗಾರದಿಂದ **ಬಾಳು ಬಂಗಾರ**
• ಡಾ. ರವಿ ಪ್ರಸಾದ್ ಸಜ್ಜನ್. ಎಂ

**ಪ್ರಧಾನ ಸಂಪಾದಕರು**
**ಡಾ|| ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

**ಉಪ ಸಂಪಾದಕರು**
**ಬಿ. ಜೆ. ಪೂರ್ಣಿಮ**

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್
ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ|| ರಾಜ್‌ಕುಮಾರ್ ರಸ್ತೆ, ರಾಜಾಜಿನಗರ,
ಬೆಂಗಳೂರು – 560 010

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Download From : www.kpscvaani.com

# ನಿಮ್ಮ ಅನಿಸಿಕೆ

ಜನಸಾಮಾನ್ಯರ ಬವಣೆ ನೀಗಿಸುವುದರಲ್ಲಿ ಹೊಸ ಮರಳು ನೀತಿ–2020 ರ ಲೇಖನ ಸೊಗಸಾಗಿ ಮೂಡಿ ಬಂದಿದೆ. ಉಮೇಶ್ ಕೋಲಿಗೆರೆ ಅವರು ತಮ್ಮ ಲೇಖನದಲ್ಲಿ ಜನಸಾಮಾನ್ಯರಿಗೆ ಈ ನೀತಿಯಿಂದ ದೊರೆಯಬಹುದಾದ ಮರಳು ನೀತಿಯ ಅನುಕೂಲಗಳ ಬಗ್ಗೆ ತಿಳಿಸಿರುವುದು ತುಂಬಾ ಸಹಕಾರಿಯಾಗಿದೆ.

ನೂತನ ಮರಳು ನೀತಿಯಲ್ಲಿ ಜನಸಾಮಾನ್ಯರಿಗೆ ಮರಳು ಸಾಗಾಣೆಕೆಯಲ್ಲಿ ಅನುಕೂಲವಾಗುವ ನಿಟ್ಟಿನಲ್ಲಿ ವ್ಯವಸ್ಥಿತವಾದ ಪದ್ಧತಿಯನ್ನು ಜಾರಿಗೆ ತಂದಿರುವುದು ಸಂತೋಷದ ವಿಚಾರ. ಸರ್ಕಾರ ಕೈಗೊಂಡಿರುವ ಈ ಹೊಸ ಮರಳು ನೀತಿಗೆ ನನ್ನ ಅಭಿನಂದನೆಗಳು.

**–ಜವರೇಗೌಡ,** ಹುಣಸೂರು

---

ಮಾರ್ಚ್ 2021 ರ ವಾರ್ತಾ ಜನಪದ ಸಂಚಿಕೆಯಲ್ಲಿ ಚಂದ್ರಮುಖಿ ಅವರು ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರೊಂದಿಗೆ ನಡೆಸಿರುವ ಸಂದರ್ಶನ ನಿಗಮದ ಕಾರ್ಯಾಚಟುವಟಿಕೆಯ ಮೇಲೆ ಬೆಳಕು ಚೆಲ್ಲಿದೆ. ತುಂಬಾ ನಿರ್ಗತಿಕರು, ನಾಗರೀಕ ಪ್ರಪಂಚದಿಂದ ವಂಚನೆಗೆ ಒಳಗಾಗಿರುವ ಹೆಣ್ಣು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಟೊಂಕಕಟ್ಟಿ ನಿಂತಿರುವ ನಿಗಮದ ಅಧ್ಯಕ್ಷರಾದ ಶ್ರೀಮತಿ ಶಶಿಕಲಾ ಟೆಂಗಳೆಯವರ ಕಾರ್ಯ ವೈಖರಿ ಎಲ್ಲರೂ ಮೆಚ್ಚುವಂತ ಸಂಗತಿಯೇ ಸರಿ.

ಅವರು ಬಳ್ಳಾರಿ ಜಿಲ್ಲೆಯ ದೇವದಾಸಿಯರು ಚಿಕ್ಕಿ ತಯಾರಿಕೆ ಘಟಕ ಸ್ಥಾಪಿಸಲು ನೆರವು ನೀಡಿರುವುದಲ್ಲದೆ, ಸಮಾಜದ ದುರ್ಬಲ, ಶೋಷಿತ ಮಹಿಳೆಯರು, ಲೈಂಗಿಕ ಕಾರ್ಯಕರ್ತೆಯರು ಹಾಗೂ ಹೆಚ್.ಐ.ವಿ ಪೀಡಿತರ ಮನ ಪರಿವರ್ತನೆ ಮಾಡುವ ಮೂಲಕ ಅವರಿಗೆ ಮಾರ್ಗದರ್ಶಿಯಾಗಿರುವುದು ಮೆಚ್ಚುವ ಸಂಗತಿ.

**–ಯಶೋಧ,** ನಂಜನಗೂಡು

ರಾಜ್ಯದ ತೋಟಗಾರಿಕೆ ಇಲಾಖೆಯು ಅನ್ನದಾತರ ಬೆಳೆಗಳಿಗೆ ಇಸ್ರೇಲ್ ಮಾದರಿಯ ಎರೆಜಲ ಮತ್ತು ಎರೆಗೊಬ್ಬರದ ಘಟಕದ ಬಗ್ಗೆ ಪ್ರಕಟಿಸಲಾಗಿರುವ ಲೇಖನ ರೈತರಿಗೆ ಸಹಕಾರಿಯಾಗಿ ಮೂಡಿಬಂದಿದೆ. ಕೊಪ್ಪಳ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ತೋಟಗಾರಿಕೆ ಇಲಾಖೆಯು ರೈತರಿಗೆ ಮಾದರಿಯಾಗಲು ಈ ಘಟಕವನ್ನು ಸ್ಥಾಪಿಸಿರುವುದು ನಿಜಕ್ಕೂ ಶ್ಲಾಘನೀಯ ಸಂಗತಿ.

**–ಬಸವಣ್ಣ ಗೌಡರ್,** ಹುಬ್ಬಳ್ಳಿ




ಮಾರ್ಚ್ 2021 ಸಂಚಿಕೆಯಲ್ಲಿ ಪ್ರಕಟವಾಗಿರುವ "ಪರಿಸರ ಪ್ರೇಮದತ್ತ ಬೆಳಕು ಚೆಲ್ಲುವ ಹಕ್ಕಿ ಕಥೆ" ನಾಟಕದ ವಿಮರ್ಶಾ ಲೇಖನವನ್ನು ಓದುತಿದ್ದರೆ, ನಾಟಕವನ್ನು ನೋಡಿದ ಅನುಭವವನ್ನು ಉಂಟುಮಾಡಿತು. ಮಾನವನ ದುರಾಸೆಗೆ ಪರಿಸರ ಮತ್ತು ಅರಣ್ಯ ಪ್ರದೇಶ ಕ್ಷೀಣಿಸುತ್ತಿರುವುದರಿಂದ ಪ್ರಾಣಿ–ಪಕ್ಷಿಗಳ ಸಂಕುಲಕ್ಕೆ ಅಪಾರ ಪ್ರಮಾಣದಲ್ಲಿ ಹಾನಿಯಾಗುತ್ತಿದೆ.

ಪರಿಸರ ನಾಶದಿಂದ ತನ್ನ ಬಂಧು–ಬಾಂಧವರನ್ನು ಕಳೆದುಕೊಂಡು ನಗರ ಸೇರುವ ಹಕ್ಕಿಯು, ಮರಗಳ ಕೊರತೆಯಿಂದಾಗಿ ಮೊಬೈಲ್ ಟವರ್ ಮೇಲೆ ಗೂಡು ಕಟ್ಟಿಕೊಂಡರೆ, ಮಾನವ ಆ ಹಕ್ಕಿ ಗೂಡನ್ನು ಕಿತ್ತು ಎಸೆಯುತ್ತಾನೆ. ಆಗ ಯಾರಿಗಾದರು ಕರಳು ಚುರ್ ಎನ್ನದೆ ಇರದು. ಮಾನವನಿಂದಾಗಿಯೇ ಕಾಡು ತೊರೆದು ನಾಡನ್ನು ಆಶ್ರಯಿಸುವ ಹಕ್ಕಿಯು ನಾಟಕದ ಕೊನೆಯಲ್ಲಿ ಹಾಗಾದರೆ ನಮಗೆ ಬುದುಕುವ ಹಕ್ಕು ಇಲ್ಲವೇ? ಎಂದು ಪ್ರಶ್ನಿಸುವುದು ಕಣ್ಣಂಚಿನಲ್ಲಿ ನೀರು ತರಿಸುತ್ತದೆ. ಮುಂದೆಯೂ ಕೂಡ ಸಾಂಸ್ಕೃತಿಕ ಚಟುವಟಿಕೆ ಕುರಿತಂತೆ ಇನ್ನೂ ಹೆಚ್ಚು ಲೇಖನಗಳನ್ನು ತಮ್ಮ ಪತ್ರಿಕೆಯಿಂದ ನಿರೀಕ್ಷಿಸುತ್ತೇನೆ.

–ರೇಖಾ, ಚನ್ನಪಟ್ಟಣ

ಪಂಚಭೂತಗಳಲ್ಲಿ ಜಲ ಮಹತ್ವದ ಸ್ಥಾನ ಪಡೆದಿದೆ. ಪ್ರಪಂಚದಲ್ಲಿ ಪ್ರತಿಯೊಬ್ಬ ಮಾನವರಿಗೂ, ಪ್ರಾಣಿ–ಪಕ್ಷಿಗಳಿಗೂ, ಗಿಡಮರಗಳಿಗೂ ನೀರು ಅವಶ್ಯಕ. ನೀರಿಲ್ಲದೆ ಬದುಕಿಲ್ಲ, ನೀರನ್ನು ಸದ್ಬಳಕೆ ಮಾಡಿ ಮುಂದಿನ ಪೀಳಿಗೆಗೆ ಉಳಿಸುವುದು ನಮ್ಮೆಲ್ಲರ ಕರ್ತವ್ಯ.

ನೀರುಳಿಸಲು ನಾವೇನು ಮಾಡಬಹುದು, ತಿಳಿದೋ ತಿಳಿಯದೆಯೋ ಬಹಳ ಜನರು ನೀರಿನ ದುರ್ಬಳಕೆ ಮಾಡುವವರು ಭೂಮಿಯಲ್ಲಿರುವ ನೀರನ್ನು ಬೋರ್‌ವೆಲ್ ಮುಖಾಂತ ಬಳಸುವುದರಿಂದ ಅಂತರ್ಜಲ ಕುಸಿಯುತ್ತಿದೆ. ಜನಸಂಖ್ಯೆ ವಿಪರೀತ ಬೆಳೆಯುತ್ತಿರುವುದರಿಂದ ನೀರಿನ ಅವಶ್ಯಕತೆ ತುಂಬಾ ಹೆಚ್ಚುತ್ತಿದೆ. ಹಾಗಾಗಿ ನಾವು ಕಡಿಮೆ ನೀರು ಬಳಸಿ ನೀರನ್ನು ಉಳಿಸುವ ಸಂಕಲ್ಪವನ್ನು ಮೊದಲು ಮಾಡಬೇಕು. "ಜಲ ಸಂಪನ್ಮೂಲ ರಕ್ಷಣೆ ನಮ್ಮೆಲ್ಲರ ಹೊಣೆ" ಲೇಖನ ಓದಿ ಪ್ರತಿಯೊಬ್ಬರು ಅದರಂತೆ ನಡೆಯಬೇಕು. ಲೇಖನ ತುಂಬಾ ಮಹತ್ವದ್ದಾಗಿದೆ.

**–ಮಲ್ಲಿಕಾರ್ಜುನ ಪ. ಯಲಗೋಡ,**
**ಹೊಸಪೇಟೆ**

---

2021 ನೇ ಸಾಲಿನ ಪದ್ಮ ಪ್ರಶಸ್ತಿಗಳಿಗೆ ಭಾಜನರಾದ ಕರ್ನಾಟಕ ರಾಜ್ಯದ ಮಹಾನೀರ ಪರಿಚಯವನ್ನು ಪರಿಚಯಿಸಿದ ಲೇಖನ ಸಮಯೋಚಿತ್ತವಾಗಿತ್ತು. "ನಮ್ಮ ಹಿರಿಯ ಮಾತೊಂದಿತ್ತು, ಗೌರವ ಎನ್ನುವುದು ನಾವು ಕೇಳಿ ಪಡೆಯುವಂಥದ್ದಲ್ಲ, ಅದಾಗಿಯೇ ಬರುವಂಥದ್ದು" ಎಂದು ಹೇಳುತ್ತಾ... ಲೇಖಕರು ಲೇಖನವನ್ನು ಪ್ರಾರಂಭಿಸಿರುವುದು ಪದ್ಮ ಪ್ರಶಸ್ತಿಗೆ ಭಾಜನರಾದ ಗಣ್ಯರಿಗೆ ಹೇಳಿ ಮಾಡಿಸಿದಂತೆ ಇತ್ತು.

ಇತ್ತೀಚೆಗೆ ಹಣ ಮತ್ತು ಅಂತಸ್ತಿನಿಂದ ತಮಗೆ ಬೇಕಾದ ಪ್ರಶಸ್ತಿ, ಡಾಕ್ಟರೇಟ್, ಗೌರವಗಳನ್ನು ಪಡೆದುಕೊಳ್ಳಬಹುದು ಎಂದು ಎಲ್ಲರೂ ಮಾತನಾಡಿಕೊಳ್ಳುವುದು ಸಾಮಾನ್ಯವಾಗಿದೆ. ಆದರೆ ಈ ಸಾಲಿನ ಪದ್ಮ ಪ್ರಶಸ್ತಿಗೆ ಕರುನಾಡಿನಿಂದ ಆಯ್ಕೆಯಾಗಿರುವ ವೈದ್ಯರಾದ ಡಾ. ಬಿ.ಎಂ.ಹೆಗ್ಡೆ, ಗಾಯಕರಾದ ಡಾ. ಎಸ್.ಪಿ.ಬಿ, ನಾಟಕಕಾರರಾದ ಡಾ. ಚಂದ್ರಶೇಖರ ಕಂಬಾರ, ಜಾನಪದ ಕಲಾವಿದರಾದ ಮಂಜಮ್ಮ ಜೋಗತಿ, ಆಧ್ಯಾತ್ಮಿಕರಾದ ಆರ್. ಎಲ್. ಕಶ್ಯಪ್, ಕ್ರೀಡಾ ಪಟುವಾದ ಕೆ.ವೈ. ವೆಂಕಟೇಶ್ ಅವರುಗಳು ನೂರಕ್ಕೆ ನೂರು ಅರ್ಹರಾದವರು ಎಂಬುದರಲ್ಲಿ ಎರಡು ಮಾತಿಲ್ಲ. ಲೇಖನದಲ್ಲಿ ಇವರ ಕುರಿತ ಪರಿಚಯ ಚಿಕ್ಕದಾಯಿತು ಎನಿಸಿತು.

**–ಮಂಜುಳಾ,** ಮೈಸೂರು


'ವಾರ್ತಾ ಜನಪದ' ಮಾಸಿಕ ಈಗ
**www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Download From : www.kpscvaani.com



## ಸಂಪಾದಕೀಯ...

# ಆರ್ಥಿಕ ಸಂಕಷ್ಟದಲ್ಲೂ ಸಮಪಾಲು-ಸಮಬಾಳು

ಪ್ರಿಯ ಓದುಗ ಮಿತ್ರರೆ,

ಮಾರ್ಚ್ 8 ವಿಶೇಷ ದಿನವಾಗಿತ್ತು, ಎಂದರೆ ತಪ್ಪಾಗಲಾರದು. ಅಂದು ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿಗಳು 8ನೇ ಬಾರಿ ಬಜೆಟ್ ಮಂಡಿಸಿದರು. ಅಲ್ಲದೆ ಅಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕೂಡ. ಹಾಗಾಗಿ ಬಜೆಟ್‌ನಲ್ಲಿ ಮಹಿಳೆಯರನ್ನು ಸಬಲರನ್ನಾಗಿಸುವ ನಿಟ್ಟಿನಲ್ಲಿ ನಾನಾ ಯೋಜನೆಗಳನ್ನು ಪ್ರಕಟಿಸಿದರು.

ಈ ಬಾರಿಯ ಬಜೆಟ್ ತುಂಬಾ ಸವಾಲಿನಿಂದ ಕೂಡಿತ್ತು. ಕಾರಣ, ಕಳೆದ ವರ್ಷ ಕೋವಿಡ್-19 ನಿಂದ ಎದುರಾದ ಆರ್ಥಿಕ ಸಂಕಷ್ಟ. ಇಂತಹ ಆರ್ಥಿಕ ಹಿಂಜರಿತದ ಮಧ್ಯೆಯೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆ ಎಂದು ಆರು ವಲಯಗಳಾಗಿ ವಿಂಗಡಣೆ ಮಾಡಿ ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಅನುದಾನವನ್ನು ಒದಗಿಸುವ ಮೂಲಕ ಸಮತೋಲಿತ ಬಜೆಟ್‌ಅನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಂಡಿಸಿದ್ದಾರೆ.

ಕೋವಿಡ್-19 ಹಿನ್ನೆಲೆಯಲ್ಲಿ ಸಂಕಷ್ಟದಲ್ಲಿರುವ ಜನರಿಗೆ ಆರ್ಥಿಕ ಹೊರೆ ಆಗಬಾರದು ಎಂಬ ನಿಟ್ಟಿನಲ್ಲಿ ಈ ವರ್ಷ ರಾಜ್ಯದ ತೆರಿಗೆದಾರರ ಮೇಲೆ ಒಂದೇ ಒಂದು ಪೈಸೆ ತೆರಿಗೆಯನ್ನು ಹೇರಲಿಲ್ಲ. ಹಾಗಂತ ಬಜೆಟ್ ಗಾತ್ರವನ್ನು ಕೂಡ ಕುಗ್ಗಿಸಲಿಲ್ಲ. ಇಂತಹ ಸಂಕಷ್ಟದಲ್ಲೂ 2,46,207 ಕೋಟಿ ರೂಗಳ ದಾಖಲೆ ಗಾತ್ರದ ಬಜೆಟ್ ಅನ್ನು ನೀಡುವ ಮೂಲಕ ರಾಜ್ಯದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಬರೆದರು.

ಕಳೆದ ವರ್ಷ ನೈಸರ್ಗಿಕ ವಿಕೋಪ ಮತ್ತು ಕೋವಿಡ್-19 ಹಿನ್ನೆಲೆಯಲ್ಲಿ ನಿರೀಕ್ಷಿಸಿದಷ್ಟು ಆದಾಯ ಬರದಿದ್ದರೂ ಕೂಡ ಜನತೆಗೆ ಹೊರೆಯಾಗದ ರೀತಿಯಲ್ಲಿ ಕಳೆದ ವಷಕ್ಕೆ ಹೋಲಿಕೆ ಮಾಡಿದರೆ 8,314 ಕೋಟಿ ರೂ ಹೆಚ್ಚಿನ ಗಾತ್ರದ ಬಜೆಟ್ ಅನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನಾಡಿನ ಜನತೆಗೆ ನೀಡಿದ್ದಾರೆ. ಮಹಿಳಾ ದಿನಾಚರಣೆಯಂದು ಮಂಡನೆಯಾದ ಬಜೆಟ್‌ನಲ್ಲಿ ವಿವಿಧ ಮಹಿಳಾ ಉದ್ದೇಶಿತ ಯೋಜನೆಗಳಿಗೆ 37,188 ಕೋಟಿ ರೂ ಅನುದಾದವನ್ನು ಒದಗಿಸಲಾಗಿದೆ. ಅಲ್ಲದೆ ಈ ಸಾಲಿನ ಬಜೆಟ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಆಯವ್ಯಯವನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.

ದೇಶದ ಬೆನ್ನೆಲುಬು ನಮ್ಮ ರೈತ. ಹಾಗಾಗಿ ಪ್ರತಿ ಆಯವ್ಯಯದಲ್ಲೂ ಕೃಷಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಈ ಬಾರಿ ಕೃಷಿ ಮತ್ತು ಪೂರಕ ವಲಯಗಳಿಗೆ 31,028 ಕೋಟಿ ರೂ ಅನುದಾನವನ್ನು ಒದಗಿಸಲಾಗಿದೆ. ತಳಮಟ್ಟದಲ್ಲಿ ಕೃಷಿ ಕ್ಷೇತ್ರವನ್ನು ಬಲಪಡಿಸಲು ಒತ್ತು ನೀಡುವ ಜೊತೆಗೆ, ಹೊಸ ಕೃಷಿ ನೀತಿ ಜಾರಿಗೆ ಕ್ರಮಕೈಗೊಳ್ಳಲಾಗಿದೆ.

ಹೊಸ ಹೊಸ ಯೋಜನೆಗಳನ್ನು ನೀಡಿ ಜನಪ್ರಿಯತೆ ಪಡೆಯುವ ಬದಲು "ಸಮಪಾಲು-ಸಮಬಾಳು" ಎಂಬ ಅವರ ಪ್ರೀತಿಯ ಘೋಷವಾಕ್ಯದಂತೆ ಈ ಸಾಲಿನ ಬಜೆಟ್ ಅನ್ನು ಮಂಡಿಸಿ, ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಕೋವಿಡ್-19 ಸಾಂಕ್ರಾಮಿಕ ರೋಗದ ಮೊದಲ ಅಲೆಯನ್ನು ತಡೆಯುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ. ಅದೇ ರೀತಿಯಲ್ಲಿ ಎರಡನೇ ಅಲೆಯನ್ನು ತಡೆಯುವ ಕಾರ್ಯದಲ್ಲಿ ತೊಡಗಿದೆ. ಸಾರ್ವಜನಿಕರು ಕೂಡ ಲಸಿಕೆಯನ್ನು ಹಾಕಿಸಿಕೊಳ್ಳುವ ಜೊತೆಗೆ ಕೋವಿಡ್-19 ತಡೆಗೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಇಲ್ಲದಿದ್ದರೆ ಕೋವಿಡ್ ಯೋಧರು, ನಾವು-ನೀವು ಮಾಡಿದ ಶ್ರಮ, ಹೋರಾಟ ಎಲ್ಲಾ ವ್ಯರ್ಥವಾಗುತ್ತದೆ. ಹಾಗಾಗಿ ಈ ಹೋರಾಟಕ್ಕೆ ನಾಡಿನ ಜನರ ಸಹಕಾರ ಅತ್ಯಗತ್ಯ ಎಂಬುದನ್ನು ಮರೆಯದಿರಿ.

ಡಾ|| ಪಿ. ಎಸ್. ಹರ್ಷ, ಐಪಿಎಸ್
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Download From : www.kpscvaani.com

# ಆರ್ಥಿಕ ಸಂಕಷ್ಟಗಳ ಸವಾಲುಗಳ ಮಧ್ಯೆ ಸಮತೋಲನದ ಬಜೆಟ್




**ಇಡೀ ಜಗದಗಲಕ್ಕೆ ವ್ಯಾಪಿಸಿ 'ನ ಭೂತೊ, ನ ಭವಿಷ್ಯತಿ' ಎಂಬಂತೆ ಮನುಕುಲವನ್ನೇ ತೀವ್ರ ಸ್ವರೂಪದ ಸಂಕಷ್ಟಕ್ಕೆ ದೂಡಿದ್ದ 'ಕೋವಿಡ್-19' ಪಿಡುಗು, ಅದಕ್ಕೆ ಕಡಿವಾಣ ಹಾಕಲು ಜಾರಿಗೊಳಿಸಲಾಗಿದ್ದ ಸಾಮಾಜಿಕ - ಆರ್ಥಿಕ ದಿಗ್ಬಂಧನಗಳ (ಲಾಕ್‌ಡೌನ್) ಕಾರಣದಿಂದಾಗಿ ಆರ್ಥಿಕ ಚಟುವಟಿಕೆಗಳೆಲ್ಲ ತಿಂಗಳುಗಳ ಕಾಲ ಸ್ಥಗಿತಗೊಂಡಿದ್ದ ಮತ್ತು ನಂತರದ ಹೊಸ ಸಹಜ ದಿನಮಾನಗಳಲ್ಲಿ ಎದುರಾಗಿರುವ ಹತ್ತಾರು ಸವಾಲುಗಳ ಮಧ್ಯೆ ಮಂಡನೆಯಾಗಿರುವ ಕರ್ನಾಟಕ ರಾಜ್ಯ ಸರ್ಕಾರದ 2021-2022ನೇ ಹಣಕಾಸು ವರ್ಷದ ಬಜೆಟ್ ಪ್ರಸ್ತಾವಗಳು ರೈತಾಪಿ ವರ್ಗ ಮತ್ತು ಮಹಿಳೆಯರ ಬದುಕು ಹಸನುಗೊಳಿಸುವ, ಅವರನ್ನು ಸಬಲಗೊಳಿಸುವ ಉದ್ದೇಶ ಹೊಂದಿವೆ.**

ಮಾಧವ



Download From : www.kpscvaani.com

ಹಣಕಾಸು ಸಚಿವರೂ ಆಗಿರುವ ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ಸಂಪನ್ಮೂಲಗಳ ಇತಿಮಿತಿಯಲ್ಲಿಯೇ ರಾಜ್ಯ ಸರ್ಕಾರದ ಹಣಕಾಸು ಪರಿಸ್ಥಿತಿಯಲ್ಲಿ ಸಮತೋಲನ ಸಾಧಿಸುವ ತೀವ್ರ ಕಸರತ್ತು ಮಾಡಿದ್ದಾರೆ. **'ಕೋವಿಡ್-19'** ಪಿಡುಗು ತಂದೊಡ್ಡಿದ್ದ ಸಂಕಷ್ಟಗಳು ಮತ್ತು ನಂತರದ ದಿನಗಳಲ್ಲಿ ರಾಜ್ಯದಲ್ಲಿನ ಆರ್ಥಿಕ ಚಟುವಟಿಕೆಗಳು ನಿಧಾನವಾಗಿ ಚೇತರಿಸಿಕೊಳ್ಳುತ್ತಿರುವ, ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ಕಾಣುತ್ತಿರುವ ಸದ್ಯದ ಸಂದರ್ಭದಲ್ಲಿ ಮಂಡಿಸಿರುವ ಬಜೆಟ್ ಬಹುತೇಕ ಸಮತೋಲನದಿಂದ ಕೂಡಿದೆ. ಬಜೆಟ್ ಗಾತ್ರ ಕುಗ್ಗಿಸಿಲ್ಲ. ರಾಜ್ಯದ ಜನತೆ ಮೇಲೆ ಹೊಸ ತೆರಿಗೆಗಳನ್ನೂ ವಿಧಿಸಿಲ್ಲ. **'ಜನಪ್ರಿಯ'**ತೆಯ ಹಳಿಯ ಮೇಲೆ ಬಜೆಟ್ ಕೊಂಡೊಯ್ಯದೆ ಜಾಣ್ಮೆ ತೋರಲಾಗಿದೆ.




ಕೊರೊನಾ ವೈರಾಣು ಸಂಕಷ್ಟದ ಮಧ್ಯೆಯೂ ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ, ಮಹಿಳೆಯರು ಸೇರಿದಂತೆ ಹಲವು ವಲಯಗಳಿಗೆ ಆದ್ಯತೆ ನೀಡಿರುವ ರೂ 2,46,207 ಕೋಟಿ ಮೊತ್ತದ ಬಜೆಟ್ ಇದಾಗಿದೆ. ಹಿಂದಿನ ಹಣಕಾಸು ವರ್ಷದ (2020-21) ಬಜೆಟ್ ಗಾತ್ರಕ್ಕೆ ಹೋಲಿಸಿದರೆ ಈ ಬಜೆಟ್ ಗಾತ್ರವು ರೂ 8,314 ಕೋಟಿ (ಶೇ3.5ರಷ್ಟು) ಹೆಚ್ಚಳವಾಗಿದೆ.

ಸಮಾಜದ ಅಥವಾ ಉದ್ದಿಮೆ ವಲಯದ ಯಾವುದೇ ವರ್ಗಗಳ ಮೇಲೆ ಹೊಸ ತೆರಿಗೆಗಳ ರೂಪದಲ್ಲಿ ಹೆಚ್ಚುವರಿ ಆರ್ಥಿಕ ಹೊರೆಯನ್ನು ವಿಧಿಸಲು ಹಿಂದೇಟು ಹಾಕಿರುವ ಮುಖ್ಯಮಂತ್ರಿಗಳ ಧೋರಣೆಯು ಸದ್ಯದ ಸಂಕಷ್ಟದ ಸಂದರ್ಭದಲ್ಲಿ ಎಲ್ಲರ ಪಾಲಿಗೂ ಹೆಚ್ಚು ಸಮಾಧಾನ ತರುವಂತಹ ಸಂಗತಿಯಾಗಿದೆ. ಜನಸಾಮಾನ್ಯರಿಂದ ಹಿಡಿದು ಉದ್ಯಮಿಗಳವರೆಗೆ ಇದು ಮೆಚ್ಚುಗೆಗೆ ಪಾತ್ರವಾಗಿದೆ. **'ಕೋವಿಡ್-19'** ಪಿಡುಗು ತಂದಿತ್ತ ಸಂಕಷ್ಟದಿಂದ ಬಸವಳಿದಿರುವ ರಾಜ್ಯದ ಜನರಿಗೆ ಊರುಗೋಲಾಗಿ ನಿಂತು ರಾಜ್ಯವನ್ನು ಅಭಿವೃದ್ಧಿಯ ಹೊಸ ಪಥದತ್ತ ಕೊಂಡೊಯ್ಯುವ ಸಂಕಲ್ಪ ಸಾಕಾರಗೊಳಿಸುವನಿಟ್ಟಿನಲ್ಲಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ಪರಿಶ್ರಮಪಟ್ಟಿರುವುದು ಬಜೆಟ್ ಪ್ರಸ್ತಾವಗಳಲ್ಲಿ ಎದ್ದು ಕಾಣುತ್ತದೆ.

**ಹೊಸ ಹೊಸ ಯೋಜನೆಗಳನ್ನು ನೀಡಿ ಜನಪ್ರಿಯತೆ ಪಡೆಯುವ ಬದಲು "ಸಮಪಾಲು-ಸಮಬಾಳು" ಎಂಬ ತಮ್ಮ ಪ್ರೀತಿಯ ಘೋಷವಾಕ್ಯದಂತೆ ಕೋವಿಡ್-19ರ ಸಂಕಷ್ಟದ ಸಂದರ್ಭದಲ್ಲಿಯೂ ಕೂಡ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸರ್ವರ ಲೇಸನ್ನು ಬಯಸುವಂತಹ ಬಜೆಟ್ ಅನ್ನು ಮಂಡಿಸಿದ್ದಾರೆ. ಅಲ್ಲದೆ ಎಲ್ಲಾ ಜಾತಿ ಮತ್ತು ಜನಾಂಗಗಳ ಕಲ್ಯಾಣಕ್ಕೆ ಪೂರಕವಾದ ಅನುದಾನವನ್ನು ಒದಗಿಸುವ ಜೊತೆಗೆ ಜನತೆಗೆ ಹೊರೆಯಾಗದ ರೀತಿಯಲ್ಲಿ ಆಯವ್ಯಯವನ್ನು ಮಂಡಿಸಿ, ಆರ್ಥಿಕ ತಜ್ಞರಿಂದ ಮೆಚ್ಚುಗೆಯನ್ನು ಪಡೆದಿದ್ದಾರೆ.**

ಬಜೆಟ್‌ನಲ್ಲಿ ಸಾಲಗಳನ್ನು ಮನ್ನಾ ಮಾಡುವ ಪರಂಪರೆಯೇ ರಾಜ್ಯದಲ್ಲಿ ಇದ್ದರೂ, ಈ ಬಾರಿಯ ಬಜೆಟ್‌ನಲ್ಲಿ ಅಂತಹ ಘೋಷಣೆಗಳು ಇಲ್ಲದಿರುವುದು ಈ ಸಾಲಿನ ಬಜೆಟ್‌ನ ಇನ್ನೊಂದು ವಿಶೇಷತೆಯಾಗಿದೆ. ಸಾಲ ಮನ್ನಾ ಪ್ರಕಟಣೆಗೆ ಅಲ್ಪ ವಿರಾಮ ಹಾಕಿರುವುದು ರಾಜ್ಯದ ಆರ್ಥಿಕ ಶಿಸ್ತು ಕಾಯ್ದುಕೊಳ್ಳುವ ಆಶಯಕ್ಕೆ ಪೂರಕವಾಗಿದೆ.

**'ಕೋವಿಡ್-19'** ಪಿಡುಗಿನ ತೀವ್ರ ಹೊಡೆತ, ಆರ್ಥಿಕ ಚಟುವಟಿಕೆಗಳ ಮೇಲಿನ ಪ್ರತಿಕೂಲ ಪರಿಣಾಮಗಳು, ಪೆಟ್ರೋಲ್, ಡೀಸೆಲ್ ತುಟ್ಟಿ, ಅಗತ್ಯ ವಸ್ತುಗಳ ಬೆಲೆಗಳ ಏರಿಕೆ, ತೆರಿಗೆ ವಸೂಲಿಯಲ್ಲಿ ಖೋತಾ ಮತ್ತಿತರ ಅನೇಕ ಸವಾಲುಗಳ ಮಧ್ಯೆ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ 8ನೇ ಬಜೆಟ್ ಮಂಡನೆ





Download From : www.kpscvaani.com

ರೂಪದಲ್ಲಿ 2021–22ನೇ ಹಣಕಾಸು ವರ್ಷದ ಆಯವ್ಯಯವನ್ನು ತೃಪ್ತಿಕರ ರೂಪದಲ್ಲಿ ರಾಜ್ಯದ ಜನರ ಮುಂದೆ ಮಂಡಿಸಿದ್ದಾರೆ.

**'ಕೋವಿಡ್–19'** ಪಿಡುಗಿನಿಂದಾಗಿ ಆರ್ಥಿಕ ಚಟುವಟಿಕೆಗಳು ಮಂದಗತಿಯಲ್ಲಿ ಇರುವುದು ಮತ್ತು ಈ ಪರಿಸ್ಥಿತಿಯು ರಾಜ್ಯ ಸರ್ಕಾರದ ವರಮಾನ ಸಂಗ್ರಹದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದ್ದರೂ, ಮುಂಗಡಪತ್ರದ ಗಾತ್ರವನ್ನು ಕುಗ್ಗಿಸದಿರುವುದು ಗಮನಾರ್ಹ ಸಂಗತಿಯಾಗಿದೆ. ಹೊಸ ತೆರಿಗೆಗಳನ್ನು ವಿಧಿಸಿ ರಾಜ್ಯದ ಜನರ ಮೇಲೆ ಹೊಸ ಹೊರೆಯನ್ನೂ ಹೊರಿಸದಿರುವುದರಿಂದ ಎಲ್ಲ ವರ್ಗದ ಜನತೆ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ. ವೇತನ, ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ಒಳಗೊಂಡಿರುವ ಬದ್ಧ ವೆಚ್ಚಗಳನ್ನೂ ಕಡಿಮೆ ಮಾಡಿಲ್ಲದಿರುವುದೂ ಮಹತ್ವದ ಸಂಗತಿಯಾಗಿದೆ.

ಕೃಷಿ ಕ್ಷೇತ್ರಕ್ಕೆ ಉದ್ದಿಮೆಯ ಸ್ಥಾನಮಾನ ನೀಡುವ ಪ್ರಸ್ತಾವ, ಉದ್ಯಮಶೀಲ ಮಹಿಳೆಯರಿಗೆ ಒತ್ತಾಸೆಯಾಗಿ ನಿಲ್ಲಲು ಹಲವಾರು ರಚನಾತ್ಮಕ ಕ್ರಮಗಳನ್ನು ಕೈಗೊಳ್ಳುವ ಪ್ರಸ್ತಾವಗಳು ಬಜೆಟ್‌ನಲ್ಲಿ ಇವೆ. ಜತೆಗೆ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ ಮತ್ತು ಬೆಂಗಳೂರು ಮಹಾನಗರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ.


### ಮಹಿಳೆಯರ ಸಬಲೀಕರಣ

- ಮಹಿಳಾ ಉದ್ಯಮಿಗಳ ಸಬಲೀಕರಣ
- ಮಹಿಳಾ ಕೇಂದ್ರಿತ ಕಾರ್ಯಕ್ರಮಗಳು
- ಮಹಿಳಾ ಉದ್ಯಮಿಗಳಿಗೆ ಶೇ 4ರ ರಿಯಾಯ್ತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ
- ಸ್ತ್ರೀ–ಶಕ್ತಿ ಗುಂಪುಗಳಿಗೆ ಇ–ಮಾರುಕಟ್ಟೆ ಸೌಲಭ್ಯ
- ನಿರ್ಭಯಾ ಯೋಜನೆಯಡಿ 7,500 ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆ
- ಮಹಿಳೆಯರಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ರೂ 37,188 ಕೋಟಿ ಅನುದಾನ

ವಿಶ್ವದಾದ್ಯಂತ **'ಅಂತರರಾಷ್ಟ್ರೀಯ ಮಹಿಳಾ ದಿನ' (ಮಾರ್ಚ್ 8)** ಆಚರಿಸುವ ದಿನದಂದೇ ಬಜೆಟ್ ಮಂಡಿಸಿರುವ ಬಿ.ಎಸ್. ಯಡಿಯೂರಪ್ಪ ಅವರು ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿರುವುದು ಸಹಜವಾಗಿಯೇ ಗಮನ ಸೆಳೆಯುತ್ತದೆ. ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳಿಗೆ ರೂ 37,188 ಕೋಟಿ ಮೊತ್ತದ ಅನುದಾನ ನಿಗದಿಪಡಿಸಿರುವುದು ಈ ಬಜೆಟ್‌ನ ಇನ್ನೊಂದು ಹೆಚ್ಚುಗಾರಿಕೆಯಾಗಿದೆ.

## ಬಜೆಟ್ ಮುಖ್ಯಾಂಶಗಳು

- ಹೊಸ ಕೃಷಿ ನೀತಿ ಜಾರಿಗೆ ಕ್ರಮ
- ಕೃಷಿ ಉತ್ಪನ್ನ ಬೆಂಬಲ ಬೆಲೆ ಆವರ್ತ ನಿಧಿ ಮೊತ್ತ ರೂ 2,000 ಕೋಟಿಗೆ ಏರಿಕೆ
- ಸಣ್ಣ, ಅತಿಸಣ್ಣ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ 5,000 ದಂತೆ ಗರಿಷ್ಠ ರೂ 10,000 ನೆರವು
- ಪ್ರಾಥಮಿಕ ಅಥವಾ ಮಾರುಕಟ್ಟೆ ಸಹಕಾರ ಸಂಘಗಳು ಪ್ರತಿ ರೈತ ಕುಟುಂಬಕ್ಕೆ ನೀಡುವ ದೀರ್ಘಾವಧಿ ಕೃಷಿ ಸಾಲದಲ್ಲಿ ಗರಿಷ್ಠ ರೂ 2 ಲಕ್ಷದವರೆಗಿನ ಸಾಲಕ್ಕೆ ಶೇ 5ರಷ್ಟು ಬಡ್ಡಿ ವಿನಾಯ್ತಿ
- ಎಲ್ಲ ರೈತರು, ಮೀನುಗಾರರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್
- ರೈತರ ಮನೆ ಬಾಗಿಲಲ್ಲಿ ಮಣ್ಣು, ನೀರಿನ ಪರೀಕ್ಷೆ ನಡೆಸಿ ಸಲಹೆ ನೀಡುವ ಸಂಚಾರಿ ಕೃಷಿ ಹೆಲ್ತ್ ಕ್ಲಿನಿಕ್ ಆರಂಭ
- 1000 ಮೀನುಗಾರ ಮಹಿಳೆಯರಿಗೆ ದ್ವಿಚಕ್ರ ವಾಹನ ವಿತರಣೆ
- ಗ್ರಾಮೀಣ ಪ್ರದೇಶದಲ್ಲಿ 'ಮನೆ ಮನೆಗೆ ಗಂಗೆ' ಯೋಜನೆ ಜಾರಿ
- ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರ ವಿಕೇಂದ್ರಿಕರಣ ಬಲಪಡಿಸಲು ಪಂಚಾಯತ್‌ರಾಜ್ ಆಯುಕ್ತಾಲಯ ರಚನೆ
- ಕೃಷಿ ಉತ್ಪನ್ನಗಳನ್ನು ದೂರದ ಮಹಾನಗರಗಳಿಗೆ ಸಾಗಿಸಲು 'ಕೃಷಿ ರೈಲ್' ಸೌಲಭ್ಯ
- ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳಿಗೆ ರೂ 37,188 ಕೋಟಿ ಅನುದಾನ
- ಮಹಿಳಾ ಉದ್ಯಮಿಗಳಿಗೆ ಶೇ 4ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ
- ಗ್ರಾಮೀಣ ಮಹಿಳಾ ಸ್ವಸಹಾಯ ಸಂಘಗಳ ಮೂಲಕ 60 ಸಾವಿರ ಮಹಿಳೆಯರಿಗೆ ಸ್ವಯಂ ಉದ್ಯೋಗ ಅವಕಾಶದ 'ಸಂಜೀವಿನಿ' ಯೋಜನೆಯ ಅನುಷ್ಠಾನ
- 4 ಕಂದಾಯ ವಿಭಾಗಗಳಲ್ಲಿ ತಾಯಂದಿರ ಎದೆ ಹಾಲಿನ ಬ್ಯಾಂಕ್ ಸ್ಥಾಪನೆ
- ಪ್ರತಿ ಜಿಲ್ಲೆಯಲ್ಲಿ ಗೋಶಾಲೆ ಸ್ಥಾಪನೆ
- ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ರೂ 7,795 ಕೋಟಿ ಮೊತ್ತದ ಅನುದಾನ





Download From : www.kpscvaani.com



**ಇಲಾಖಾವಾರು ಅನುದಾನ (ಕೋಟಿ ರೂ.ಗಳಲ್ಲಿ)**

| | | |
|---|---|---|
| ಶಿಕ್ಷಣ | : | 29,688 |
| ನಗರಾಭಿವೃದ್ಧಿ | : | 27,386 |
| ಜಲ ಸಂಪನ್ಮೂಲ | : | 21,181 |
| ಇಂಧನ | : | 16,515 |
| ಗ್ರಾಮೀಣಾಭಿವೃದ್ಧಿ | : | 16,515 |
| ಕಂದಾಯ | : | 12,384 |
| ಆರೋಗ್ಯ | : | 11,908 |
| ಒಳಾಡಳಿತ ಮತ್ತು ಸಾರಿಗೆ | : | 10,330 |
| ಲೋಕೋಪಯೋಗಿ | : | 10,256 |
| ಸಮಾಜಕಲ್ಯಾಣ | : | 8,864 |
| ಕೃಷಿ ಮತ್ತು ತೋಟಗಾರಿಕೆ | : | 7,297 |
| ಮಹಿಳೆ & ಮಕ್ಕಳ ಕಲ್ಯಾಣ | : | 4,531 |
| ವಸತಿ | : | 2,990 |
| ಆಹಾರ | : | 2,374 |
| ಇತರೆ | : | 63,988 |

**ಅನುದಾನ ವಿವರ**

- ಒಕ್ಕಲಿಗ ಅಭಿವೃದ್ಧಿ ನಿಗಮಕ್ಕೆ **ರೂ 500 ಕೋಟಿ**
- ಅಯೋಧ್ಯೆಯಲ್ಲಿ ಕರ್ನಾಟಕ ಯಾತ್ರಿ ನಿವಾಸ ನಿರ್ಮಾಣಕ್ಕೆ **ರೂ 10 ಕೋಟಿ**
- ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ ಸ್ಮೃತಿ ವನಕ್ಕೆ **ರೂ 2 ಕೋಟಿ**
- ಪೇಜಾವರ ಮಠದಲ್ಲಿ ವಿಶ್ವೇಶತೀರ್ಥ ಸ್ವಾಮೀಜಿ ಸ್ಮೃತಿ ವನಕ್ಕೆ **ರೂ 2 ಕೋಟಿ**

> **ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಮಹಿಳಾ ಅಭಿವೃದ್ಧಿ ನಿಗಮ/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಎರಡು ಕೋಟಿ ರೂಗಳ ವರೆಗೆ ಶೇ. 4 ರ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ.**

ಮಹಿಳೆಯರಲ್ಲಿ ಉದ್ಯಮಶೀಲತೆ ಬೆಳೆಸಲು ಶೇ 4ರಂತೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ, ಆಸ್ಪತ್ರೆ, ವೈದ್ಯಕೀಯ, ಆರೋಗ್ಯ ಕಾಳಜಿ ಮತ್ತಿತರ ಸೇವಾ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಮಹಿಳಾ ಅಭಿವೃದ್ಧಿ ನಿಗಮ ಅಥವಾ ಹಣಕಾಸು ಸಂಸ್ಥೆಗಳಿಂದ ಸರ್ಕಾರವು ಸಾಲ ಸೌಲಭ್ಯ ಒದಗಿಸಲಿದೆ. ಗ್ರಾಮೀಣ ಮಹಿಳಾ ಸ್ವಸಹಾಯ ಸಂಘ, ಕೇಟರಿಂಗ್, ಸ್ವಚ್ಛತಾ ಕಾರ್ಯ, ಕುರಿ-ಕೋಳಿ ಸಾಕಣೆ ಮೂಲಕ ಸ್ವಯಂ ಉದ್ಯೋಗ ಕಲ್ಪಿಸಲು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಸರ್ಕಾರದ ನೆರವಿನ ಹಸ್ತ ಚಾಚಲು ಬಜೆಟ್‌ನಲ್ಲಿ ಭರವಸೆ ನೀಡಲಾಗಿದೆ.

ಉದ್ಯೋಗನಿರತ ಮಹಿಳೆಯರ ಮಕ್ಕಳ ಆರೋಗ್ಯ ನಿರ್ವಹಣೆಗೆ ಅಂಗನವಾಡಿಗಳನ್ನು ಹಂತ ಹಂತವಾಗಿ ಶಿಶುಪಾಲನಾ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗಿದೆ. ಮಹಿಳಾ ಉದ್ಯೋಗಿಗಳಿಗೆ ಮಕ್ಕಳ ಲಾಲನೆ - ಪೋಷಣೆಗೆ 6 ತಿಂಗಳ ರಜೆ ನೀಡಲಾಗುವುದು ಎಂದೂ ಘೋಷಿಸಲಾಗಿದೆ. ಮಹಿಳಾ ಉದ್ಯಮಿಗಳು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಮತ್ತು ಬ್ರ್ಯಾಂಡಿಂಗ್ ಒದಗಿಸುವುದು, ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಿ ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಹಲವಾರು ಉಪಕ್ರಮಗಳನ್ನೂ ಈ ಬಜೆಟ್ ಒಳಗೊಂಡಿರುವುದು ವಿಶೇಷತೆಯಾಗಿದೆ.



Download From : www.kpscvaani.com



### ಬಜೆಟ್ ಗಾತ್ರ

- ರೂ 2,46,207 ಕೋಟಿ
- ಒಟ್ಟು ವರಮಾನ: ರೂ 2,43,734 ಕೋಟಿ
- ವರಮಾನ ಜಮೆ: ರೂ 1,72,271 ಕೋಟಿ
- ಬಂಡವಾಳ ಜಮೆ: ರೂ 71,463 ಕೋಟಿ (ರೂ 71,332 ಕೋಟಿ ಸಾಲ ಒಳಗೊಂಡಂತೆ)
- ಒಟ್ಟು ವೆಚ್ಚ: ರೂ 2,46,207 ಕೋಟಿ (ವರಮಾನ ವೆಚ್ಚ ರೂ 1,87,405 ಕೋಟಿ, ಬಂಡವಾಳ ವೆಚ್ಚ ರೂ 44,237 ಕೋಟಿ ಮತ್ತು ಸಾಲ ಮರುಪಾವತಿ ರೂ 14,565 ಕೋಟಿ)

### ಬಂಡವಾಳ ಕ್ರೋಢೀಕರಣ

- ಜಿಎಸ್‌ಟಿ ಪರಿಹಾರ ಸೇರಿದಂತೆ ರಾಜ್ಯದ ಸ್ವಂತದ ತೆರಿಗೆ ವರಮಾನ: ರೂ 1,24,202 ಕೋಟಿ
- ತೆರಿಗೆಯೇತರ ವರಮಾನ: ರೂ 8,258 ಕೋಟಿ
- ಕೇಂದ್ರೀಯ ತೆರಿಗೆಗಳಲ್ಲಿನ ರಾಜ್ಯದ ಪಾಲು: ರೂ 24,273 ಕೋಟಿ
- ಕೇಂದ್ರ ಸರ್ಕಾರದ ಅನುದಾನ: ರೂ 15,538 ಕೋಟಿ
- ಸಾಲಯೇತರ ಬಂಡವಾಳ ಜಮೆ: ರೂ 40 ಕೋಟಿ
- ಸರ್ಕಾರಿ ಸ್ವಾಮ್ಯದ ಮಂಡಳಿ, ನಿಗಮ ಮತ್ತು ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಲಿರುವ ಮೊತ್ತ : ರೂ 23,763 ಕೋಟಿ
- ಸಾಲ ಮರಳಿ ಪಡೆಯುವಿಕೆ: ರೂ 91 ಕೋಟಿ

**ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ರೈತರ ಮಕ್ಕಳಿಗೆ ನೀಡುತ್ತಿರುವ ಮೀಸಲಾತಿಯನ್ನು ಶೇ 40 ರಿಂದ ಶೇ 50ಕ್ಕೆ ಹೆಚ್ಚಳ.**

### ಕೃಷಿ ಕ್ಷೇತ್ರಕ್ಕೆ ಉದ್ದಿಮೆ ಸ್ಥಾನಮಾನ

- **ಹೊಸ ಕೃಷಿ ನೀತಿ ಜಾರಿಗೆ ಕ್ರಮ**
- **ಕೃಷಿ ಉತ್ಪನ್ನ ಬೆಂಬಲ ಬೆಲೆಯ ಆವರ್ತ ನಿಧಿ ಮೊತ್ತ ರೂ 2,000 ಕೋಟಿಗೆ ಏರಿಕೆ**
- **ತಳಮಟ್ಟದಲ್ಲಿ ಕೃಷಿ ಕ್ಷೇತ್ರ ಬಲಪಡಿಸಲು ಒತ್ತು**
- **ಹೊಸ ಹೈಬ್ರಿಡ್ ನೀತಿ ಜಾರಿ**
- **ಕೃಷಿ ಮತ್ತು ಪೂರಕ ವಲಯಗಳಿಗೆ ರೂ 31,028 ಕೋಟಿ ಅನುದಾನ**

ಕೃಷಿಕರ ಆದಾಯ ದ್ವಿಗುಣಗೊಳಿಸುವ ಕೇಂದ್ರ ಸರ್ಕಾರದ ಆಶಯ ಸಾಕಾರಗೊಳಿಸಲು ಈ ಬಜೆಟ್ ಮೂಲಕ ರಾಜ್ಯ ಸರ್ಕಾರವೂ ಕೈಜೋಡಿಸಿದೆ. ಕೃಷಿ ಉತ್ಪನ್ನಗಳ ಲಾಭದಾಯಕತೆ ಹೆಚ್ಚಿಸಲು ಹೊಸ ಹೈಬ್ರಿಡ್ ಬೀಜ ನೀತಿ ಜಾರಿ, ಅಡಿಕೆ ಬೆಳೆಯ ಹಳದಿ ರೋಗ ನಿಯಂತ್ರಣದ ಸಂಶೋಧನೆ ತೀವ್ರಗೊಳಿಸಲು ಮತ್ತು ಪರ್ಯಾಯ ಬೆಳೆ ಪ್ರೋತ್ಸಾಹಿಸಲು ರೂ 25 ಕೋಟಿ ವೆಚ್ಚದ ವಿಶೇಷ ಕಾರ್ಯಕ್ರಮ, ಸಿರಿಧಾನ್ಯಗಳಿಗೆ ಗರಿಷ್ಠ ಬೆಲೆ ದೊರಕಿಸಲು ಆನ್‌ಲೈನ್ ಮಾರುಕಟ್ಟೆ ಅವಕಾಶ ಕಲ್ಪಿಸುವುದರ ಜತೆಗೆ ಕೃಷಿ ಮತ್ತು ತೋಟಗಾರಿಕೆಗೆ ಉದ್ದಿಮೆಯ ಸ್ಥಾನಮಾನ ಕಲ್ಪಿಸಲು ಹೊಸ ಕೃಷಿ ನೀತಿ ಜಾರಿಗೆ ತರುವುದಕ್ಕೂ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ನೀರಿನ ಭದ್ರತೆ, ಭೂ ಸಂಚಯ ಮತ್ತು ಸಾಮೂಹಿಕ ಕೃಷಿಗೆ ಪ್ರೋತ್ಸಾಹ, ಸೂಕ್ಷ್ಮ ನೀರಾವರಿ ಕೃಷಿಕರಿಗೆ ಉತ್ತೇಜನ, ಕೃಷಿ ಉತ್ಪನ್ನಗಳ ಸಂಸ್ಕರಣೆ, ಮಾರುಕಟ್ಟೆ ಪ್ರೋತ್ಸಾಹ ಕ್ರಮಗಳ ಮೂಲಕ ಕೃಷಿ ಕ್ಷೇತ್ರವನ್ನು ಉದ್ದಿಮೆ ಎಂದು ಪರಿಗಣಿಸಲು ಬಜೆಟ್‌ನಲ್ಲಿ ಉದ್ದೇಶಿಸಲಾಗಿದೆ. ಸಾಂಪ್ರದಾಯಿಕ ಕೃಷಿ ಬಿಟ್ಟು, ತೋಟಗಾರಿಕೆ ಕೃಷಿ ಪದ್ಧತಿಗೆ ವರ್ಗಾವಣೆಗೊಳ್ಳುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ 5,000 ದಂತೆ ಗರಿಷ್ಠ ರೂ 10,000 ನೆರವು ಘೋಷಿಸಲಾಗಿದೆ. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಫಲಾನುಭವಿಗಳಿಗೆ ರಾಜ್ಯ ಸರ್ಕಾರದ ರೂ 4,000 ಹೆಚ್ಚುವರಿ ನೆರವು ಮುಂದುವರೆಯಲಿದೆ.

### ನೀರಾವರಿಗೆ ಆದ್ಯತೆ

ಮಹಾದಾಯಿ ನ್ಯಾಯಮಂಡಳಿಯ ತೀರ್ಪಿನ ಅನ್ವಯ ಕಳಸಾ – ಬಂಡೂರಿ ನಾಲಾ ತಿರುವು ಯೋಜನೆಗಳ ನೀರಿನ ಬಳಕೆಗೆ ರೂ 1,677 ಕೋಟಿ



Download From : www.kpscvaani.com



**ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ಆಯವ್ಯಯ ಸಿದ್ಧಪಡಿಸಿದ ಅಧಿಕಾರಿಗಳ ತಂಡ. ಐ.ಎಸ್.ಎನ್. ಪ್ರಸಾದ್, ಅಪರ ಮುಖ್ಯ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ಏಕ್‌ರೂಪ್ ಕೌರ್, ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಡಾ. ಪಿ.ಸಿ. ಜಾಫರ್, ಕಾರ್ಯದರ್ಶಿ (ವೆಚ್ಚ), ಚಂದ್ರಶೇಖರ ನಾಯಕ್, ಉಪ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ) ಮತ್ತು ಕೆ. ನಿತೀಶ್, ಉಪ ಕಾರ್ಯದರ್ಶಿ-3 ಅವರು.**

ನಿಗದಿಪಡಿಸಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ಜಾರಿಗೊಳಿಸಲಾಗುವುದು ಎಂದು ಪ್ರಕಟಿಸಲಾಗಿದೆ. ಕೃಷ್ಣಾ ಜಲಭಾಗ್ಯ ನಿಗಮಕ್ಕೆ ರೂ 5,600 ಕೋಟಿ ಅನುದಾನ ಸೇರಿದಂತೆ ವಿವಿಧ ಯೋಜನೆಗಳಿಗೆ ರೂ 31,280 ಕೋಟಿ ಅನುದಾನ ನೀಡಲಾಗಿದೆ.

## ಆರೋಗ್ಯ ಕ್ಷೇತ್ರ

ರಾಜ್ಯದಲ್ಲಿ 250 ಆರೋಗ್ಯ ಕೇಂದ್ರಗಳನ್ನು ಮಾದರಿ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸಲು ನಿರ್ಧರಿಸಲಾಗಿದೆ. 100 ತಾಲ್ಲೂಕುಗಳಲ್ಲಿ 6 ಹಾಸಿಗೆಗಳ ತೀವ್ರ ನಿಗಾ ಘಟಕಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಸುಸ್ಥಿರ ಅಭಿವೃದ್ಧಿ ಗುರಿ 2030 ರ ಅನ್ವಯ ತಾಯಿ ಮತ್ತು ಶಿಶುಗಳ ಮರಣ ಪ್ರಮಾಣವನ್ನು ಕ್ರಮವಾಗಿ ಶೇ 30 ಹಾಗೂ ಶೇ 10ಕ್ಕೆ ಇಳಿಸಲು ಕಾರ್ಯ ಯೋಜನೆ ರೂಪಿಸಲಾಗಿದೆ. ತಾಯಿ ಹಾಲು ಕೊರತೆ ದೂರ ಮಾಡಲು ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ತಾಯಂದಿರ ಎದೆ ಹಾಲಿನ ಬ್ಯಾಂಕ್ ಸ್ಥಾಪನೆಗೆ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆ.

ಶಿಕ್ಷಣ ಕ್ಷೇತ್ರಕ್ಕೂ ಹಲವಾರು ಕೊಡುಗೆಗಳನ್ನು ಪ್ರಕಟಿಸಲಾಗಿದೆ. 50 ಪಬ್ಲಿಕ್ ಶಾಲೆಗಳ ಅಭಿವೃದ್ಧಿಗೆ ರೂ 100 ಕೋಟಿ ನಿಗದಿಪಡಿಸಲಾಗಿದೆ. ಎಂಟು ಮಂದಿ ಜ್ಞಾನಪೀಠ ಪುರಸ್ಕೃತರು ಓದಿರುವ ಶಾಲೆಗಳ ಅಭಿವೃದ್ಧಿ, ಕೇಂದ್ರ ಸರ್ಕಾರದ ನೇಮಕಾತಿಗಳಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಿಸಲು **'ಸಾಮರ್ಥ್ಯ – ಸಾರಥ್ಯ'** ಕಾರ್ಯಕ್ರಮದಡಿ 5 ಲಕ್ಷ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡಲು ಕ್ರಮ ಕೈಗೊಳ್ಳಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

## ಫ್ಲ್ಯಾಟ್ ಖರೀದಿ: ನೋಂದಣಿ ಶುಲ್ಕದ ರಿಯಾಯ್ತಿ

ಅಪಾರ್ಟ್‌ಮೆಂಟ್‌ಗಳಲ್ಲಿ ಕೈಗೆಟುಕುವ ಬೆಲೆಯ ಫ್ಲ್ಯಾಟ್ ಖರೀದಿಸುವವರಿಗೆ ಈಗಾಗಲೇ ನೀಡುತ್ತಿರುವ ನೋಂದಣಿ ಶುಲ್ಕದ ರಿಯಾಯಿತಿ ಸೌಲಭ್ಯವನ್ನು ಮತ್ತಷ್ಟು ವಿಸ್ತರಿಸಲಾಗಿದೆ. ರೂ 35 ಲಕ್ಷದವರೆಗಿನ ಅಪಾರ್ಟ್‌ಮೆಂಟ್‌ಗಳ ನೋಂದಣಿಗೆ ವಿಧಿಸಲಾಗುತ್ತಿದ್ದ ಶೇ 3ರಷ್ಟು ಶುಲ್ಕವನ್ನು ರೂ 45 ಲಕ್ಷದವರೆಗಿನ ಅಪಾರ್ಟ್‌ಮೆಂಟ್‌ಗಳ ನೋಂದಣಿಗೂ ವಿಸ್ತರಿಸಲಾಗಿದೆ.

ಎಲ್ಲರಿಗೂ ಆರ್ಥಿಕ ಅಭಿವೃದ್ಧಿಯ ಪ್ರಯೋಜನ ದೊರೆಯುವಂತೆ ಮಾಡುವುದೇ ಸರ್ಕಾರದ ಮುಖ್ಯ ಗುರಿಯಾಗಿರುತ್ತದೆ. ಈ ಗುರಿ ಸಾಧಿಸುವ ನಿಟ್ಟಿನಲ್ಲಿ ಈ ಬಜೆಟ್ ಇನ್ನೊಂದು ಹೆಜ್ಜೆ ಇರಿಸಿದೆ. ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಕೈಗಾರಿಕೆ, ಮೂಲಸೌಕರ್ಯ ಮತ್ತಿತರ ವಲಯಗಳಲ್ಲಿ ಬಂಡವಾಳ ಆಕರ್ಷಿಸುವುದಕ್ಕೂ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ.

ಆದರೆ, ಆದ್ಯತಾ ವಲಯಗಳಿಗೆ ಅನುದಾನ ಹೆಚ್ಚಳ ಮಾಡಿಲ್ಲದಿರುವುದು ಕೊರತೆಯಾಗಿ ಕಾಣಲಿದೆ.ಕೋವಿಡ್ ಪಿಡುಗು ಸೃಷ್ಟಿಸಿರುವ ಸಂಕಷ್ಟವೇ ಇದಕ್ಕೆ ಮುಖ್ಯ ಅಡ್ಡಿಯಾಗಿರುವುದು ಸ್ಪಷ್ಟವಾಗುತ್ತದೆ. ರಾಜ್ಯದ ಬೊಕ್ಕಸದಲ್ಲಿನ ಸಂಪನ್ಮೂಲ ಕೊರತೆಯನ್ನು ರೂ 71,332 ಕೋಟಿ ಮೊತ್ತದ ಸಾಲ ಪಡೆಯುವುದರ ಮೂಲಕ ಭರ್ತಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. 2022ರ ಮಾರ್ಚ್ ಅಂತ್ಯಕ್ಕೆ ಕೊನೆಗೊಳ್ಳುವ 2021-2022ನೇ ವರ್ಷದ ಹಣಕಾಸು ವರ್ಷದ ಕೊನೆಯಲ್ಲಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತವು ರೂ 4.57 ಲಕ್ಷ ಕೋಟಿ ಮೊತ್ತವನ್ನು ಮೀರಲಿದೆ. ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಎಸ್‌ಜಿಎಸ್‌ಟಿ) ಶೇ 26.9 ರಷ್ಟಾಗಲಿದೆ.

ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವರಮಾನ ಕೊರತೆ ಹೊಂದಿದ ಬಜೆಟ್ ಇದಾಗಿದೆ. ವರಮಾನ ಕೊರತೆಯು ಅಂದಾಜು ರೂ 15,134 ಕೋಟಿ ಇರಲಿದೆ. ವಿತ್ತೀಯ ಕೊರತೆಯು ರೂ 59,240 ಕೋಟಿಗಳಷ್ಟಾಗಲಿದೆ. ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಎಸ್‌ಜಿಡಿಪಿ) ಶೇ 3.48ರಷ್ಟು ಇರಲಿದೆ. 2021-22ನೇ ಹಣಕಾಸು ವರ್ಷದ ಅಂತ್ಯಕ್ಕೆ ರಾಜ್ಯ ಸರ್ಕಾರದ ಒಟ್ಟಾರೆ ಸಾಲವು ರೂ 4,57,899 ಕೋಟಿಗೆ ತಲುಪಲಿದೆ. ಇದು **'ಎಸ್‌ಜಿಡಿಪಿ'**ಯ ಶೇ 26.9ರಷ್ಟಾಗಲಿದೆ. ಇದಕ್ಕೆ ಸಂಬಂಧಿಸಿದಂತೆ **'ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯ್ದೆ-2002'**ಗೆ ಅಗತ್ಯ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ.

ರಾಜ್ಯದ ಎಲ್ಲ ಜನವರ್ಗಕ್ಕೆ ಒಳಿತು ಮಾಡುವ ಬಗೆಯಲ್ಲಿ ಕಾರ್ಯಕ್ರಮಗಳನ್ನು ಒಳಗೊಂಡಿರುವ ಸಮತೋಲನದ ಬಜೆಟ್ ಇದಾಗಿದೆ. ಆರ್ಥಿಕ ಸಂಕಷ್ಟಗಳ ಸರಮಾಲೆಗಳ ಮಧ್ಯೆ ಸಮತೋಲನ ಸಾಧಿಸುವ ಸವಾಲನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಮರ್ಥವಾಗಿ ನಿಭಾಯಿಸಿದ್ದಾರೆ.

ಆರ್ಥಿಕ ಸಂಕಷ್ಟಗಳ ಸವಾಲುಗಳು ಇನ್ನೂ ಕೊನೆಗೊಂಡಿಲ್ಲ. ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಇನ್ನೂ ಸಾಕಷ್ಟು ದೂರ ಸಾಗಬೇಕಾಗಿದೆ. ಬಜೆಟ್ ಆಶಯಗಳನ್ನೆಲ್ಲ ಸಾಕಾರಗೊಳಿಸಲು ಸರ್ಕಾರದ ವಿವಿಧ ಇಲಾಖೆಗಳು ಹೆಚ್ಚಿನ ಮುತುವರ್ಜಿ ವಹಿಸಿ ಬಜೆಟ್ ಅನುಷ್ಠಾನಕ್ಕೆ ಬದ್ಧತೆ ತೋರುವ ಅಗತ್ಯ ಇದೆ.



Download From : www.kpscvaani.com



# ವಿದುರಾಶ್ವತ್ಥದಲ್ಲಿ ಮೊಳಗಿದ



# 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ



Download From : www.kpscvaani.com



**ಭಾರತಕ್ಕೆ ಸ್ವಾತಂತ್ರ್ಯ ಬಂದು ಆಗಸ್ಟ್ 15 2021ಕ್ಕೆ 75 ವಸಂತಗಳು ಪೂರ್ಣಗೊಳ್ಳಲಿದೆ. ಇದರ ಸವಿನೆನಪಿಗಾಗಿ ಕೇಂದ್ರ ಸರಕಾರದ ನಿರ್ದೇಶನದಂತೆ ಮಾರ್ಚ್ 12 ರಂದು ದೇಶದ 75 ಐತಿಹಾಸಿಕ ಸ್ಥಳಗಳಲ್ಲಿ '75ನೇ ಸ್ವಾತಂತ್ರ್ಯೋತ್ಸವದ ಆಜಾದ್ ಕಾ ಅಮೃತ್ ಮಹೋತ್ಸವ'ದ ಕಾರ್ಯಕ್ರಮಗಳು ಜರುಗಿತು. ಇದರ ಭಾಗವಾಗಿ 'ದಕ್ಷಿಣ ಭಾರತದ ಜಲಿಯನ್ ವಾಲಾಬಾಗ್' ಎಂದೇ ಖ್ಯಾತಿ ಪಡೆದಿರುವ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಐತಿಹಾಸಿಕ ಪುಣ್ಯಕ್ಷೇತ್ರವಾದ ವಿದುರಾಶ್ವತ್ಥದಲ್ಲಿ 'ರಾಜ್ಯ ಮಟ್ಟದ ಅಮೃತ ಮಹೋತ್ಸವ'ಕ್ಕೆ ಚಾಲನೆ ನೀಡಲಾಯಿತು.**

**ವಿದುರಾಶ್ವತ್ಥದ ಹೋರಾಟ ಐತಿಹಾಸಿಕವಾದುದು. ಈ ಸ್ಥಳ ಧಾರ್ಮಿಕ ಕೇಂದ್ರವೂ ಆಗಿದೆ. ಈ ಸಣ್ಣ ಹಳ್ಳಿಯಲ್ಲಿ ನಡೆದ ಹೋರಾಟ ದೇಶದ ಇತಿಹಾಸದಲ್ಲಿ ದಾಖಲಾಗಿದೆ. ಇಲ್ಲಿ ಹುತಾತ್ಮರಾದ ಮಹನೀಯರ ಬಲಿದಾನವೇ ನಮಗೆ ದೇಶ ಕಟ್ಟಲು ಸ್ಫೂರ್ತಿ ಆಗಬೇಕು. ಇದಲ್ಲದೆ, ಕಿತ್ತೂರು, ಸುರಪುರ, ಹಲಗಲಿ ಬೇಡರು, ಈಸೂರು ಹೋರಾಟಗಳು ಸಹ ದೇಶದಲ್ಲಿ ಮಹತ್ವವಾದವು. ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧಿ ಅವರ ನೇತೃತ್ವದಲ್ಲಿ ನಡೆದ ಹೋರಾಟ ಇಂದಿಗೂ ವಿಶ್ವಕ್ಕೆ ಅಚ್ಚರಿಯಾಗಿ ಕಾಣುತ್ತಿದೆ.**

–ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎಂ.ಕೃಷ್ಣಪ್ಪ ಕೆಎನ್‌ಹಳ್ಳಿ

ಗುಜರಾತ್ ರಾಜ್ಯದ ದಂಡಿ ಸತ್ಯಾಗ್ರಹ ಸ್ಥಳದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಾರ್ಚ್ 12 ರಂದು ರಾಷ್ಟ್ರಮಟ್ಟದ 75 ನೇ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆ ಇತ್ತ ಚಿಕ್ಕಬಳ್ಳಾಪುರ ಜಿಲ್ಲೆಯ ವಿದುರಾಶ್ವತ್ಥದ ಡಾ॥ಎನ್.ಸಿ.ನಾಗಯ್ಯರೆಡ್ಡಿ ಸ್ಮಾರಕ ಧ್ವಜ ಸತ್ಯಾಗ್ರಹ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಆಜಾದ್ ಕಾ ಅಮೃತ್ ಮಹೋತ್ಸವಕ್ಕೆ ರಾಜ್ಯಪಾಲರಾದ ವಜುಭಾಯಿ ವಾಲಾ ಹಾಗೂ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಅವರು ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಲವು ಮಹನೀಯರ ತ್ಯಾಗ, ಬಲಿದಾನ ಅಡಗಿದ್ದು, ಅವರ ಮಹತ್ವವನ್ನು ಇಂದಿನ ಯುವ ಪೀಳಿಗೆಗೆ ಮನವರಿಕೆ ಮಾಡುವ ಅವರಲ್ಲಿ ದೇಶಭಕ್ತಿಯನ್ನು ಬಿತ್ತುವ ಸದುದ್ದೇಶದಿಂದ ದೇಶದ 75 ಐತಿಹಾಸಿಕ ಸ್ಥಳಗಳಲ್ಲಿ 75 ವಾರಗಳ ಕಾಲ ಆಜಾದ್ ಕಾ ಅಮೃತ್ ಮಹೋತ್ಸವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಈ ಪೈಕಿ ಕರ್ನಾಟಕದಲ್ಲಿ 3 ಐತಿಹಾಸಿಕ ಸ್ಥಳಗಳಾದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ವಿದುರಾಶ್ವತ್ಥ, ಮಂಡ್ಯದ ಜಿಲ್ಲೆ ಮದ್ದೂರು ತಾಲೂಕಿನ ಶಿವಪುರ ಹಾಗೂ ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಮುನ್ನುಡಿ ಬರೆಯಲಾಯಿತು. ಇನ್ನು 75 ವಾರಗಳವರೆಗೆ ರಾಷ್ಟ್ರದಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅಮೃತ ಮಹೋತ್ಸವದ ಸಂಭ್ರಮಾಚರಣೆಯನ್ನು ಆಚರಿಸಲಾಗುವುದು.



Download From : www.kpscvaani.com

## ವಿದುರಾಶ್ವತ್ಥದ ಚರಿತ್ರೆ

ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಪುಟಗಳಲ್ಲಿ ವಿದುರಾಶ್ವತ್ಥದ ಹೆಸರು ಚಿರಸ್ಮರಣೀಯ. ಇದು ಪುಣ್ಯಕ್ಷೇತ್ರವಾಗಿ ಬಹಳ ಪ್ರಸಿದ್ಧವಾದ ಸ್ಥಳ. ಚಾರಿತ್ರಿಕವಾಗಿಯೂ ಸಹ ಖ್ಯಾತಿಯನ್ನು ಪಡೆದ ಊರು. ದಕ್ಷಿಣ ಭಾರತದ ಜಲಿಯನ್ ವಾಲಾಬಾಗ್ ಎಂದೇ ಪ್ರಖ್ಯಾತಿಯಾದ ವಿದುರಾಶ್ವತ್ಥವು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿರುವ ಪುಟ್ಟ ಹಳ್ಳಿ. ತಾಲೂಕು ಕೇಂದ್ರ ಗೌರಿಬಿದನೂರು ಪಟ್ಟಣದಿಂದ ಕೇವಲ 6 ಕಿ.ಮೀ ದೂರದಲ್ಲಿರುವ ಈ ಊರು ಸಣ್ಣದಾದರೂ ಧಾರ್ಮಿಕವಾಗಿ ಮತ್ತು ಐತಿಹಾಸಿಕವಾಗಿ ಖ್ಯಾತಿಯನ್ನು ಪಡೆದಿದೆ. ಉತ್ತರ ಪಿನಾಕಿನಿ ನದಿಯ ದಂಡೆಯ ಮೇಲಿರುವ ಕ್ಷೇತ್ರ ದೇಶದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಪುಟಗಳಲ್ಲೂ ಚಿರಸ್ಮರಣೀಯವಾಗಿದೆ.

1919ರಲ್ಲಿ ಪಂಜಾಬಿನ ಅಮೃತಸರದಲ್ಲಿ ಸಾಮೂಹಿಕ ಹತ್ಯೆ ನಡೆದ ರೀತಿಯಲ್ಲಿಯೇ, ಏಪ್ರಿಲ್ 25, 1938 ರಂದು ವಿದುರಾಶ್ವತ್ಥದಲ್ಲಿ ಸಾಮೂಹಿಕ ಹತ್ಯೆ ನಡೆಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಈ ಘೋರ ಘಟನೆ ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಪುಟಗಳಲ್ಲಿ ಶಾಶ್ವತ ಸ್ಥಾನವನ್ನು ಪಡೆದಿದೆ. ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ ಆಂದೋಲನದಲ್ಲಿ ಧುಮುಕಿ, ಬ್ರಿಟಿಷರ ವಿರುದ್ಧ ಹೋರಾಡಿ ಮಡಿದ ಸತ್ಯ ಕಥೆಯೇ ವಿದುರಾಶ್ವತ್ಥ ಹತ್ಯಾಕಾಂಡ. 1938ರಲ್ಲಿ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹ ನಡೆಸಲು ತೀರ್ಮಾನಿಸಿ ಈ ಧ್ವಜ ಸತ್ಯಾಗ್ರಹವನ್ನು ವಿದುರಾಶ್ವತ್ಥದಲ್ಲಿ ನಡೆಸಲು ಅಣಿಯಾದರು. 1938 ಏಪ್ರಿಲ್ 25ರಂದು ವಿದುರಾಶ್ವತ್ಥದಲ್ಲಿ ಧ್ವಜ ಸತ್ಯಾಗ್ರಹ ಪ್ರಾರಂಭವಾಯಿತು. ಈ ಕಾರ್ಯವನ್ನು ಸಹಿಸದ ಬ್ರಿಟಿಷ್ ಸರ್ಕಾರ ಸತ್ಯಾಗ್ರಹಿಗಳ ಮೇಲೆ ಲಾಠಿ ಪ್ರಹಾರ ಮತ್ತು ಬಂದೂಕುಗಳಿಂದ ಗುಂಡಿನ ಮಳೆಗರೆಯಿತು. ಇದರಿಂದ 9 ಮಂದಿ ಸತ್ಯಾಗ್ರಹಿಗಳು ಹುತಾತ್ಮರಾದರು. ಈ ಘಟನೆ ಪ್ರಪಂಚದಾದ್ಯಂತ ಹರಡಿ ಭಾರತೀಯರಲ್ಲಿ ಸ್ವಾತಂತ್ರದ ಜಾಗೃತಿಯನ್ನು ಇಮ್ಮಡಿಗೊಳಿಸಿತು. ಈ ಜಾಗೃತಿಯ ಫಲವೇ ಬ್ರಿಟಿಷರ ಬಿಗಿ ಮುಷ್ಠಿಯಿಂದ ಭಾರತದ ಮುಕ್ತಿಗೆ ನೆರವಾಯಿತು.

ಇತಿಹಾಸದ ಪುಟಗಳಲ್ಲಿ ವಿದುರಾಶ್ವತ್ಥ "ಕರ್ನಾಟಕದ ಜಲಿಯನ್ ವಾಲಾಬಾಗ್" ಎಂದು ಖ್ಯಾತಿ ಪಡೆದಿದೆ. ಹುತಾತ್ಮರ ಸ್ಮರಣೆಗಾಗಿ ದೇವಾಲಯದ ಹಿಂಭಾಗದಲ್ಲಿ ಸ್ಮಾರಕ ನಿರ್ಮಿಸಿದೆ. 50ನೇ ಸ್ವಾತಂತ್ರ್ಯೋತ್ಸವದ ಸವಿ ನೆನಪಿಗಾಗಿ 2004ರಲ್ಲಿ "ವೀರಸೌಧ" ನಿರ್ಮಿಸಲಾಗಿದೆ. ಈ ವೀರ ಸೌಧದಲ್ಲಿ ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದಂತೆ, ಅದ್ಭುತವಾದ ಫೋಟೋ ಗ್ಯಾಲರಿ ಮತ್ತು ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. ಪ್ರತಿಯೊಬ್ಬ ಭಾರತೀಯನು ಭೇಟಿ ಕೊಡಲೇ ಬೇಕಾದ ಸ್ಥಳ, ವಿಶೇಷವಾಗಿ ವೀರಸೌಧದ ಸುತ್ತಲೂ, ಮಕ್ಕಳ ಉದ್ಯಾನವನ, ತೆರೆದ ಸಭಾಂಗಣ ಹಾಗೂ ಸ್ವಾತಂತ್ರ್ಯ ವೀರರ ಪುತ್ಥಳಿಗಳನ್ನಿಡಲಾಗಿದೆ. ಅಲ್ಲದೆ ಸುಸಜ್ಜಿತವಾದ ಗ್ರಂಥಾಲಯ ಹಾಗೂ ಸ್ವಾತಂತ್ರ್ಯ ಹೋರಾಟದ ಚಿತ್ರಗಳನ್ನು ಒಳಗೊಂಡ ಗ್ಯಾಲರಿಯು ಸಹ ಇದೆ. ಸ್ವಾತಂತ್ರ ಹೋರಾಟದ ಚಲನಚಿತ್ರಗಳನ್ನು ಪ್ರದರ್ಶಿಸಲು ವ್ಯವಸ್ಥೆ ಇರುತ್ತದೆ. ಸತ್ಯಾಗ್ರಹದ ಜ್ಞಾಪಕಾರ್ಥವಾಗಿ, ಸ್ಥಳೀಯ ಪ್ರೌಢಶಾಲೆಗೆ Satyagraha Memorial High School ಎಂದು ನಾಮಕರಣ ಮಾಡಲಾಗಿದೆ.

**ಮಾತೃ ಶಕ್ತಿ ನಮ್ಮ ದೇಶದ ಶಕ್ತಿ. ಕೃಷ್ಣ ಭಗವಾನರ ಬದುಕಿನಲ್ಲಿ ಮಾತಾ ಯಶೋಧರ, ಗಾಂಧಿ ಅವರ ಬದುಕಿಗೆ ಪುತಲೀ ಭಾಯಿ, ಶಿವಾಜಿ ಬದುಕಿನಲ್ಲಿ ಜೀಜಾಭಾಯಿ ಮಹತ್ವದ ಪಾತ್ರವಹಿಸಿದರು. ಈ ಮಾತೆಯರು ಇವರನ್ನು ಮಹಾತ್ಮರನ್ನಾಗಿ ರೂಪಿಸಿದರು. ಮಹಿಳೆಯರಲ್ಲಿ ಅಪಾರ ಶಕ್ತಿ ಬುದ್ಧಿ ಇದೆ. ಪ್ರತಿ ನಾಗರಿಕರು, ವಿದ್ಯಾರ್ಥಿಗಳು ಈ ದೇಶಕ್ಕೆ ಯಾವ ರೀತಿಯಲ್ಲಿ ಸೇವೆ ಮಾಡುತ್ತೇವೆ ಎನ್ನುವ ಸಂಕಲ್ಪ ಮಾಡಬೇಕಿದೆ. ಭಾರತದ ಪ್ರತಿ ನಾಗರಿಕರು ಬುದ್ಧಿವಂತರಿದ್ದಾರೆ. ಅವಕಾಶಗಳು ದೊರೆಯಬೇಕಿದೆ. ಯೋಧರು ಗಡಿಯಲ್ಲಿ ಕೊರೆಯುವ ಚಳಿಯಲ್ಲೂ ನಮ್ಮ ರಕ್ಷಣೆಯಲ್ಲಿ ನಿರತರಾಗಿದ್ದಾರೆ. ವಿಶ್ವದಲ್ಲಿ ಭಾರತ ಮೊದಲ ಸ್ಥಾನ ಪಡೆಯುವ ದಿಕ್ಕಿನಲ್ಲಿ ನಾವು ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಆಲೋಚಿಸಿ ಮುನ್ನಡೆಯಬೇಕಿದೆ.**

– ವಜುಭಾಯಿ ವಾಲಾ
ರಾಜ್ಯಪಾಲರು, ಕರ್ನಾಟಕ.







Download From : www.kpscvaani.com



**ವಿದುರಾಶ್ವತ್ಥವು ಹೋರಾಟದ ನೆಲವಾಗಿದ್ದು, 1932ರಲ್ಲಿ ಬ್ರಿಟಿಷರು ನಡೆಸಿದ ಗುಂಡಿನ ದಾಳಿಗೆ ಹಲವು ಮಂದಿ ಮೃತಪಟ್ಟಿರುವುದಾಗಿ ಇತಿಹಾಸ ಹೇಳುತ್ತದೆ. ಇಂತಹ ಐತಿಹಾಸಿಕ ಸ್ಥಳವನ್ನು ಹಲವು ರೀತಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಈ ಸ್ಥಳವನ್ನು ಅಂತರರಾಷ್ಟ್ರೀಯ ಸ್ಮರಣ ಕೇಂದ್ರವಾಗಿ ಅಭಿವೃದ್ಧಿ ಪಡಿಸುವತ್ತ ಸರಕಾರ ಚಿಂತನೆ ನಡೆಸಲಿದೆ.**

**– ಡಾ.ಕೆ.ಸುಧಾಕರ್**
ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ.

ವಿದುರಾಶ್ವತ್ಥದಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಕ್ರಮ ಭಾಗವಾಗಿ ಇಲ್ಲಿನ ವೀರಸೌಧ ಸ್ಮಾರಕ ಭವನ ಪಕ್ಕದಲ್ಲಿ ಪಥಂಜಲಿ ಯೋಗ ಸಮಿತಿ ವತಿಯಿಂದ ಯೋಗಾಸನ ಕಾರ್ಯಕ್ರಮ, ಗೌರಿಬಿದನೂರು ಪಟ್ಟಣದ ನ್ಯಾಷನಲ್ ಕಾಲೇಜು ಬಳಿಯಿಂದ ವಿದುರಾಶ್ವತ್ಥವರೆಗೆ 75 ಜನರಿಂದ ಸೈಕಲ್ ಜಾಥಾ, ಸ್ವಾತಂತ್ರ್ಯ ಸ್ಮಾರಕ ಸ್ತೂಪಕ್ಕೆ ಗೌರವ ಸಮರ್ಪಣೆ, ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಮಹಾತ್ಮಾ ಗಾಂಧಿ, ಸರ್ದಾರ್ ವಲ್ಲಬಾಯಿ ಪಟೇಲ್, ನೇತಾಜಿ ಸುಭಾಷ್ ಚಂದ್ರಬೋಸ್ ರವರ ಕುರಿತಾದ ವಸ್ತು ಪ್ರದರ್ಶನ, ಕಲಾ ತಂಡಗಳಿಂದ ಕಿರು ನಾಟಕ ಪ್ರದರ್ಶನ, ಜಾನಪದ ಗಾಯನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಸಲಾಗಿತ್ತು. ಮುಂದಿನ 75 ವಾರಗಳ ಕಾಲ ಜಿಲ್ಲೆಯಾದ್ಯಂತ ಸ್ವಾತಂತ್ರ್ಯೋತ್ಸವದ ಮಹತ್ವವನ್ನು ಸಾರುವ ವಿವಿಧ ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ.

**ಸ್ವಾರ್ಥಿಗಳಾಗದೇ, ದೇಶಕ್ಕಾಗಿ ಜೀವನವನ್ನು ಮುಡಿಪಿಡೋಣ:**

ಸಹಸ್ರಾರು ಮಂದಿ ಹೋರಾಟಗಾರರ ತ್ಯಾಗ ಮತ್ತು ಬಲಿದಾನಗಳಿಂದ ಗಳಿಸಿರುವ ಸ್ವಾತಂತ್ರ್ಯಕ್ಕೆ ದೊಡ್ಡ ಮಹತ್ವ, ಗೌರವವಿದೆ ಮತ್ತು ಮಹತ್ವವಾದ ಆಶಯಗಳಿವೆ. ಹೋರಾಟಗಾರರ ಕನಸು ಮತ್ತು ನಿರೀಕ್ಷೆಗಳನ್ನು ನಾವು ಅರ್ಥಮಾಡಿಕೊಂಡು ನನಸಾಗಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ರಾಜ್ಯಪಾಲರಾದ ವಜುಭಾಯಿ  ವಾಲಾ ಅವರು ಹೇಳಿದರು.

ಅಮೃತ ಮಹೋತ್ಸವ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಮುಂಬರುವ ಆಗಸ್ಟ್ 15ಕ್ಕೆ ಬ್ರಿಟಿಷರಿಂದ ಮುಕ್ತಿ ಪಡೆದು ನಮ್ಮ ರಾಷ್ಟ್ರ ಸ್ವತಂತ್ರ ರಾಷ್ಟ್ರವಾಗಿ 75 ವರ್ಷಗಳಾಗುತ್ತದೆ. ಅನೇಕ ಮಹನೀಯರ ತ್ಯಾಗ ಬಲಿದಾನಗಳಿಂದ ಭಾರತ ಭೂಮಿ ಸ್ವತಂತ್ರ ಭೂಮಿಯಾಗಿದೆ. ಸಂಸ್ಕಾರವಂತ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ನಂತರ ದೇಶದ ಬೆಳವಣಿಗೆ



Download From : www.kpscvaani.com

ಬಗ್ಗೆ ಅವಲೋಕನ ಮಾಡಬೇಕಾಗಿದೆ. ಮುಂದಿನ 25 ವರ್ಷಗಳ ನಂತರ ದೇಶ ಹೇಗಿರಬೇಕು ಎಂಬ ಚಿಂತನೆ ಮಾಡಬೇಕಿದೆ. ಮುಂದಿನ ದಿನಗಳನ್ನು ನೆನಪಿನಲ್ಲಿಟ್ಟುಕೊಂಡು ದೇಶದ ಅಭಿವೃದ್ಧಿ ಮತ್ತು ಶಾಂತಿಯುತ ಸಮಾಜ ನಿರ್ಮಾಣ ಮಾಡಲು ಮುನ್ನುಡಿ ಬರೆಯಬೇಕಿದೆ.

ನಮ್ಮ ರಾಷ್ಟ್ರಕ್ಕಾಗಿ ಅನೇಕ ಮಹನೀಯರು ತಮ್ಮ ಜೀವವನ್ನೇ ಬಲಿದಾನ ನೀಡಿದ್ದಾರೆ. ಅಂತಹ ಮಹಾನ್ ಪುರುಷರ ತ್ಯಾಗಕ್ಕೆ ನಾವು ತಲೆತಗ್ಗಿಸಬೇಕು. ಮಹನೀಯರ ತ್ಯಾಗವನ್ನು ಅರಿತು ದೇಶವನ್ನು ಕಟ್ಟಬೇಕು. ಯಾವುದೇ ವ್ಯಕ್ತಿಯೂ ಸ್ವಾರ್ಥ ಮನೋಭಾವದಿಂದ ಮುನ್ನುಗ್ಗದೇ, ಸಮಾನತೆಯ ಮನೋಭಾವದಿಂದ ಮುನ್ನಗ್ಗಬೇಕು. ಸ್ವಾಮಿ ವಿವೇಕಾನಂದರ ಸ್ಫೂರ್ತಿದತ್ತವಾದ ನುಡಿಗಳನ್ನು ನೋಡಿದರೆ, ನಮ್ಮ ದೇಶದ ಯುವ ಜನಾಂಗದ ಮೇಲೆ ಅವರೆಷ್ಟು ಭರವಸೆಯನ್ನು ಹೊಂದಿದ್ದರು ಎಂಬುದು ಅರಿವಾಗುತ್ತದೆ. ಸ್ವಾಮಿ ವಿವೇಕಾನಂದರು ಕೇವಲ 39 ವರ್ಷ ವಯಸ್ಸಿನಲ್ಲಿ ಸಾಧಿಸಿದ್ದನ್ನು ಇಡೀ ಜಗತ್ತು ಮತ್ತು ನಮ್ಮ ರಾಷ್ಟ್ರ ನೆನೆಸುತ್ತದೆ. ದೇಶದ ಜನರ ಉನ್ನತಿಗಾಗಿ ಶ್ರಮಿಸಿದವರು ಇಂತಹ ಮಹಾನ್ ಪುರುಷರ ಹಾದಿಯಲ್ಲಿ ನಾವು ನಡೆಯಬೇಕು.

ಸ್ತ್ರೀ ಎಂದರೆ ನಮ್ಮ ದೇಶದ ಶಕ್ತಿ. ನಾರಿಗೆ ಎಲ್ಲಿ ಗೌರವ ಸಲ್ಲುತ್ತದೋ ಅಲ್ಲಿ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಸ್ವಾತಂತ್ರ್ಯ ಹೋರಾಟದ ಮಹನೀಯರಾದ ಮಹಾತ್ಮಗಾಂಧೀಜಿ, ಸರ್ದಾರ್ ವಲ್ಲಭಾಯಿ ಪಟೇಲ್, ಲಾಲ್ ಲಜಪಥ್ ರಾಯ್, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್, ಡಾ.ಬಿ.ಆರ್.ಅಂಬೇಡ್ಕರ್ ಸೇರಿದಂತೆ ಅನೇಕ ಮಹನೀಯರು ಸ್ತ್ರೀಯರಿಗೆ ಗೌರವವನ್ನು ಸಲ್ಲಿಸಿ ಬಂದಿದ್ದಾರೆ. ಪುರುಷರ ಸಮನಾಗಿ ಮಹಿಳೆಯು ಎಲ್ಲಾ ಕ್ಷೇತ್ರದಲ್ಲಿ ಮುನ್ನುಗ್ಗಿದ್ದಾಳೆ. ನಮ್ಮ ರಾಷ್ಟ್ರ ಗಟ್ಟಿಗೊಳಿಸುವಲ್ಲಿ ಮಹಿಳೆಯ ಪಾತ್ರ ಅಪಾರ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜೀವಕ್ಕೆ ಹೆದರದೇ, ಮೃತ್ಯುವಿಗೆ ತಲೆವೊಡ್ಡಿದ್ದಾರೆ. ಇಂತಹ ಮಹನೀಯರ ತ್ಯಾಗವನ್ನು ನೆನಪಿಸಿಕೊಳ್ಳುತ್ತಾ ಈ ದಿನ ನಾವೆಲ್ಲರೂ ರಾಷ್ಟ್ರಕ್ಕಾಗಿ ನಮ್ಮನ್ನು ನಾವು ಸಮರ್ಪಿಸಿಕೊಂಡು, ಸಮಾಜದ ರಕ್ಷಣೆಗಾಗಿ ನಿಲ್ಲುತ್ತೇವೆಂದು ಪ್ರಮಾಣ ಮಾಡೋಣ ಎಂದು ಸಂದೇಶ ಸಾರಿದರು.

**ಸ್ವಾತಂತ್ರ್ಯ ಹೋರಾಟಗಾರರ ಚಿಂತನೆಗಳು ಯುವಕರು, ವಿದ್ಯಾರ್ಥಿಗಳಿಗೆ ಆದರ್ಶ:**

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ವೀರ ಮರಣವನ್ನಪ್ಪಿದ ಹೋರಾಟಗಾರರ ತತ್ವಾದರ್ಶಗಳು, ಚಿಂತನೆಗಳನ್ನು ಇಂದಿನ ಯುವ ಪೀಳಿಗೆ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸಬೇಕಿದೆ ಎಂದು ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಅವರು ಹೇಳಿದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ 1930ರಲ್ಲಿ ಕೈಗೊಂಡ ಉಪ್ಪಿನ ಸತ್ಯಾಗ್ರಹದ ಸ್ಮರಣಾರ್ಥ ಮಹಾತ್ಮ ಗಾಂಧಿಜೀ ಅವರು ಗುಜರಾತ್‌ನ ಸಬರಮತಿ ಆಶ್ರಮದಿಂದ ಕೈಗೊಂಡ 21 ದಿನಗಳ ದಂಡಿಯಾತ್ರೆಯು ಸ್ಮರಣೀಯ ಘಟ್ಟವಾಗಿದೆ. ದೇಶದ ಇತಿಹಾಸದಲ್ಲಿ ಅನೇಕ ಹೋರಾಟದ ಸ್ಮರಣೆಗಳನ್ನು ಸ್ಮರಿಸುವ ಸುಸಂದರ್ಭ ಇದಾಗಿದ್ದು, 1857ರ ಸಿಪಾಯಿ ದಂಗೆಯಿಂದ ಆರಂಭಗೊಂಡ ದೇಶದ ಸ್ವಾತಂತ್ರ್ಯ ಚಳುವಳಿ ಕಾಲಕಾಲಕ್ಕೆ ಹಲವು ಮಜಲುಗಳನ್ನು ಪಡೆಯಿತು. 1918ರ ಬಳಿಕ ಮಹಾತ್ಮಾ ಗಾಂಧಿಜೀ ಅವರ ನಾಯಕತ್ವದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಇಡೀ ಜಗತ್ತೇ ಅಚ್ಚರಿ ಪಡುವ ನಿಟ್ಟಿನಲ್ಲಿ ಬೆರಗಾಗಿ ನೋಡಿತು. ಬಾಲಗಂಗಾಧರ ತಿಲಕ್, ಲಾಲಾ ಲಜಪತ್ ರಾಯ್, ಭಗತ್ ಸಿಂಗ್, ವೀರ ಸಾವರ್ಕರ್ ಹೀಗೆ ಅನೇಕರ ತ್ಯಾಗ ಬಲಿದಾನದಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ನಾಡ ಪ್ರೇಮಿಗಳಿಂದ ಮೊಳಗಿದ ವಂದೇ ಮಾತರಂ ಕೂಗಿಗೆ ಕಿವಿಗೊಟ್ಟು ಲಕ್ಷಾಂತರ ಮಂದಿ ಹೋರಾಟಗಾರರು ಸ್ವಾತಂತ್ರ್ಯ ಚಳುವಳಿಗೆ ತಮ್ಮ ಬದುಕನ್ನು ಮೀಸಲಿಟ್ಟರು. ಹಲವರು ಹೋರಾಟದಲ್ಲಿ ಅಮರ ಜೀವಿಗಳಾಗಿ ಇಂದು ದೇಶದ ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ ಎಂದುರು.

ದೇಶದ ಮೂಲೆ ಮೂಲೆಗಳಲ್ಲಿ ಬ್ರಿಟಿಷರ ವಿರುದ್ಧ ಮೊಳಗಿದ ಚಳುವಳಿಯ ರಣಕಹಳೆಗೆ ಕರುನಾಡು ಸಹಾ ಹೊರತಾಗಿಲ್ಲ. ಮೈಸೂರು ಸಂಸ್ಥಾನದ ಕಿತ್ತೂರು, ಹಲಗಲಿ, ನರಗುಂದ, ಸುರಪುರ, ಬಾದಾಮಿ, ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ, ವಿದುರಾಶ್ವತ್ಥದಲ್ಲಿ ನಡೆದಿರುವ ಸ್ವಾತಂತ್ರ್ಯ ಚಳುವಳಿಗಳು ಸ್ವಾತಂತ್ರ್ಯೋತ್ಸವದ ಇತಿಹಾಸದ ಮೈಲುಗಲ್ಲುಗಳಾಗಿವೆ. ಇಂತಹ ಮಹೋನ್ನತ ಹೋರಾಟದಲ್ಲಿ ಭಾಗಿಯಾಗಿ ವೀರಮರಣವನ್ನಪ್ಪಿದ ಯೋಧರ ಆದರ್ಶಗಳು, ಚಿಂತನೆಗಳನ್ನು ಇಂದಿನ ಯುವಕರು ಹಾಗೂ ವಿದ್ಯಾರ್ಥಿಗಳು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಉತ್ತಮ ಸಮಾಜ ನಿರ್ಮಾಣಕ್ಕೆ ನೆರವಾಗಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಜಿಲ್ಲೆಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಂ.ಜೆ.ಬ್ರಹ್ಮಯ್ಯ ಹಾಗೂ ಎಂ.ನಂಜಪ್ಪ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಸಂಸದರಾದ ಬಿ.ಎನ್.ಬಚ್ಚೇಗೌಡ, ಕೋಲಾರ ಸಂಸದರಾದ ಮುನಿಸ್ವಾಮಿ, ಜಿ.ಪಂ. ಅಧ್ಯಕ್ಷರಾದ ಎಂ.ಬಿ.ಚಿಕ್ಕನರಸಿಂಹಯ್ಯ, ಸಂಸದರಾದ ಪಿ.ಸಿ.ಮೋಹನ್, ಶಿವಕುಮಾರ್ ಉದಾಸಿ, ವಿಧಾನಪರಿಷತ್ ಸದಸ್ಯರಾದ ವೈ.ಎ.ನಾರಾಯಣಸ್ವಾಮಿ, ಜಿಲ್ಲಾ ಪಂಚಾಯತ್ ಸಿಇಒ ಪಿ .ಶಿವಶಂಕರ್, ಎಸ್‌ಪಿ ಜಿ.ಕೆ. ಮಿಥುನ್ ಕುಮಾರ್, ಅಪರ ಜಿಲ್ಲಾಧಿಕಾರಿಗಳಾದ ಎಚ್. ಅಮರೇಶ್, ಉಪವಿಭಾಗಾಧಿಕಾರಿಗಳಾದ ಎ.ಎನ್. ರಘುನಂದನ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

**ಪುಣ್ಯಕ್ಷೇತ್ರವಾಗಿಯೂ ಸುಪ್ರಸಿದ್ಧ**

ವಿದುರಾಶ್ವತ್ಥ ಕ್ಷೇತ್ರ ಪುಣ್ಯಕ್ಷೇತ್ರವಾಗಿಯೂ ಪ್ರಸಿದ್ಧಿ. ಅಶ್ವತ್ಥ ನಾರಾಯಣ ಸ್ವಾಮಿ ಮತ್ತು ಸುಬ್ರಹ್ಮಣ್ಯ ಸ್ವಾಮಿಯ ಸನ್ನಿಧಾನದ ಪವಿತ್ರ ಭೂಮಿ. ವಿದುರಾಶ್ವತ್ಥ ಎನ್ನುವ ಹೆಸರು, ಊರಿನಲ್ಲಿರುವ ದೊಡ್ಡ ಅಶ್ವತ್ಥ ಮರದಿಂದ ಬಂದಿದೆ. ಈ ಅಶ್ವತ್ಥ ಮರವು ಧೃತರಾಷ್ಟ್ರ ರಾಜನ ಆಸ್ಥಾನಿಕ ವಿದುರನಿಂದ ನೆಡಲ್ಪಟ್ಟದ್ದರಿಂದ ಈ ಊರಿಗೆ ವಿದುರಾಶ್ವತ್ಥ ಎಂಬ ಹೆಸರು ಬಂದಿದೆ ಎಂದು ಹೇಳಲಾಗಿದೆ. ಕರ್ನಾಟಕದ ಪುಣ್ಯ ಕ್ಷೇತ್ರಗಳಲ್ಲಿ ಒಂದಾದ ಈ ಸ್ಥಳವು ನಾಗರ ಪ್ರತಿಷ್ಠೆ ಮಾಡಲು ಬಹಳ ಹೆಸರುವಾಸಿಯಾಗಿದೆ. ಈ ಸ್ಥಳದಲ್ಲಿ ನಾಗರ ಪ್ರತಿಷ್ಠೆ ಮಾಡಿ ಪೂಜಿಸಿದರೆ, ಸರ್ಪ ದೋಷ ಅಥವಾ ನಾಗ ದೋಷ ನಿವಾರಣೆಯಾಗಿ, ಸಂತಾನವಿಲ್ಲದ ದಂಪತಿಗಳಿಗೆ ಸಂತಾನ ಪ್ರಾಪ್ತಿಯಾಗುತ್ತದೆ ಎಂಬ ಅಪಾರ ನಂಬಿಕೆ. ಆದುದರಿಂದಲೇ, ವಿದುರಾಶ್ವತ್ಥದಲ್ಲಿ ಸಾವಿರಾರು ನಾಗರ ಪ್ರತಿಮೆಗಳನ್ನು ನಾವು ನೋಡಬಹುದು. ■



Download From : www.kpscvaani.com

# ಅಂತರರಾಷ್ಟ್ರೀಯ ಮಾರುಕಟ್ಟೆ ವಿಸ್ತರಣೆಗೆ ಮುಂದಾದ
# ಕರಕುಶಲ ಅಭಿವೃದ್ಧಿ ನಿಗಮ





● ಜಡಿಯಪ್ಪ ಗೆದ್ಲಗಟ್ಟಿ

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಕೇಂದ್ರ ಸರ್ಕಾರದ ಕರಕುಶಲ ಜವಳಿ ಮಂತ್ರಾಲಯ ಸಹಯೋಗದಲ್ಲಿ ನಗರದ ಹೆಚ್ ಎಸ್ ಆರ್ ಲೇಔಟ್‌ನ ಆರನೇ ಸೆಕ್ಟರ್‌ನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಂಕೀರ್ಣದಲ್ಲಿ ಇತ್ತೀಚೆಗೆ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗಿತ್ತು.

ವಸ್ತು ಪ್ರದರ್ಶನ ಮತ್ತು ಮಾರಾಟ (ಕೈಮಗ್ಗ ಜವಳಿ ಮತ್ತು ಆಭರಣ) ಮೇಳದಲ್ಲಿ ಅಭಿವೃದ್ಧಿ ಆಯುಕ್ತರ (ಕರಕುಶಲ) ಕಛೇರಿಯು ನೀಡಿರುವ ಗುರುತಿನ ಚೀಟಿಯನ್ನು ಹೊಂದಿರುವ ರಾಜ್ಯದ ಹಾಗೂ ಇತರೆ ರಾಜ್ಯಗಳ ಕುಶಲಕರ್ಮಿಗಳು ಭಾಗವಹಿಸಿದ್ದರು. ಈ ಮೇಳದ ಮೂಲಕ ಕುಶಲಕರ್ಮಿಗಳಿಗೆ ತಮ್ಮ ವಸ್ತುಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಹಾಗೂ ಗ್ರಾಹಕರ ಬದಲಾಗುತ್ತಿರುವ ಅಭಿರುಚಿ ಮತ್ತು ವಿನ್ಯಾಸದ ಆದ್ಯತೆಗಳ ಬಗ್ಗೆ ತಿಳಿದುಕೊಳ್ಳಲು ಉತ್ತಮವಾದ ವೇದಿಕೆ ಕಲ್ಪಿಸಲಾಗಿತ್ತು.

ಸುಮಾರು 50 ಕರಕುಶಲಕರ್ಮಿಗಳು ಸದರಿ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದರು, ಅವರಿಗಾಗಿ 50 ಸ್ಟಾಲ್‌ಗಳನ್ನು ಉಚಿತವಾಗಿ ಒದಗಿಸಲಾಗಿತ್ತು. ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದ ಹೊರ ರಾಜ್ಯಗಳ ಕುಶಲಕರ್ಮಿಗಳಿಗೆ ಅಭಿವೃದ್ಧಿ ಆಯುಕ್ತರ (ಕರಕುಶಲ) ಕಛೇರಿಯಿಂದ ಟಿ.ಎ., ಡಿಎ ಹಾಗೂ ಮತ್ತಿತರ ವೆಚ್ಚವನ್ನು ಒದಗಿಸಲಾಯಿತು.

**ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಪರಿಚಯ:**

"ಕಾವೇರಿ" ಎಂಬ ಹೆಸರಿನಿಂದಲೇ ಜನಪ್ರಿಯವಾಗಿರುವ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು, ಕರ್ನಾಟಕ ರಾಜ್ಯದಲ್ಲಿರುವ ತನ್ನ 13 ಕಲಾಸಂಕೀರ್ಣಗಳಲ್ಲಿ ನುರಿತ ಕರಕುಶಲಕರ್ಮಿಗಳು ತಯಾರಿಸಿದ ಅಮೂಲ್ಯವಾದ ಕರಕುಶಲ ವಸ್ತುಗಳನ್ನು ವಿಶ್ವದಾದ್ಯಂತ ಮಾರುಕಟ್ಟೆ ಮಾಡುವ ಸಂಸ್ಥೆಯೆಂದೇ ವಿಶ್ವ ವಿಖ್ಯಾತವಾಗಿದೆ.

**ಆತ್ಮ ನಿರ್ಭರ ಭಾರತ ಯೋಜನೆಯಡಿ ಸ್ವದೇಶಿ ಕರಕುಶಲ ವಸ್ತುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಒದಗಿಸುವ ಮೂಲಕ ಕುಶಲಕರ್ಮಿಗಳಿಗೆ ಉತ್ತಮ ವೇದಿಕೆಯನ್ನು ಕಲ್ಪಿಸಲು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಹೆಜ್ಜೆ ಇರಿಸಿದೆ.**



Download From : www.kpscvaani.com

**ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷ ಡಾ: ಬೇಳೂರು ರಾಘವೇಂದ್ರ ಶೆಟ್ಟಿ ಅವರು ಕರಕುಶಲ ಕ್ಷೇತ್ರದಲ್ಲಿ ನಿಗಮದ 50 ಅಂಶಗಳ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ಅವರ ಪ್ರಮುಖ ಯೋಜನೆಗಳು ಇಂತಿವೆ.**

- ತಿರುಪತಿ, ಉಡುಪಿ, ಪುಣೆ, ಶಿರಡಿ, ಚೆನ್ನೈ, ಕೊಲ್ಲಾಪುರದ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಹಾಗೂ ಅಯೋಧ್ಯೆಯಲ್ಲಿ "ಕಾವೇರಿ" ಮಾರಾಟ ಮಳಿಗೆಗಳನ್ನು ತೆರೆಯುವುದು. ಮಧ್ಯಪ್ರದೇಶ, ಚಿಕ್ಕಮಗಳೂರು, ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ವಿವಿಧ ರಾಜ್ಯಗಳ ವಿಮಾನ ನಿಲ್ದಾಣಗಳಲ್ಲಿ ಹೊಸ "ಕಾವೇರಿ" ಮಾರಾಟ ಮಳಿಗೆಗಳನ್ನು ಪ್ರಾರಂಭಿಸುವುದು. ಜನರಿಗೆ ಕೈಗೆಟಕುವ ದರದಲ್ಲಿ ವಸ್ತುಗಳು ಸಿಗುವ ಹಾಗೆ ವ್ಯವಸ್ಥೆ ಮಾಡುವುದು.
- ಈಗಿರುವ ಮಂಗಳೂರಿನ ಮಾರಾಟ ಮಳಿಗೆಯನ್ನು ಉತ್ತಮ ವ್ಯಾಪಾರ ವಹಿವಾಟು ನಡೆಯುವ ಜಾಗಕ್ಕೆ ಸ್ಥಳಾಂತರ ಮಾಡುವುದು.
- ಇಡೀ ರಾಜ್ಯದಲ್ಲಿ ನಿಗಮವು ಗುತ್ತಿಗೆ ಕರಾರು ಮೇರೆಗೆ ಕುಶಲಕರ್ಮಿಗಳಿಗೆ ಹಂಚಿರುವ ವಸತಿ ಕಾರ್ಯಾಗಾರಗಳ ಹಕ್ಕುಪತ್ರ ವಿತರಣೆಯನ್ನು ಕೂಡಲೇ ಕೈಗೊಳ್ಳುವುದು.
- ಕರಕುಶಲ ತಾಣಗಳನ್ನು ಗುರುತಿಸಿ ಅಲ್ಲಿ ಕರಕುಶಲಕರ್ಮಿಗಳ ಉಪಯೋಗಕ್ಕಾಗಿ ಕಲಾ ಸಂಕೀರ್ಣಗಳನ್ನು ಸ್ಥಾಪಿಸುವ ಮೂಲಕ ಅವರಿಗೆ ಸಬ್ಸಿಡಿ ದರದಲ್ಲಿ ಶ್ರೀಗಂಧ ಮತ್ತು ಮರದ ಇನ್ನಿತರೆ ಕಚ್ಚಾ ವಸ್ತುಗಳ ಪೂರೈಕೆ, ಯಂತ್ರಗಳು ಮತ್ತು ಉಪಕರಣಗಳು, ಸಾಮಾನ್ಯ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು. ಅವರು ಉತ್ಪಾದಿಸುವ ಕರಕುಶಲ ವಸ್ತುಗಳನ್ನು ಸಂಗ್ರಹಿಸಿ ನಿಗಮದ "ಕಾವೇರಿ" ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಲು ಯೋಜನೆ ರೂಪಿಸುವುದು.
- ಶಿವಮೊಗ್ಗ ಜಿಲ್ಲೆ ಸಾಗರದ ಶ್ರೀಗಂಧದ ಕಲಾ ಸಂಕೀರ್ಣ ಮತ್ತು ಗುರುಕುಲ ಕರಕುಶಲ ಶಿಕ್ಷಣ ಮತ್ತು ತರಬೇತಿ ಕೇಂದ್ರವನ್ನು ಪ್ರವಾಸಿ ತಾಣವನ್ನಾಗಿ ಮಾರ್ಪಡಿಸುವುದು.
- ಗ್ರಾಮದ ಕರಕುಶಲ ವಸ್ತುಗಳನ್ನು ಫ್ಲಿಪ್‌ಕಾರ್ಟ್, ಅಮೇಜಾನ್‌ನಂತಹ ಸಂಸ್ಥೆಯ ಮೂಲಕ ಆನ್‌ಲೈನ್ ಮಾರಾಟ ಮಾಡಲು ಹೆಚ್ಚು ಉತ್ತೇಜನ ಕೊಡುವುದು.
- ಡಿಜಿಟಲ್ ಮಾರ್ಕೆಟಿಂಗ್ ಮತ್ತು ಬ್ರಾಂಡಿಂಗ್ ಮೂಲಕ ಮಾರಾಟವನ್ನು ವೃದ್ಧಿಗೊಳಿಸುವುದು.
- ಚನ್ನಪಟ್ಟಣದ ಆಟಿಕೆಗಳು ಮತ್ತು ಬೀಟೆ ಮರದ ಕುಂದಣ ಕಲೆ (ಇನ್ಲೇ ವರ್ಕ್) ನಲ್ಲಿ "ಗುರುಕುಲ" ಮಾದರಿಯ ಶಿಕ್ಷಣ ತರಬೇತಿ ಸಂಸ್ಥೆಯನ್ನು ಚನ್ನಪಟ್ಟಣದಲ್ಲಿ ತೆರೆಯುವುದು ಹಾಗೂ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಗೊಳಿಸುವುದು ಮತ್ತು ಶಿಲ್ಪಕಲಾ ಗುರುಕುಲವನ್ನು ಪ್ರಾರಂಭಿಸುವುದು. ಚನ್ನಪಟ್ಟಣದ ಗೊಂಬೆಗೆ ಅಂತರರಾಷ್ಟ್ರೀಯ ಶೈಲಿಯ ಮಾನ್ಯತೆ ನೀಡುವುದು. ಚನ್ನಪಟ್ಟಣದಲ್ಲಿ ವಿಶೇಷವಾಗಿ ಯಾಂತ್ರಿಕ ಗೊಂಬೆಗಳನ್ನು ತಯಾರಿಸಲು ತರಬೇತಿ ಮತ್ತು ಉತ್ತೇಜನ ನೀಡುವುದು ಮತ್ತು ಮಕ್ಕಳ ಅಚ್ಚುಮೆಚ್ಚಿನ ಗೊಂಬೆಗಳಿಗೆ ವಿಷಕಾರಿ ಬಣ್ಣಗಳನ್ನು ಉಪಯೋಗಿಸದೆ ನೈಸರ್ಗಿಕ ಗಿಡಮೂಲಿಕೆ ಬಣ್ಣವನ್ನೇ ಉಪಯೋಗಿಸುವಂತೆ ಕಟ್ಟುನಿಟ್ಟಾಗಿ ಕ್ರಮವಹಿಸುವುದು.
- ನಿಗಮದ ಎಲ್ಲಾ ಮಳಿಗೆಗಳಲ್ಲಿ ಸರಕುಗಳ ನಿರ್ವಹಣೆ ಮತ್ತು ಮಾರಾಟವು ಮಾನವ ಅವಲಂಬಿತವಾಗಿದ್ದು, ಎಲ್ಲಾ ವ್ಯವಹಾರಗಳನ್ನು ಗಣಕೀಕರಣಗೊಳಿಸುವ ಮೂಲಕ ಸರಕುಗಳ ಸೂಕ್ತ ನಿರ್ವಹಣೆ, ಕರಕುಶಲಕರ್ಮಿಗಳ ನಿರ್ವಹಣೆ ಇತ್ಯಾದಿಗಳನ್ನು ಕೇಂದ್ರ ಸ್ಥಾನದಲ್ಲಿ ಯಶಸ್ವಿಯಾಗಿ ನಿರ್ವಹಿಸಲು ಕ್ರಮ ವಹಿಸುವುದು.
- ಮುಜರಾಯಿ ಇಲಾಖೆಗೆ ಒಳಪಡುವ ದೇವಸ್ಥಾನದ ಗೋಪುರಗಳನ್ನು ಮತ್ತು ಪುನರುಜ್ಜೀವನಗೊಳಿಸುವ ಕಲ್ಲಿನ ವಿಗ್ರಹಗಳನ್ನು ನಿಗಮದ ಕರಕುಶಲಕರ್ಮಿಗಳಿಂದಲೇ ಪೂರೈಕೆ ಮಾಡುವುದು.
- ಇಡೀ ರಾಜ್ಯದ ಎಲ್ಲಾ ಕರಕುಶಲಕರ್ಮಿಗಳ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸರ್ವೇ ಮಾಡಿ ಅಂಕಿ–ಅಂಶಗಳನ್ನು ಪಟ್ಟಿ ಮಾಡುವುದು.
- ಕುವೆಂಪು ವಿಶ್ವವಿದ್ಯಾಲಯದೊಂದಿಗೆ ಒಡಬಂಡಿಕೆ ಮಾಡಿಕೊಂಡು ಕರಕುಶಲ ಕಲೆಯಲ್ಲಿ ಗುರುಕುಲದಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಸರ್ಟಿಫಿಕೇಟ್ ನೀಡಲು ಪ್ರಸ್ತಾವನೆ ಸಲ್ಲಿಸುವುದು.
- ರಾಮನಗರದಲ್ಲಿ ಶಿಲ್ಪಕಲೆಯಲ್ಲಿ ನಿರತರಿಗೆ ಒಂದು ಎಕರೆ ಜಾಗದಲ್ಲಿ ನೇರ, ಕೆತ್ತನೆ, ಪ್ರಾತ್ಯಕ್ಷಿಕೆ ಪ್ರದರ್ಶನ ಮತ್ತು ಮಾರಾಟ ಮಾಡಲು ಸಂಕೀರ್ಣವನ್ನು ಅಭಿವೃದ್ಧಿ ಪಡಿಸುವುದು.
- ಕುಂದಾಪುರದಲ್ಲಿ ಮಡಿಕೆ, ಕಲ್ಲಿನ ಕೆತ್ತನೆ ಮತ್ತು ಮರದ ಕೆತ್ತನೆಯ ಸುಸಜ್ಜಿತವಾದ ತಯಾರಿಕಾ ಘಟಕವನ್ನು ಸ್ಥಾಪಿಸುವುದು.
- ನಿಗಮದ ಕೇಂದ್ರ ಕಚೇರಿಯ ಕಟ್ಟಡವನ್ನು ನವೀಕರಿಸಿ, ಎರಡು ಮಹಡಿಗಳನ್ನು ಕಚೇರಿಗಾಗಿ ಹಾಗೂ ಮೂರು ಮಹಡಿಗಳನ್ನು ಮಾರಾಟ ಮಳಿಗೆಗಾಗಿ ಮೀಸಲಿಡುವುದು ಹಾಗೂ ಒಳ ಅಲಂಕರಣದ ಮಾದರಿ ರೂಪಿಸುವುದು.
- ರಾಮನಗರದ ಕಲಾ ಸಂಕೀರ್ಣದಲ್ಲಿ ಕುಂಬಾರಿಕೆ ಕಲೆಯನ್ನು ಪುನರ್ ಪ್ರಾರಂಭಿಸಿ, ಕಲ್ಲು ಕೆತ್ತನೆಗೆ ಸ್ಥಳವನ್ನು ಪ್ರತ್ಯೇಕವಾಗಿ ಇರಿಸುವುದು ಹಾಗೂ ಸೇಲ್ಸ್ ಕೌಂಟರ್ ತೆರೆಯುವುದು. 1.25 ಎಕರೆ ಜಾಗದಲ್ಲಿ ಕರಕುಶಲಕರ್ಮಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸುವುದು.
- ಮೈಸೂರಿನ 18 ಎಕರೆ 11 ಗುಂಟೆ ನಿಗಮದ ಜಾಗದಲ್ಲಿ ಕಲಾ ಸಂಕೀರ್ಣವನ್ನು, 6 ಎಕರೆ ಜಾಗವನ್ನು ಟೂರಿಸ್ಟ್ ಡೆಸ್ಟಿನೇಶನ್ ಆಗಿ ಪರಿವರ್ತಿಸುವುದು ಹಾಗೂ ಕರಕುಶಲಕರ್ಮಿಗಳಿಗೆ ಹಕ್ಕು ಪತ್ರವನ್ನು ನೀಡುವುದು.



Download From : www.kpscvaani.com

- ಸಿರಸಿ, ಬೀದರ್ ಮತ್ತು ಶಿವಾರಪಟ್ಟಣದ ಕಲಾ ಸಂಕೀರ್ಣದಲ್ಲಿ ನಿಗಮವು ಕರಕುಶಲಕರ್ಮಿಗಳಿಗೆ ಹಂಚಿಕೆ ಮಾಡಿರುವ ಮನೆಗಳ ಹಕ್ಕುಪತ್ರಗಳನ್ನು ಕರಕುಶಲ ಕರ್ಮಿಗಳಿಗೆ ಹಂಚುವುದು.
- ನವಲಗುಂದದಲ್ಲಿ ತಯಾರಾಗುವ ಜಮಾಖಾನೆಗೆ ಭೌಗೋಳಿಕ ಗುರುತಿಸುವಿಕೆಗೆ (Geographical Identification) ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
- ದೊಡ್ಡಬಿದರಕಲ್ಲಿನಲ್ಲಿ ಕಲಾಗ್ರಾಮ, ಥೀಮ್ ಪಾರ್ಕ್, ಲೈವ್ ಡೆಮೊ ಸೆಂಟರ್, ಪೋಡಿಯಂ ನಿರ್ಮಿಸುವ ಯೋಜನೆಯನ್ನು ರೂಪಿಸುವುದು.
- ದೇಶಿ ಹಾಗೂ ವಿದೇಶಿ ಪ್ರವಾಸಿಗರನ್ನು ಕಾವೇರಿ ಮಳಿಗೆಗಳಿಗೆ ಭೇಟಿ ನೀಡುವಂತೆ ಪ್ರೇರೆಪಿಸಲು ಓಲಾ/ಊಬರ್ ಮುಂತಾದ ಸಾರಿಗೆ ಏಜೆನ್ಸಿ ಹಾಗೂ ವಿದೇಶಿ ಸಾರಿಗೆ ಏಜೆನ್ಸಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು.
- ಈವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಅವರುಗಳು ಆಯೋಜಿಸುವ ಸಭೆ/ಸಮಾರಂಭಗಳಲ್ಲಿ ಕರಕುಶಲ ವಸ್ತುಗಳನ್ನು ಪ್ರದರ್ಶಿಸಲು ಕ್ರಮವಹಿಸುವುದು ಮತ್ತು ಅವರುಗಳು ಉಡುಗೊರೆಗಳನ್ನು ನಿಗಮದಿಂದಲೇ ಖರೀದಿಸಲು ಅನುವಾಗುವಂತೆ ರಿಯಾಯತಿ ದರದಲ್ಲಿ ಪ್ರತಿ ರೂ. 5,000–50,000 ಖರೀದಿಗೆ ಸಿಲ್ವರ್ ಕಾರ್ಡ್, ರೂ. 51,000–1.00 ಲಕ್ಷ ಖರೀದಿಗೆ ಗೋಲ್ಡ್, ರೂ. 1.00 ಲಕ್ಷದಿಂದ 2.00 ಲಕ್ಷವರೆಗಿನ ಮೇಲ್ಪಟ್ಟು ಖರೀದಿಗೆ ಡೈಮಂಡ್ ಕಾರ್ಡ್‌ಗಳನ್ನು ವಿತರಿಸುವ ವ್ಯವಸ್ಥೆ ಮಾಡುವುದು.
- ಕುಂಬಾರಿಕೆ ಕಲೆಯನ್ನು ಅಭಿವೃದ್ಧಿಪಡಿಸಲು ಅವರುಗಳ ಉತ್ಪನ್ನಗಳನ್ನು "ಕಾವೇರಿ" ಮಾರಾಟ ಮಳಿಗೆಗಳಲ್ಲಿ ನೇರ ಪ್ರಾತ್ಯಕ್ಷಿಕೆ, ಪ್ರದರ್ಶನ ಮತ್ತು ಮಾರಾಟ ಮಾಡಲು ಕ್ರಮವಹಿಸಲಾಗುವುದು ಮತ್ತು ರಾಜಸ್ಥಾನದಲ್ಲಿ ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಬಳಸಲಾಗುವ ಪದ್ಧತಿಯನ್ನು ತಿಳಿದುಕೊಂಡು ಅಲ್ಲಿನ ಮಾದರಿಯನ್ನು ನಮ್ಮಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸುವುದು. ಕುಂಬಾರಿಕೆಯವರಿಗೆ ಅರಣ್ಯ ಇಲಾಖೆಯಿಂದ ಸೌದೆಯನ್ನು ಉಚಿತ ಹಾಗೂ ಸಬ್ಸಿಡಿ ದರದಲ್ಲಿ ನೀಡಲು ಪ್ರಸ್ತಾವನೆಯನ್ನು ಸಲ್ಲಿಸುವುದು.
- ಬಿದಿರಿನ ಕಲೆ ಮಾಡುವವರಿಗೆ ಅರಣ್ಯ ಇಲಾಖೆಯಿಂದ ಉಚಿತವಾಗಿ ಅಥವಾ ಸಬ್ಸಿಡಿ ದರದಲ್ಲಿ ಬಿದಿರನ್ನು ಕೊಡಿಸುವುದು ಮತ್ತು ಬಿದಿರು ಬೆಳೆಗೆ ಹೆಚ್ಚಿನ ಉತ್ತೇಜನ ನೀಡುವುದರ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
- ಹುಬ್ಬಳ್ಳಿಯಲ್ಲಿ ಅಥವಾ ನವಲಗುಂದದಲ್ಲಿ ಹೊಸ ತಯಾರಿಕಾ ಘಟಕವನ್ನು ಸ್ಥಾಪಿಸುವುದು.



> ಕರಕುಶಲ ವಸ್ತುಗಳನ್ನು ಫ್ಲಿಪ್‌ಕಾರ್ಟ್, ಅಮೇಜಾನ್‌ನಂತಹ ಸಂಸ್ಥೆಯ ಮೂಲಕ ಆನ್‌ಲೈನ್ ಮಾರಾಟ ಮಾಡಲು ಹೆಚ್ಚು ಉತ್ತೇಜನ ಕೊಡುವುದು. ಡಿಜಿಟಲ್ ಮಾರ್ಕೆಟಿಂಗ್ ಮತ್ತು ಬ್ರಾಂಡಿಂಗ್ ಮೂಲಕ ಮಾರಾಟವನ್ನು ವೃದ್ಧಿಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಸಜ್ಜಾಗಿದೆ.

ಕರ್ನಾಟಕ ರಾಜ್ಯದ ಪಾರಂಪರಿಕ ಕರಕುಶಲಕಲೆಗಳನ್ನು ಉಳಿಸಿ, ಬೆಳೆಸಿ, ಪ್ರೋತ್ಸಾಹಿಸಲು 1964 ರಲ್ಲಿ ಸ್ಥಾಪನೆಯಾದ ನಿಗಮವು "ಕಾವೇರಿ" ಕರ್ನಾಟಕ ರಾಜ್ಯ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಎಂಪೋರಿಯಂ ಬ್ರಾಂಡಿನಡಿ ಒಟ್ಟು 12 ಮಾರಾಟ ಮಳಿಗೆಗಳನ್ನು ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಮಡಿಕೇರಿ, ಸಿಕಂದರಾಬಾದ್, ಗುಜರಾಜ್, ಕೊಲ್ಕತ್ತ ಹಾಗೂ ನವದೆಹಲಿಯಲ್ಲಿ ತೆರೆದಿರುತ್ತದೆ.

ನಿಗಮವು 13 ಕಲಾಸಂಕೀರ್ಣಗಳನ್ನು ಸ್ಥಾಪಿಸಿ, ಅಲ್ಲಿ ಕರಕುಶಲಕರ್ಮಿಗಳಿಗೆ ವಾಸಿಸಲು ಹಾಗೂ ತಮ್ಮ ಕರಕುಶಲಕಲೆಯ ಕಾರ್ಯಚಟುವಟಿಕೆಗಳನ್ನು ನಡೆಸಲು ಅವಶ್ಯವಿರುವ ಸೌಲಭ್ಯಗಳನ್ನು ಒದಗಿಸಿರುತ್ತದೆ. ಸಮಯಕ್ಕನುಗುಣವಾಗಿ ಬದಲಾಗುತ್ತಿರುವ ಕರಕುಶಲ ಪ್ರೇಮಿಗಳ ಅಭಿರುಚಿ ಮತ್ತು ಆದ್ಯತೆಗಳಿಗೆ ತಕ್ಕಂತೆ ಕರಕುಶಲ ವಸ್ತುಗಳನ್ನು ತಯಾರಿಸಲು ಬೇಕಾಗಿರುವ ಸಾಮರ್ಥ್ಯವನ್ನು ಕುಶಲಕರ್ಮಿಗಳಲ್ಲಿ ರೂಢಿಸಲು, ಅವರಿಗೆ ಅವಶ್ಯವಿರುವ ತಾಂತ್ರಿಕ ಮತ್ತು ವಿನ್ಯಾಸ ಅಭಿವೃದ್ಧಿಯಲ್ಲಿ ಆಗಿಂದಾಗ್ಗೆ ತರಬೇತಿ ನೀಡಲಾಗುತ್ತದೆ. ಕರಕುಶಲಕರ್ಮಿಗಳು ಬಳಸುವ ಕಚ್ಚಾ ವಸ್ತುಗಳಾದ ಶ್ರೀಗಂಧ, ಬೆಳ್ಳಿ ಮತ್ತು ಸತು ಶೇ.50 ರ ರಿಯಾಯಿತಿ ದರದಲ್ಲಿ ನೊಂದಾಯಿತ ಕುಶಲಕರ್ಮಿಗಳಿಗೆ ಒದಗಿಸಲಾಗುತ್ತದೆ. ಕಲಾ ಸಂಕೀರ್ಣಗಳಲ್ಲಿರುವ ಸಾಮಾನ್ಯ ಸೌಲಭ್ಯ ಕೇಂದ್ರಗಳಲ್ಲಿ ಕರಕುಶಲಕರ್ಮಿಗಳು ಬಳಸುವಂತಹ ಯಂತ್ರೋಪಕರಣಗಳನ್ನು ಅಳವಡಿಸಲಾಗಿರುತ್ತದೆ.

ನಿಗಮವು 2020–21 ನೇ ಸಾಲಿನಲ್ಲಿ ಕೋವಿಡ್–19 ರ ಪರಿಣಾಮದಿಂದಾಗಿ ವ್ಯಾಪಾರ ವಹಿವಾಟಿನಲ್ಲಿ ಗಣನೀಯವಾಗಿ ಇಳಿಕೆಯಾಗಿದ್ದು ನಿಗಮವು ವ್ಯಾಪಾರವನ್ನು ವೃದ್ಧಿಸಲು ಈಗಾಗಲೇ



Download From : www.kpscvaani.com



## ರಾಜ್ಯ ಕರಕುಶಲ ಮಾರುಕಟ್ಟೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲೂ ವಿಸ್ತರಣೆ ಮಾಡಲು ಕ್ರಮ:

ಈ ಮೇಳವನ್ನು ಉದ್ಘಾಟಿಸಿ ಮಾತಾನಾಡಿದ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಸಚಿವರಾದ ಸಿ.ಸಿ. ಪಾಟೀಲ್ ಅವರು ಕರಕುಶಲತೆ ನಮ್ಮ ಪರಂಪರೆ ಮತ್ತು ಸಂಸ್ಕೃತಿಯಾಗಿದೆ. ಅದನ್ನು ಉಳಿಸಿ-ಬೆಳಸುವ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮವು ರಾಜ್ಯದಲ್ಲಿ ಕರಕುಶಲ ಕರ್ಮಿಗಳಿಗೆ ಉತ್ತೇಜನ ನೀಡುವ ಮೂಲಕ ಕರಕುಶಲ ಕರ್ಮಿಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಹಾಗೂ ಮಾರುಕಟ್ಟೆಯನ್ನು ವಿಸ್ತರಿಸುವಲ್ಲಿ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಅಂತೆಯೇ, ಕಲಾವಿದರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಅಗತ್ಯವಿದೆ. ಅದಕ್ಕಾಗಿ ಕರಕುಶಲ ಮಾರುಕಟ್ಟೆಯನ್ನು ವಿಸ್ತರಿಸುವ ದೃಷ್ಟಿಯಿಂದ ಇಂತಹ ಪ್ರದರ್ಶನ ಮತ್ತು ಮಾರಾಟ ಮೇಳದ ವ್ಯವಸ್ಥೆಯನ್ನು ರಾಜ್ಯದ ವಿವಿಧೆಡೆಗಳಲ್ಲಿ ಮಾಡಲಾಗುತ್ತಿದೆ ಎಂದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕರ್ನಾಟಕದ ಚನ್ನಪಟ್ಟಣದ ಬೊಂಬೆಗಳ ಕುರಿತು ಅಂತರರಾಷ್ಟ್ರೀಯಮಟ್ಟದಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆತ್ಮ ನಿರ್ಭರ ಭಾರತ್ ಯೋಜನೆಯ ಅಭಿಲಾಷೆ ಮತ್ತು ಆಶಯದಂತೆ ನಮ್ಮ ನೆಲದ ಕಲೆಯ ಕರಕುಶಲತೆಯನ್ನು ಉತ್ತೇಜಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರಾಜ್ಯ ಸರ್ಕಾರ ಯೋಜಿಸುತ್ತಿದೆ.

ನಿಗಮದ ವತಿಯಿಂದ ತಿರುಪತಿ, ಅಯೋಧ್ಯೆ, ಉಡುಪಿ, ಶಿರಡಿ ಮತ್ತು ನವದೆಹಲಿ ಸೇರಿದಂತೆ 12 ಸ್ಥಳಗಳಲ್ಲಿ ಮಳಿಗೆಗಳನ್ನು ತೆರೆಯಲು ಉದ್ದೇಶಿಸಿಲಾಗಿದೆ. ಅಲ್ಲದೆ, ಈಗಾಗಲೇ ಈ ಕುರಿತು ಸವಿಸ್ತಾರವಾಗಿ ಯೋಜನೆ ರೂಪಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಾಗೂ ಅಂತರರಾಷ್ಟ್ರೀಯಮಟ್ಟದಲ್ಲಿ ಮಾರುಕಟ್ಟೆಯನ್ನು ವಿಸ್ತರಿಸುವ ಯೋಜನೆಯಡಿಯಲ್ಲಿ ವಿಶ್ವದಲ್ಲೇ ಅತಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ದೇಶಗಳಲ್ಲಿ ಅಲ್ಲಿನ ಸ್ಥಳೀಯ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಫ್ರಾಂಚೈಸಿ ರೂಪದಲ್ಲಿ ಮಳಿಗೆಗಳನ್ನು ತೆರೆಯಲು ಚಿಂತನೆ ನಡೆಸಲಾಗಿದೆ ಎಂದು ಹೇಳಿದರು.

ರಾಜ್ಯ ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಸತೀಶ್‌ರೆಡ್ಡಿ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾದ ಡಿ. ರೂಪ ಮೌದ್ಗಿಲ್ ಹಾಗೂ ನಿರ್ದೇಶಕರಾದ ಜಿ.ಎಸ್. ದಯಾನಂದ ಅವರು ಉಪಸ್ಥಿತರಿದ್ದರು.



ಆನ್‌ಲೈನ್ ಮಾರುಕಟ್ಟೆಯಾದ ಫ್ಲಿಪ್‌ಕಾರ್ಟ್ ಸಮರ್ಥ್ (Flipkart Samarth) ಮತ್ತು ಅಮೆಜಾನ್ ಕಾರಿಗಾರ್ (Amazon karigar) ಹಾಗೂ ಗೌರ್ನಮೆಂಟ್ ಇ-ಮಾರ್ಕೆಟ್ (GeM portal) ಗಳಲ್ಲಿ ಕರಕುಶಲಕಲೆಗಳನ್ನು ಮಾರಾಟ ಮಾಡಲು ಮೇಲ್ಕಂಡ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ನಿಗಮವು IRHPL ಮುಖಾಂತರ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಟರ್ಮಿನಲ್ -1 ರಲ್ಲಿ ಕರಕುಶಲ ವಸ್ತುಗಳನ್ನು ಮಾರಾಟ ಮಾಡಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಮುಂದುವರೆದು, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಟರ್ಮಿನಲ್-2 ರಲ್ಲಿ 'ಕಾವೇರಿ' ಮಾರಾಟ ಮಳಿಗೆಯನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಕರಕುಶಲಕರ್ಮಿಗಳಿಗೆ ಇನ್ನೂ ಹೆಚ್ಚಿನ ಮಾರುಕಟ್ಟೆ ಸಹಾಯ ಒದಗಿಸುವ ನಿಟ್ಟಿನಲ್ಲಿ ನಿಗಮವು 2020-21 ನೇ ಸಾಲಿನಲ್ಲಿ ಅಭಿವೃದ್ಧಿ ಆಯುಕ್ತರು (ಕರಕುಶಲ) ರವರ ಕಛೇರಿ, ಜವಳಿ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ, ಇವರ ಧನ ಸಹಾಯದಲ್ಲಿ ಅನೇಕ ವಸ್ತು ಪ್ರದರ್ಶನಗಳನ್ನು ಹಮ್ಮಿಕೊಂಡಿದೆ.



Download From : www.kpscvaani.com

# ಕೋವಿಡ್ ಲಸಿಕೆ ಅಭಿಯಾನದಲ್ಲಿ ಕರ್ನಾಟಕದ ಮುನ್ನಡೆ...

**ಕೋವಿಡ್ 19 ರ ಲಸಿಕೆ ಸ್ವೀಕರಿಸುವ ಪರವಾಗಿ ನಾಗರೀಕರಲ್ಲಿ ವಿಶ್ವಾಸ ಹೆಚ್ಚಿಸಲು, ಮುಖ್ಯಮಂತ್ರಿಗಳು ರೋಗ ನಿರೋಧಕ ಕಾರ್ಯಾಚರಣೆಗೆ ಒತ್ತು ನೀಡಿದ್ದಾರೆ.**



ಕೆ ವಿಶ್ವನಾಥ್

(ಅನುವಾದ– ಶ್ರೀನಿವಾಸ ಕಶ್ಯಪ್)

ಕರ್ನಾಟಕ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಜನರಿಗೆ ಲಸಿಕೆ ನೀಡುವ ಹಾದಿಯನ್ನು ಉಜ್ವಲವಾಗಿ ಕ್ರಮಿಸುತ್ತಿದೆ.

ಕೊರೊನಾ ಪಿಡುಗಿನ ವಿರುದ್ಧ ರೋಗ ನಿರೋಧಕ ಶಕ್ತಿ ಬೆಳಸಲು ದೇಶಾದ್ಯಂತ ಶುರುವಾದ ಲಸಿಕೆ ಕಾರ್ಯಾಚರಣೆಯಲ್ಲಿ, ಮುಖ್ಯಮಂತ್ರಿಗಳಾದ ಬಿ. ಎಸ್. ಯಡಿಯೂರಪ್ಪನವರ ಮುಂದಾಳತ್ವದಲ್ಲಿ ಕರ್ನಾಟಕ ಸರ್ಕಾರವು ತನ್ನ ನೇತೃತ್ವ ವಹಿಸುತ್ತಾ ಉದ್ದೇಶಿತ ಜನರಿಗೆ ಲಸಿಕೆ ತಲುಪಿಸುವ ಮಾನದಂಡದಲ್ಲಿ ವಿವಿಧ ರಾಜ್ಯಗಳ ಪೈಕಿ ಕರ್ನಾಟಕ ಅಗ್ರ ಸ್ಥಾನದಲ್ಲಿ ನಿಂತಿದೆ.

ಲಸಿಕೆಯ ಪರಿಣಾಮವನ್ನು ರುಜುವಾತು ಮಾಡಲು ಮತ್ತು ಸ್ವತ: ಮಾದರಿಯಾಗಿ ಮುನ್ನೆಡೆಸುವ ಯಡಿಯೂರಪ್ಪನವರ ಕಾರ್ಯಶೈಲಿಯ ಪರಿಣಾಮವಾಗಿ ಸ್ವತಃ ಮುಖ್ಯಮಂತ್ರಿಗಳೇ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್ –19 ಲಸಿಕೆಯನ್ನು ಪಡೆದರು.

ಈ ಲಸಿಕಾ ಅಭಿಯಾನದಲ್ಲಿ ಸದಾ ಸಕ್ರಿಯವಾಗಿರುವ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು, ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರೊಟ್ಟಿಗೆ ಸೇರಿ, ಜನರಲ್ಲಿ ವಿಶ್ವಾಸವನ್ನು ಇಮ್ಮಡಿಗೊಳಿಸಿದ್ದಾರೆ ಹಾಗೂ ಇಲ್ಲಿಯವರೆಗೂ ರಾಜ್ಯದ 11.84 ಲಕ್ಷ ಜನರನ್ನು ಮುಟ್ಟಿರುವ ಈ ಬೃಹತ್ ಅಭಿಯಾನಕ್ಕೆ ಸಾಕ್ಷಿಯಾಗಿದ್ದಾರೆ.

ಕೊಟ್ಟ ಮಾತನ್ನು ತಪ್ಪದಂತೆ, " ಅವರು ಎಂದು ಲಸಿಕೆ ನೀಡುವರೋ ಅಂದು ತೆಗೆದುಕೊಳ್ಳುವೆ " ಎಂಬ ತಮ್ಮ ನುಡಿಯನ್ನು ಅಕ್ಷರಶಃ ಪರಿಪಾಲಿಸಿದ್ದಾರೆ. ಕೋವಿಡ್ ಲಸಿಕೆಯ ಅಂಗವಾಗಿ ತಯಾರಿಸಿರುವ ವಿಶೇಷ ಅಂಚೆ ಚೀಟಿಯನ್ನು ಅನಾವರಣಗೊಳಿಸಿದರು.



Download From : www.kpscvaani.com



ಹಿರಿಯರೊಬ್ಬರು ಲಸಿಕೆ ಪಡೆದ ಸಂದರ್ಭ

ಒಂದಕ್ಕಿಂತ ಹೆಚ್ಚು ರೋಗವುಳ್ಳ 45 ವರ್ಷಕ್ಕಿಂತ ಮೇಲ್ಪಟ್ಟ ಮತ್ತು 60 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲ ನಾಗರಿಕರಿಗೂ ಹಾಗೂ ಆರೈಕ ಸಿಬ್ಬಂದಿ, ವೈದ್ಯರು ಮತ್ತು ವಿವಿಧ ಕ್ಷೇತ್ರಗಳಲ್ಲಿರುವ ಪ್ರಮುಖ ಮುಖಂಡರನ್ನು ಒಳಗೊಂಡಿರುವ ಫ್ರಂಟ್ ಲೈನ್ ಕಾರ್ಮಿಕರಿಗೆ ರಾಜ್ಯದ ವಿವಿಧೆಡೆ ಲಸಿಕೆ ನೀಡಲಾಗುತ್ತಿದೆ. ಲಸಿಕೆ ಪಡೆದ 11.84 ಲಕ್ಷಕ್ಕೂ ಹೆಚ್ಚು ಜನರಲ್ಲಿ, 2.55 ಲಕ್ಷಕ್ಕೂ ಹೆಚ್ಚು ಜನರು ಸಹ-ಅಸ್ವಸ್ಥತೆಯುಳ್ಳ 45 ವರ್ಷಕ್ಕಿಂತ ಮೇಲ್ಪಟ್ಟ ಮತ್ತು 60 ವರ್ಷಕ್ಕಿಂತ ಮೇಲ್ಪಟ್ಟ ಜನರು ಸೇರಿದ್ದಾರೆ.



ಇನ್ಫೋಸಿಸ್‌ನ ನಾರಾಯಣ ಮೂರ್ತಿ ಅವರು

ಮಾರ್ಚ್ 1 ರಿಂದ ರಾಜ್ಯದಲ್ಲಿ 1,37,548 ರಷ್ಟು ಹಿರಿಯ ನಾಗರಿಕರಿಗೆ ಲಸಿಕೆ ನೀಡಲಾಗಿದೆ. ಇದಲ್ಲದೆ, ಸಹ-ಅಸ್ವಸ್ಥತೆಯುಳ್ಳ 45 ವರ್ಷಕ್ಕಿಂತ ಮೇಲ್ಪಟ್ಟ 23,236 ಜನರಿಗೆ ಇದುವರೆಗೆ ಲಸಿಕೆ ನೀಡಲಾಗಿದೆ. ಇಲ್ಲಿಯವರೆಗೆ, ಒಟ್ಟು 4,67,666 ಆರೋಗ್ಯ ಕಾರ್ಯಕರ್ತರು ಮತ್ತು 1,69,135 ಮುಂಚೂಣಿ ಕಾರ್ಮಿಕರು ಲಸಿಕೆಯ ಮೊದಲ ಪ್ರಮಾಣವನ್ನು ತೆಗೆದುಕೊಂಡಿದ್ದಾರೆ ಹಾಗೂ 2,56,404 ಆರೋಗ್ಯ ಕಾರ್ಯಕರ್ತರು ಎರಡನೇ ಪ್ರಮಾಣವನ್ನೂ ತೆಗೆದುಕೊಂಡಿದ್ದಾರೆ.



ಉಪ ಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ ಅವರು

ಹಿರಿಯ ನಾಗರಿಕರು ಮತ್ತು ರೋಗ ಲಕ್ಷಣಗಳಿರುವ 45 ವರ್ಷ ಮೇಲ್ಪಟ್ಟ ನಾಗರಿಕರನ್ನು ಸೇರಿದಂತೆ ಲಸಿಕೆ ಪಡೆದ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕಾರ್ಮಿಕರ ಸಂಖ್ಯೆ 10 ಲಕ್ಷವನ್ನು ಮೀರಿದೆ. ನೀಡಿದ ಒಟ್ಟು ಲಸಿಕೆಗಳಲ್ಲಿ 44% ರಷ್ಟು ಆರೋಗ್ಯ ಕಾರ್ಯಕರ್ತರಿಗೆ ಲಸಿಕೆಯ ಮೊದಲ ಪ್ರಮಾಣವನ್ನು ಮತ್ತು 24% ರಷ್ಟು ಎರಡನೇ ಪ್ರಮಾಣವನ್ನು ನೀಡಲಾಗಿದೆ. ಇದರಲ್ಲಿ ಮುಂಚೂಣಿ ಕಾರ್ಯಕರ್ತರ ಕೊಡುಗೆ ಸುಮಾರು ಶೇಕಡ 16 ರಷ್ಟಿದೆ.

ಬೇಡಿಕೆಗಳನ್ನು ಎದುರಿಸಲು, ಆರಂಭದಲ್ಲಿ ಪ್ರತಿ ಜಿಲ್ಲೆಯ ಎರಡು ಖಾಸಗಿ ಆಸ್ಪತ್ರೆಗಳು ಮತ್ತು ಬೆಂಗಳೂರಿನ 18 ಆಸ್ಪತ್ರೆಗಳನ್ನು ಒಳಗೊಂಡಂತೆ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಲಸಿಕೆ ಕೇಂದ್ರಗಳನ್ನು ಪ್ರಾರಂಭಿಸಿದ ರಾಜ್ಯ ಆರೋಗ್ಯ ಇಲಾಖೆಯು, ತನ್ನ ಎರಡನೇ ವಾರದಲ್ಲೇ ಈ ಕಾರ್ಯಕ್ರಮವನ್ನು 3,000 ಲಸಿಕೆ ಕೇಂದ್ರಗಳಿಗೆ ವಿಸ್ತರಿಸಿತು.



ವಸತಿ ಸಚಿವ ವಿ. ಸೋಮಣ್ಣ ಅವರು

ಮುಖ್ಯಮಂತ್ರಿ ಯಡಿಯೂರಪ್ಪನವರು ರಾಜ್ಯ ಮತ್ತು ದೇಶದ ಇತರ ಅನೇಕ ಹಿರಿಯ ರಾಜಕೀಯ ನಾಯಕರಂತೆ ಆಗಸ್ಟ್ ನಲ್ಲಿ ಕೋವಿಡ್ ಸೋಂಕಿಗೆ ಒಳಪಟ್ಟು, ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಸುಮಾರು ಎಂಟು ದಿನಗಳ ಕಾಲ ತಮ್ಮನ್ನು ತಾವು ನಿರ್ಬಂಧಿಸಿಕೊಂಡಿದ್ದರು ಎಂದು ಈ ಸಂಧರ್ಭದಲ್ಲಿ ನೆನಪಿಸಿ ಕೊಳ್ಳಬಹುದು.



ಇಸ್ರೋ ಅಧ್ಯಕ್ಷರು ಮತ್ತು ವಿಜ್ಞಾನಿ ಡಾ.ಕೆ.ಶಿವನ್ ಅವರು

**ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಯಾವಾಗ ವಿಜ್ಞಾನಿಗಳು ಲಸಿಕೆಯನ್ನು ಕಂಡುಹಿಡಿಯುತ್ತಾರೋ ? ಎಂದು ಲಸಿಕೆಯ ನಿರೀಕ್ಷೆಯಲ್ಲಿದ್ದ ಜನರೇ, ಅಪಪ್ರಚಾರದಿಂದಾಗಿ ಲಸಿಕೆ ಹಾಕಿಸಿಕೊಳ್ಳಲು ಹಿಂಜರಿಯ ತೊಡಗಿದರು. ಜನರಿಗೆ ಲಸಿಕೆಯ ಮೇಲೆ ನಂಬಿಕೆಯನ್ನು ಉಂಟು ಮಾಡುವ ಉದ್ದೇಶದಿಂದ ಪ್ರಧಾನಮಂತ್ರಿ, ರಾಷ್ಟ್ರಪತಿ, ಮುಖ್ಯಮಂತ್ರಿ, ರಾಜ್ಯಪಾಲರು, ಖ್ಯಾತ ವಿಜ್ಞಾನಿಗಳು, ವೈದ್ಯರುಗಳು ಲಸಿಕೆಯನ್ನು ಹಾಕಿಸಿಕೊಂಡರು. ಆಗ ಜನರಿಗೆ ಲಸಿಕೆಯಿಂದ ತಮ್ಮ ಪ್ರಾಣಕ್ಕೆ ಯಾವುದೇ ಹಾನಿ ಇಲ್ಲ ಎಂಬುದು ಅರಿವಾಯಿತು ಹಾಗೂ ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬರಲಾರಂಭಿಸಿದರು.**



Download From : www.kpscvaani.com

## ಲಸಿಕೆ : ಯಾರು, ಎಲ್ಲಿ, ಯಾವಾಗ, ಹೇಗೆ, ಏನು ?

**ಯಾವಾಗ ಲಸಿಕೆ ಪಡೆಯಬಹುದು ?**

ಲಸಿಕೆಯನ್ನು ನಿಗದಿತ ಆಸ್ಪತ್ರೆಗಳಲ್ಲಿ ವಾರದ 4 ದಿನಗಳಲ್ಲಿ ನೀಡಲಾಗುವುದು – ಸೋಮವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರ.

**ಲಸಿಕೆಯನ್ನು ಎಲ್ಲಿ ಪಡೆಯಬಹುದು?**

ಸರ್ಕಾರಿ ಸೌಲಭ್ಯಗಳಲ್ಲಿ ಮತ್ತು ಖಾಸಗಿ ಆಸ್ಪತ್ರೆಗಳ ಎಲ್ಲಾ ಕೆಲಸದ ದಿನಗಳಲ್ಲಿ.

**ಹೇಗೆ ನೀಡಲಾಗುವುದು ?**

ದಿನಕ್ಕೆ ಲಸಿಕೆಯ ಸಂಖ್ಯೆಯನ್ನು ಪ್ರತಿ ಕೇಂದ್ರಕ್ಕೆ 200 ಕ್ಕೆ ಸೀಮಿತಗೊಳಿಸಲಾಗಿದೆ. ಇದನ್ನು ಮೊದಲು ಬಂದವರಿಗೆ, ಮೊದಲ ಆದ್ಯತೆ ಆಧಾರದ ಮೇಲೆ ನೀಡಲಾಗುವುದು. ಆದಾಗ್ಯೂ, ಆನ್‌ಲೈನ್‌ನಲ್ಲಿ ನೋಂದಾಯಿಸಿ ಕೊಳ್ಳುವವರಿಗೆ ಒಂದು ದಿನದಲ್ಲಿ ನಿರ್ದಿಷ್ಟ ಸಮಯವನ್ನು ನೀಡಲಾಗುತ್ತದೆ.

**ನೋಂದಾಯಿಸಿಕೊಳ್ಳುವುದು ಹೇಗೆ ?**

ನೋಂದಾಯಿಸುವಾಗ ನಾಗರಿಕರು ತಮ್ಮ ಲಸಿಕಾ ಕೇಂದ್ರಗಳನ್ನು ಆಯ್ಕೆ ಮಾಡಬಹುದು ಅಥವಾ ಅವರು ತಮ್ಮ ಆಯ್ಕೆಯ ಕೇಂದ್ರದಲ್ಲಿ ತಾವೇ ಭೇಟಿ ನೀಡಿ ನೋಂದಾಯಿಸಿ ಕೊಳ್ಳಬಹುದು. ಕೇಂದ್ರವು ನಿಗದಿಪಡಿಸಿದ ಮೂರು ಮಾರ್ಗಗಳ ಮೂಲಕ ನಾಗರಿಕರು ಲಸಿಕೆ ಪಡೆಯಲು ನೋಂದಾಯಿಸಿಕೊಳ್ಳಬಹುದು.

**ಮುಂಚಿತವಾಗಿ ಸ್ವಯಂ ನೋಂದಣಿ:** ಕೋ–ವಿನ್ 2.0 ಅಪ್ಲಿಕೇಶನ್ ಡೌನ್ಲೋಡ್ ಮಾಡುವ ಮೂಲಕ ಅಥವಾ ಆರೋಗ್ಯ ಸೇತು ಮೂಲಕ ನಾಗರಿಕರು ಮುಂಚಿತವಾಗಿಯೇ ಸ್ವಯಂ ನೋಂದಾಯಿಸಿಕೊಳ್ಳಬಹುದು. ಈ ಪ್ಲಾಟಾಫಾರ್ಮ್‌ಗಳು ಕೋವಿಡ್ ಲಸಿಕಾ ಕೇಂದ್ರಗಳಾಗಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಜೊತೆಗೆ ಲಭ್ಯವಿರುವ ವೇಳಾಪಟ್ಟಿಗಳ ದಿನಾಂಕ ಮತ್ತು ಸಮಯವನ್ನು ತೋರಿಸುತ್ತದೆ. ಕೋ–ವಿನ್ ಪೋರ್ಟಲ್ ಅನ್ನು ಮಾರ್ಚ್ 1 ರಿಂದ ತೆರೆಯಲಾಗಿದೆ.

**ಆನ್ –ಸೈಟ್ ನೋಂದಣಿ:** ಆನ್–ಸೈಟ್ ನೋಂದಣಿಯ ಸೌಲಭ್ಯವು ಮುಂಚಿತವಾಗಿ ಸ್ವಯಂ–ನೋಂದಾಯಿಸಲು ಸಾಧ್ಯವಾಗದವರಿಗೆ ಗುರುತಿಸಲಾದ ಕೋವಿಡ್ ಲಸಿಕಾ ಕೇಂದ್ರಗಳಿಗೆ ಸ್ವಯಂ ಭೇಟಿ ನೀಡಿ, ತಮ್ಮನ್ನು ತಾವು ಸ್ಥಳದಲ್ಲೇ ನೋಂದಾಯಿಸಲು ಮತ್ತು ಲಸಿಕೆ ಪಡೆಯಲು ಅನುಮತಿಸುತ್ತದೆ.

**ಫೆಸಿಲಿಟೇಟೆಡ್ ಕೊಹೋರ್ಟ್ ರಿಜಿಸ್ಟ್ರೇಷನ್ (Facilitated Cohort Registration):** ನಾಗರಿಕರನ್ನು ಗುರುತಿಸುವಲ್ಲಿ ಜಿಲ್ಲಾ / ಸ್ಥಳೀಯ ಅಧಿಕಾರಿಗಳು ಮುಂದಾಗುತ್ತಾರೆ ಮತ್ತು ಅವರನ್ನು ಹತ್ತಿರದ ಲಸಿಕಾ ಕೇಂದ್ರಗಳಿಗೆ ನಿರ್ದೇಶಿಸುತ್ತಾರೆ.

**ಯಾವ ದಾಖಲೆಗಳನ್ನು ಒಯ್ಯಬೇಕು ?**

ಎಲ್ಲಾ ನಾಗರಿಕರು ಈ ಕೆಳಗೆ ಹೇಳಿರುವ ಯಾವುದೇ ಫೋಟೋ ಐಡಿ (ಸಚಿತ್ರ ಗುರುತಿನ ಚೀಟಿ) ದಾಖಲೆಗಳನ್ನು ಹೊಂದಿರಬೇಕು:

- ಆಧಾರ್ ಕಾರ್ಡ್
- ಚುನಾವಣಾ ಗುರುತಿನ ಚೀಟಿ
- ಆನ್‌ಲೈನ್ ನೋಂದಣಿಯ ಸಂದರ್ಭದಲ್ಲಿ ನಿರ್ದಿಷ್ಟಪಡಿಸಿದ ಫೋಟೋ ಐಡಿ ಕಾರ್ಡ್ (ಆಧಾರ್ ಅಥವಾ ಚುನಾವಣಾ ಗುರುತಿನ ಚೀಟಿ ಇಲ್ಲದಿದ್ದಲ್ಲಿ)
- 45 ವರ್ಷದಿಂದ 59 ವರ್ಷ ವಯಸ್ಸಿನ ನಾಗರಿಕರಿಗೆ ಸಹ–ಅಸ್ವಸ್ಥತೆಯ ಪ್ರಮಾಣಪತ್ರ (ನೋಂದಾಯಿತ ವೈದ್ಯಕೀಯ ವೈದ್ಯರು ಸಹಿ ಮಾಡಿರಬೇಕು)

**ಕೊರೊನಾವನ್ನು ಎದುರಿಸಲು ನಮ್ಮ ಇಡೀ ದೇಶ ಒಂದಾಗಿ ನಿಂತಿತು. ಕರ್ನಾಟಕ ರಾಜ್ಯವಂತೂ ಎಲ್ಲ ಮಾದರಿಗಳಲ್ಲೂ ತನ್ನ ಛಾಪನ್ನು ಮೂಡಿಸಿತು. ಇಂದು ಲಸಿಕಾ ಅಭಿಯಾನದಲ್ಲೂ ರಾಜ್ಯ ಮುಂದಿದ್ದು, ಜನರ ಪಾಲ್ಗೊಳ್ಳುವಿಕೆಯ ಖಾತರಿ ಈ ಅಭಿಯಾನದಿಂದ ಮೂಡಿ ಬಂದಿದೆ.**

ಲಸಿಕೆ ಹಾಕಿಸಿಕೊಳ್ಳುವ ಸಂಬಂಧ ಜನರಲ್ಲಿ ಮೂಡಿರುವ ಹಿಂಜರಿಕೆಯ ಕಾರಣದಿಂದ ರಾಜ್ಯವು ಅಪೇಕ್ಷಿತ ಗುರಿಯನ್ನು ಸಾಧಿಸಲು ಸಾಧ್ಯವಾಗದಿದ್ದರೂ, ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗಳೇ ಸ್ವತಃ ಲಸಿಕೆ ಹಾಕಿಸಿಕೊಂಡ ಭರವಸೆಯ ನಿದರ್ಶನಗಳಿಂದ ನಿಧಾನವಾಗಿ ಜನರು ಗೊತ್ತು ಪಡಿಸಿದ ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಯಂ ಪ್ರೇರಣೆಯಿಂದ ಹೋಗಿ ಲಸಿಕೆ ಹಾಕಿಸಿಕೊಳ್ಳಲು ಆರಂಭಿಸಿದ್ದಾರೆ.

ಜನರಿಗೆ ಲಸಿಕೆ ಮೇಲಿರುವ ಅಪನಂಬಿಕೆಯನ್ನು ಹೋಗಲಾಡಿಸಲು ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಅನುಮತಿ ಪಡೆದು, ಚಲನಚಿತ್ರದ ತಾರೆಯರು, ಕ್ರೀಡಾಪಟುಗಳು, ರಾಜಕಾರಣಿಗಳು, ನ್ಯಾಯಶಾಸ್ತ್ರಜ್ಞರು ಮತ್ತು ಪತ್ರಕರ್ತರನ್ನು ಒಳಗೊಂಡಂತೆ ಶ್ರೇಷ್ಠ ವ್ಯಕ್ತಿಗಳನ್ನು ಬಳಸಿ ಲಸಿಕೆಯ ಸುರಕ್ಷತೆಯ ಬಗ್ಗೆ ಎಲ್ಲ ರೀತಿಯ ಅನುಮಾನ ಅಥವಾ ಆತಂಕವನ್ನು ನಿವಾರಿಸಿ ಲಸಿಕೆಯನ್ನು ಜನರಿಗೆ ವ್ಯಾಪಕ ಮಟ್ಟದಲ್ಲಿ ತಲುಪಿಸಲು ಮುಂದಾಗಿದೆ.

ರಾಜ್ಯದ ಹಲವಾರು ಭಾಗಗಳು, ಪ್ರಮುಖವಾಗಿ ರಾಜಧಾನಿ ಬೆಂಗಳೂರು, ಸೋಂಕಿನ ಪ್ರಕರಣಗಳಲ್ಲಿ ಎರಡನೇ ಅಲೆಯನ್ನು ವರದಿ ಮಾಡಲು ಪ್ರಾರಂಭಿಸಿದಾಗ, ರಾಜ್ಯ ಸರ್ಕಾರದ ಪ್ರಯತ್ನಗಳು ಇನ್ನಷ್ಟು ಕಠಿಣ ಮತ್ತು



Download From : www.kpscvaani.com



ಸವಾಲಾಯಿತಾದರೂ ರಾಜ್ಯದ ಉನ್ನತ ಮಟ್ಟದ ವ್ಯವಸ್ಥೆ ಮತ್ತು ಅದ್ಭುತವಾದ ಪ್ರಯತ್ನದ ಪರಿಣಾಮವಾಗಿ ಅಪೇಕ್ಷಿಸಿದಂತೆ ರೋಗದ ಹರಡುವಿಕೆಯನ್ನು ತಡೆಗಟ್ಟುವಲ್ಲಿ ರಾಜ್ಯ ಸರ್ಕಾರವು ಯಶಸ್ವಿಯಾಯಿತು.

ಕೋವಿಡ್ –19 ಲಸಿಕೆ ಅಭಿಯಾನದ ಮೊದಲ ಹಂತವು ಬೆಂಗಳೂರಿನಲ್ಲಿ 10 ತಾಣಗಳನ್ನು ಒಳಗೊಂಡಂತೆ ರಾಜ್ಯದಾದ್ಯಂತ 243 ತಾಣಗಳಲ್ಲಿ ಪ್ರಾರಂಭವಾಯಿತು. ಇದರಲ್ಲಿ, ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಪ್ರಧಾನಿ ನರೇಂದ್ರ ಮೋದಿ ರಾಷ್ಟ್ರೀಯ ಮಟ್ಟದಲ್ಲಿ ಲಸಿಕೆ ಅಭಿಯಾನಕ್ಕೆ ಚಾಲನೆ ಕೊಟ್ಟ ನಂತರ, ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ವಾರ್ಡ್ ಕಾರ್ಯಕರ್ತರಾದ ನಾಗರತ್ನ ಕೆ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಮತ್ತು ಆರೋಗ್ಯ ಸಚಿವರಾದ ಡಾ: ಕೆ. ಸುಧಾಕರ್ ಅವರ ಉಪಸ್ಥಿತಿಯಲ್ಲಿ ಲಸಿಕೆ ಪಡೆದರು. ಲಸಿಕೆ ಪಡೆದ ನಂತರ ನಾಗರತ್ನ ಅವರಿಗೆ ಬಿ.ಎಸ್.ಯಡಿಯೂರಪ್ಪ ಮತ್ತು ಇತರ ಗಣ್ಯರು ಹೂಗುಚ್ಛ ನೀಡಿ ಅಭಿನಂದಿಸಿದರು.

ಆರೋಗ್ಯ ಇಲಾಖೆಯ ಪ್ರಕಾರ, ಕೋವಿಶೀಲ್ಡ್ ಲಸಿಕೆಯನ್ನು 237 ಕೇಂದ್ರಗಳಲ್ಲಿ ಮತ್ತು ಕೋವಾಕ್ಸಿನ್ ಲಸಿಕೆಯನ್ನು ಬಳ್ಳಾರಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಚಾಮರಾಜ ನಗರ ಮತ್ತು ದಾವಣಗೆರೆ, ಈ ಆರು ಕೇಂದ್ರಗಳಲ್ಲಿ ನೀಡಲಾಯಿತು.

ಆರಂಭಿಕ ಹಂತದಲ್ಲಿ ಒಟ್ಟು 7,17,439 ಆರೋಗ್ಯ ಕಾರ್ಯಕರ್ತರಿಗೆ (ಕೊರೊನಾ ಯೋಧರು) ಲಸಿಕೆ ನೀಡಲಾಯಿತು. ಮೊದಲ ದಿನವೇ 24,300 ಜನರಿಗೆ ಲಸಿಕೆ ಹಾಕುವ ಉದ್ದೇಶವಿತ್ತು. ಮೊದಲ ಹಂತಕ್ಕೆ ಸುಮಾರು 8,14,500 ಪ್ರಮಾಣದ ಲಸಿಕೆಗಳನ್ನು ಸ್ವೀಕರಿಸಲಾಗಿತ್ತು ಹಾಗೂ ಒಂದೇ ವಾರದಲ್ಲಿ ಇದನ್ನು ಪೂರ್ಣಗೊಳಿಸುವ ಗುರಿಯನ್ನು ರಾಜ್ಯ ಸರ್ಕಾರ ಹೊಂದಿತ್ತು.

ಪ್ರಾರಂಭದಲ್ಲಿ ಪ್ರತಿ ತಾಣದಲ್ಲೂ ರಾಜ್ಯದಾದ್ಯಂತ ಲಸಿಕಾ ಚಾಲನೆಯ ಅಂಗವಾಗಿ, 100 ಜನರಿಗೆ ಲಸಿಕೆ ನೀಡಲಾಯಿತು. ನಂತರದ ದಿನಗಳಲ್ಲಿ ಅದನ್ನು ಹೆಚ್ಚಿಸಲಾಯಿತು.

ಲಸಿಕೆ ಪಡೆಯಲು ಹಿಂಜರಿಯುತ್ತಿರುವ ಜನರನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಗಳು, ಲಸಿಕೆಯ ವಿಷಯವಾಗಿ ಯಾರು ಭಯಭೀತರಾಗುವ ಅಗತ್ಯವಿಲ್ಲ ಹಾಗೂ ಲಸಿಕೆಯು ನಮ್ಮ ದೇಶದಲ್ಲೇ ತಯಾರಾಗುತ್ತಿರುವುದು (ಆತ್ಮ ನಿರ್ಬರ ಯೋಜನೆಯಡಿ) ನಮಗೆ ಹೆಮ್ಮೆಯ ವಿಷಯ ಎಂದು ಹೇಳಿ, ಜನರಲ್ಲಿ ಧೈರ್ಯ ತುಂಬಿದರು.

ಲಸಿಕೆಯ ನಂತರದ ಅಡ್ಡ ಪರಿಣಾಮಗಳನ್ನು ಅಲ್ಪ ಪ್ರಮಾಣದಲ್ಲೂ ಅನುಭವಿಸಿದಂತಹ ವ್ಯಕ್ತಿಗಳನ್ನು ನೋಡಿಕೊಳ್ಳಲು ವೀಕ್ಷಣಾ ಕೊಠಡಿಗಳನ್ನು ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಜಾರಿಗೆ ತರಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಅವರು ಜನರಿಗೆ ಭರವಸೆ ನೀಡಿದರು.

"25,000 ರಿಂದ 30,000 ಜನರಿಗೆ ಕ್ಲಿನಿಕಲ್ ಪರೀಕ್ಷೆಗಳ ನಂತರ ಲಸಿಕೆಗಳು ಬಂದಿರುವುದರಿಂದ ಚಿಂತಿಸಬೇಕಾಗಿಲ್ಲ. ಭಾರತದಲ್ಲಿ ತಯಾರಾಗುವ ಈ ಲಸಿಕೆಗೆ ವಿದೇಶಗಳಲ್ಲೂ ಬೇಡಿಕೆ ಇದೆ "ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಜನರಿಗೆ ಮನವರಿಕೆ ಮಾಡಿದರು.

ಜನವರಿ 16 ರಂದು ಶುರುವಾದ ಲಸಿಕಾ ಅಭಿಯಾನದಲ್ಲಿ ಲಕ್ಷಕ್ಕೂ ಹೆಚ್ಚು ಆರೋಗ್ಯ ಕಾರ್ಯಕರ್ತರಿಗೆ ರಾಜ್ಯದಲ್ಲಿ ಲಸಿಕೆ ನೀಡಲಾಗಿದ್ದು, ಕರ್ನಾಟಕವು ಲಸಿಕೆಯ ವ್ಯಾಪ್ತಿಯಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಮುನ್ನಡೆ ಸಾಧಿಸುತ್ತಿದೆ. ಸದರಿ ವ್ಯಾಪ್ತಿಯಲ್ಲಿ ರಾಜ್ಯವನ್ನು ನೆರೆಯ ರಾಜ್ಯ ಆಂಧ್ರಪ್ರದೇಶ ಅನುಸರಿಸಿದೆ ಎಂದು ಕೇಂದ್ರ ತಿಳಿಸಿದೆ.

ಏಳು ಲಕ್ಷಕ್ಕೂ ಅಧಿಕ ಲಸಿಕೆಗಳನ್ನು ನೀಡಿದ ಆರು ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕ ಸ್ಥಾನ ಪಡೆದಿದೆ. ಕೆಲವು ಜಿಲ್ಲೆಗಳು ವ್ಯಾಪಕವಾಗಿ ಲಸಿಕೆ ನೀಡಿದರೆ, ಇತರೆ ಜಿಲ್ಲೆಗಳು ನಿಧಾನವಾಗಿ ತಮ್ಮ ವೇಗವನ್ನು ಚುರುಕುಗೊಳಿಸಿದ್ದಾರೆ. ಕರ್ನಾಟಕದ ಹೆಚ್ಚಿನ ಜಿಲ್ಲೆಗಳು ಪ್ರೋತ್ಸಾಹಕ ಸಂಖ್ಯೆಗಳನ್ನು ವರದಿ ಮಾಡಿದ್ದು, ಆರೋಗ್ಯ ಕಾರ್ಯಕರ್ತರ ಪೈಕಿ ಶೇಕಡಾ 93 ರಷ್ಟು ವ್ಯಾಪ್ತಿಯನ್ನು ಹೊಂದಿದೆ. ರಾಜಧಾನಿ ಬೆಂಗಳೂರಿನಲ್ಲೇ ಶೇಕಡಾ 44 ಕ್ಕೂ ಹೆಚ್ಚು ಆರೋಗ್ಯ ಕಾರ್ಯಕರ್ತರು ಮತ್ತು 29 ಶೇಕಡಾ ಮುಂಚೂಣಿ ಕಾರ್ಮಿಕರಿಗೆ ಇದುವರೆಗೆ ಲಸಿಕೆ ನೀಡಲಾಗಿದೆ.


ಮೊದಲ ಹಂತದ ಕೋವಿಡ್ ಲಸಿಕಾ ಅಭಿಯಾನವು ಬೆಂಗಳೂರಿನಲ್ಲಿ ನಡೆದರೆ, ಎರಡನೇ ಹಂತವು ಕಲ್ಯಾಣ ಕರ್ನಾಟಕ ಮತ್ತು ಮೂರನೇ ಹಂತವನ್ನು ಶಿರಸಿಯಲ್ಲಿ ಕೈಗೊಳ್ಳಲಾಗಿದೆ.

ಲಭ್ಯವಿರುವ ಅಂಕಿಅಂಶಗಳ ಪ್ರಕಾರ, 60 ವರ್ಷಕ್ಕಿಂತ ಮೇಲ್ಪಟ್ಟ 50 ಲಕ್ಷ ಜನರು ಮತ್ತು ಸಹ–ಅಸ್ವಸ್ಥತೆಗಳೊಂದಿಗೆ 16 ಲಕ್ಷ ಜನರಿದ್ದಾರೆ. ಮಾರ್ಚ್ 8 ರಿಂದ ಕರ್ನಾಟಕದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲೂಕು ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆ ಸೇರಿದಂತೆ ಸುಮಾರು 3,000 ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ.

ಸರ್ಕಾರಿ ಕೇಂದ್ರಗಳಲ್ಲಿ ಲಸಿಕೆ ಉಚಿತವಾಗಿದ್ದರೂ, ಖಾಸಗಿ ಸೌಲಭ್ಯಗಳಲ್ಲಿ ಅದೇ ಲಸಿಕೆಗೆ 250 ರೂ ಗಳಾಗುತ್ತದೆ. ಲಸಿಕೆಯ ವೆಚ್ಚ 150 ಗಳಾಗಿದ್ದು ಸೇವಾ ಶುಲ್ಕ 100 ರೂ ಗಳಾಗಿರುತ್ತದೆ. ಆದಾಗ್ಯೂ ಫಲಾನುಭವಿಗಳು ತೆಗೆದುಕೊಳ್ಳುವ ಲಸಿಕೆಯಲ್ಲಿ ಭಾರತ್ ಬಯೋಟೆಕ್‌ನ ಕೊವಾಕ್ಸಿನ್ ಮತ್ತು ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ ಕೋವಿಶೀಲ್ಡ್ ಯಾವುದೇ ರೀತಿಯ ಆಯ್ಕೆ ಇರುವುದಿಲ್ಲ.




Download From : www.kpscvaani.com



# ಕೋವಿಡ್–19 ಎರಡನೇ ಅಲೆ: ಇರಲಿ ಜಾಗ್ರತೆ

**ಕೋವಿಡ್-19ರ ಎರಡನೆಯ ಅಲೆ ಎಂದರೇನು? ಇತರ ಸಾಂಕ್ರಾಮಿಕ ರೋಗಗಳ ಎರಡನೆಯ ಅಲೆಯ ಕುರಿತು ಇತಿಹಾಸ ಏನು ಹೇಳುತ್ತದೆ? ಹಾಗೂ ಕೋವಿಡ್‌ನ ಎರಡನೆಯ ಅಲೆಯಿಂದ ಪಾರಾಗಲು ಯಾವ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಬೇಕು? ಇವೇ ಮೊದಲಾದ ವಿಷಯಗಳ ಕುರಿತು ವಿವರ ಇಲ್ಲಿದೆ.**



ಡಾ: ಎಸ್.ಎಂ.ತಿಮ್ಮಾಪೂರ

"ನನ್ನ ರೋಗ ನಿರೋಧಕ ಶಕ್ತಿ ಚೆನ್ನಾಗಿದೆ, ಆದ್ದರಿಂದಲೇ ಇದುವರೆಗೂ ನನಗೆ ಕೊರೊನಾ ಸೋಂಕು ಬಂದಿಲ್ಲ, ಹಾಗೂ ಮುಂದೆಯೂ ಬರುವುದಿಲ್ಲ" ಎಂಬ ಭ್ರಮೆಯಲ್ಲಿದ್ದೀರಾ? ಹಾಗಾದರೆ ಅದು ನಿಮ್ಮ ತಪ್ಪು ಕಲ್ಪನೆ. ರಾಜ್ಯದ ಖ್ಯಾತ ಜನಾರೋಗ್ಯ ತಜ್ಞರೇ ಹೇಳುವಂತೆ ಈಗಾಗಲೇ ಕೋವಿಡ್ ಸೋಂಕಿನಿಂದ ಬಳಲಿ ಗುಣಮುಖರಾಗಿದ್ದರೆ ಅಂತಹವರಲ್ಲಿ ಎರಡನೆಯ ಅಲೆಯು ಬಂದರೂ ಕೂಡ ಅಷ್ಟೊಂದು ಗಂಭೀರವಾಗಿರುವುದಿಲ್ಲ. ಆದರೆ ಈ ಎರಡನೆಯ ಅಲೆಯಲ್ಲಿ ಮೊದಲ ಬಾರಿಗೆ ಕೋವಿಡ್ ಸೋಂಕು ಬಂದರೆ ಗಂಭೀರ ಪರಿಣಾಮಗಳು ಉಂಟಾಗಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

## ಕೋವಿಡ್–19 ಎರಡನೇ ಅಲೆ ಎಂದರೇನು?

ಜಾಗತಿಕವಾಗಿ ಯಾವುದೇ ಒಂದು ಸಾಂಕ್ರಾಮಿಕ ರೋಗದ ತೀವ್ರತೆಯು ಕಡಿಮೆಯಾಗಲು ಪ್ರಾರಂಭಿಸಿದಾಗ, ರೋಗದ ಕುರಿತು ಜನರಲ್ಲಿರುವ ಆತಂಕವು ದೂರವಾಗುತ್ತಾ ಹೋಗುತ್ತದೆ ಹಾಗೂ ಜನರಲ್ಲಿ ನಿರಾಳತೆಯ ಭಾವನೆ ಬರತೊಡಗುತ್ತದೆ. ಜನರಲ್ಲಿ ಭಯ ದೂರವಾಗಿ, ಮುಕ್ತವಾಗಿ ಸಂಚರಿಸಲು ಪ್ರಾರಂಭಿಸುತ್ತಾರೆ. ಆದರೆ ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಪ್ಲೇಗ್, ಕಾಲರಾ ಮತ್ತು ಇನ್ಫ್ಲುಯೆಂಜಾದಂತಹ ಕಾಯಿಲೆಗಳನ್ನು ಒಳಗೊಂಡ ಹಿಂದಿನ ಸಾಂಕ್ರಾಮಿಕ ರೋಗಗಳ ಆಧಾರದ ಮೇಲೆ, ಈ ನಿರಾಳತೆ ಹಾಗೂ ಭದ್ರತೆಯ ಭಾವನೆ ಅಲ್ಪಕಾಲಿಕವಾಗಿರುತ್ತದೆ. ಸಾಂಕ್ರಾಮಿಕ ಕಾಯಿಲೆಗಳು ಒಮ್ಮೆ ತಮ್ಮ ಆರಂಭಿಕ ತೀವ್ರತೆಯನ್ನು ತಗ್ಗಿಸಿ, ಕಡಿಮೆಯಾಗುವ ಹಂತದಲ್ಲಿದ್ದಾಗ ಸಮುದಾಯದ ಬೇರೊಂದು ವಿಭಾಗದಲ್ಲಿ ಮತ್ತೆ ಹೊರ ಹೊಮ್ಮುವ ಪ್ರವೃತ್ತಿಯನ್ನು ಹೊಂದಿರುತ್ತವೆ ಮತ್ತು ಅಲ್ಲಿ ಹೊಸದಾಗಿ ಕಾಯಿಲೆಯನ್ನು ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದನ್ನು ಕಾಯಿಲೆಯ **"ಎರಡನೇ ಅಲೆ"**ಎಂದು ಕರೆಯುತ್ತಾರೆ.

ಆಧುನಿಕ ಯುಗದಲ್ಲಿ ತೀವ್ರವಾಗಿ ಹರಡುವ ಸಾಂಕ್ರಾಮಿಕ ಕಾಯಿಲೆಗಳಾದ ಇನ್ಫ್ಲುಯೆಂಜಾ ಹಾಗೂ ಕೋವಿಡ್–19 ಸೇರಿದಂತೆ ಅನೇಕ ಸಾಂಕ್ರಾಮಿಕ ರೋಗಗಳು ಪುನಃ ಹೊರಹೊಮ್ಮುವ ಮೂಲಕ ಎರಡನೆಯ ಮತ್ತು ಬಹುಶಃ ಮೂರನೆಯ ಅಲೆಯನ್ನೂ ಕೂಡ ಉಂಟು ಮಾಡುವ ಸಾಮರ್ಥ್ಯ ಹೊಂದಿವೆ ಎಂದು ಜನಾರೋಗ್ಯ ತಜ್ಞರು ಎಚ್ಚರಿಸಿದ್ದಾರೆ. ಎರಡನೆಯ ಹಾಗೂ ನಂತರದ ಅಲೆಗಳ ರೂಪದಲ್ಲಿ ಬರುವ ಕಾಯಿಲೆಗಳು ಕೆಲವೊಮ್ಮೆ ಮೊದಲಿಗಿಂತ ತೀವ್ರ ಹಾಗೂ ಗಂಭೀರ ಪರಿಣಾಮಗಳನ್ನು ಹೊಂದಿರುತ್ತವೆ.



Download From : www.kpscvaani.com

### ಇತಿಹಾಸದ ಪುಟಗಳಲ್ಲೇನಿದೆ?

1918–19ರ ಇನ್ಫ್ಲುಯೆಂಜಾ ಕಾಯಿಲೆಯು ಒಂದು ವರ್ಷದ ಅವಧಿಯಲ್ಲಿ ಮೂರು ಅಲೆಗಳಲ್ಲಿ ಸಂಭವಿಸಿತ್ತು. ಆ ಸಾಂಕ್ರಾಮಿಕ ಕಾಯಿಲೆಯ ಮೊದಲ ಅಲೆಯು ವಿಶಿಷ್ಟವಾದ ಇನ್ಫ್ಲುಯೆಂಜಾ ಸಾಂಕ್ರಾಮಿಕ ರೋಗಶಾಸ್ತ್ರದಿಂದ ಭಿನ್ನವಾಗಿರಲಿಲ್ಲ. ಎರಡನೆಯ ಮತ್ತು ಮೂರನೆಯ ಅಲೆಗಳು 20 ರಿಂದ 40 ವರ್ಷ ವಯಸ್ಸಿನವರಿಗೆ ಅತ್ಯಂತ ಮಾರಣಾಂತಿಕವಾಗಿ ಪರಿಣಮಿಸಿದ್ದವು. ಅದೇ ರೀತಿ 2009 ರ ಎಚ್1 ಎನ್1 ಸಾಂಕ್ರಾಮಿಕ ರೋಗವು ಎರಡು ಅಲೆಗಳನ್ನು ಹೊಂದಿದ್ದು, ಎರಡನೆಯ ಅಲೆಯು ಮೊದಲನೆಯದಕ್ಕಿಂತ ಗಮನಾರ್ಹವಾಗಿ ತೀವ್ರ ಅನಾರೋಗ್ಯಕ್ಕೆ ಕಾರಣವಾಗಿತ್ತು.

### ಕಾರಣಗಳು:

ಮೊದಲನೆಯ ಅಲೆಯ ತೀವ್ರತೆಯು ಕಡಿಮೆಯಾಗಿ ಹೊಸ ಪ್ರಕರಣಗಳು ಪತ್ತೆಯಾಗುವುದು ಕಡಿಮೆಯಾದಾಗ ಅಥವಾ ಶೂನ್ಯಕ್ಕೆ ಇಳಿದಾಗ ಜನರು ಸಾಮಾಜಿಕ ಅಂತರ ಹಾಗೂ ಮಾಸ್ಕ್ ಬಳಸುವುದನ್ನು ನಿರ್ಲಕ್ಷಿಸುತ್ತಾರೆ. ಪ್ರಯಾಣದ ಮೇಲಿನ ನಿರ್ಬಂಧಗಳು ಸಡಿಲಿಕೆ ಆದ ಕೂಡಲೇ ಜನರು ಸ್ವಚ್ಛಂದವಾಗಿ ಯಾವುದೇ ಸುರಕ್ಷತಾ ಕ್ರಮಗಳನ್ನು ಅನುಸರಿಸದೇ ತಿರುಗಾಡಲು ಪ್ರಾರಂಭಿಸುತ್ತಾರೆ. ಮದುವೆ, ಸಭೆ–ಸಮಾರಂಭಗಳು, ಜಾತ್ರೆಗಳು, ರ್‍ಯಾಲಿಗಳು, ಪ್ರತಿಭಟನೆಗಳು, ಜಾಥಾಗಳು ಒಳಗೊಂಡಂತೆ ಇಂತಹ ಜನಸಂದಣಿ ಸೇರುವ ಚಟುವಟಿಕೆಗಳ ಮೇಲಿನ ನಿರ್ಬಂಧವನ್ನು ಸಡಿಲಿಸಿರುವುದೂ ಕೂಡ ಎರಡನೆಯ ಅಲೆಯ ಆರಂಭಕ್ಕೆ ಕಾರಣೀಭೂತವಾಗಿದೆ. ಅಲ್ಲದೇ ಕೆಲವು ರಾಜ್ಯಗಳಲ್ಲಿ ಚುನಾವಣೆಗಳ ಪ್ರಚಾರದ ಅಬ್ಬರವೂ ಜೋರಾಗಿದ್ದು, ಇದೂ ಕೂಡ ಸೋಂಕಿನ ಎರಡನೆಯ ಅಲೆಗೆ ಕಾರಣವಾಗಿದೆ. ಮೊದಲನೆಯ ಅಲೆಯ ಸಂದರ್ಭದಲ್ಲಿ ಮುಚ್ಚಿದ್ದ ದೇವಸ್ಥಾನಗಳನ್ನು ಪುನಃ ಸಾರ್ವಜನಿಕರ ದರ್ಶನಕ್ಕೆ ತೆರೆದಾಗ ಅಲ್ಲಿಯೂ ಕೂಡ ಜನರು ಕೋವಿಡ್ ನಿಯಮಗಳನ್ನು ಪಾಲಿಸದೇ ಇರುವುದೂ ಕೂಡ ಎರಡನೇ ಅಲೆಗೆ ಕಾರಣವಾಗಿದೆ. ಸಾರ್ವಜನಿಕ ಮನರಂಜನೆಯ ತಾಣಗಳಾದ ಚಿತ್ರಮಂದಿರಗಳು, ಬಾರ್ & ರೆಸ್ಟೋರೆಂಟ್‌ಗಳು, ಪಬ್‌ಗಳು, ಮಾಲ್‌ಗಳು, ಈಜುಕೊಳಗಳು, ಜಿಮ್‌ಗಳು, ಪ್ರವಾಸಿ ತಾಣಗಳು ಎಂದಿನಂತೆ ಪುನಃ ಪ್ರಾರಂಭವಾದಾಗ ಸಹಜವಾಗಿಯೇ ಸೋಂಕಿನ ಎರಡನೆಯ ಅಲೆಗೆ ದಾರಿ ಆಯಿತು.

### ಸೋಂಕಿನ ಎರಡನೆಯ ಅಲೆಯನ್ನು ತಡೆಯಲು ಇರುವ ಮಾರ್ಗಗಳು

ಕೋವಿಡ್–19 ಸೋಂಕಿನ ಎರಡನೆಯ ಅಲೆಯ ಪರಿಣಾಮಗಳು ಅತ್ಯಂತ ಗಂಭೀರವಾಗಿದ್ದು, ಜನರು ಸೋಂಕಿನ ನಿಯಂತ್ರಣ ಕ್ರಮಗಳಾದ ಸಾಮಾಜಿಕ ಅಂತರ (ಭೌತಿಕ ಅಂತರ), ಮಾಸ್ಕ್ ಧರಿಸುವುದು ಹಾಗೂ ಕೈ ತೊಳೆಯುವ ವಿಧಾನಗಳನ್ನು ಎಷ್ಟು ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ ಎನ್ನುವುದರ ಮೇಲೆ ಅವಲಂಬಿಸಿದ್ದು, ಜನರ ಪ್ರಾಣ ಹಾನಿ ಹಾಗೂ ಆರ್ಥಿಕ ಹಿಂಜರಿತದ ಬೆಲೆಯನ್ನೂ ತೆತ್ತಬೇಕಾಗಬಹುದು. ಆದರೆ ಜನರಿಗೆ ಈ ಗಂಭೀರ ಪರಿಣಾಮಗಳ ಅರಿವು ಇಲ್ಲದಂತಾಗಿದೆ. ಹಾಗಾದರೆ ಸೋಂಕಿನ ಎರಡನೆಯ ಅಲೆಯನ್ನು ತಡೆಯಲು ಇರುವ ಮಾರ್ಗವೆಂದರೆ ಕಡ್ಡಾಯವಾಗಿ ನಿಯಮಾವಳಿಗಳನ್ನು ಪಾಲಿಸಬೇಕು.

### ಸರಕಾರದ ಹಂತದಲ್ಲಿ

ಎರಡನೆಯ ಅಲೆಯನ್ನು ನಿರ್ಲಕ್ಷಿಸಿದರೆ ಅದು ಮೊದಲನೆಯ ಅಲೆಗಿಂತ ಗಂಭೀರ ಪರಿಣಾಮಗಳನ್ನು ತೋರಿಸಬಹುದು ಎಂಬುದು ಅನ್ಯದೇಶಗಳಲ್ಲಿಯ ಅನುಭವದಿಂದ ಹೇಳಬಹುದು. ಬ್ರೆಜಿಲ್ ದೇಶದಲ್ಲಿ ಕಂಡು ಬಂದ ವೈರಸ್‌ನ ಅತ್ಯಂತ ಅಪಾಯಕಾರಿ ಪಿ1 ಪ್ರಭೇದವು ಭಾರತದಲ್ಲಿಯೂ ಪತ್ತೆಯಾಗಿರುವುದೂ ಕೂಡ ಆತಂಕಕ್ಕೆ ಕಾರಣವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಭಾರತದಲ್ಲಿ ಇದ್ದ ಪರಿಸ್ಥಿತಿಗಿಂತ ಈ ವರ್ಷ ಇನ್ನೂ ಗಂಭೀರವಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಕೋವಿಡ್ ಎರಡನೇ ಅಲೆಯನ್ನು ನಿಭಾಯಿಸುವುದು ಹೇಗೆ? ಎಂಬ ಪ್ರಶ್ನೆ ಉದ್ಭವಿಸದೇ ಇರದು.

ದೇಶವು ಈಗಾಗಲೇ ಮೊದಲನೇ ಅಲೆಯಿಂದಾಗಿ ಒಂದು ಲಾಕ್‌ಡೌನ್ ಅನ್ನು ಅನುಭವಿಸಿ ಆಗಿದೆ. ಆದರೆ ಇದೀಗ ತಾನೇ ಆರ್ಥಿಕ ಚೇತರಿಕೆ ಕಂಡು ಬರುತ್ತಿದ್ದು, ಇನ್ನೊಂದು

## ಸೋಂಕಿನ ಎರಡನೆಯ ಅಲೆಯನ್ನು ತಡೆಯಲು ಇರುವ ಮಾರ್ಗಗಳು

## ಸಮುದಾಯದ ಹಂತದಲ್ಲಿ

- ಜನರು ಸಾಮಾಜಿಕ ಅಂತರವನ್ನು ಕಾಪಾಡುವುದನ್ನು ಮುಂದುವರಿಸಬೇಕು.
- ಮೇಲಿಂದ ಮೇಲೆ ಕೈ ತೊಳೆಯುವುದನ್ನು ರೂಢಿಗತ ಮಾಡಿಕೊಳ್ಳಬೇಕು.
- ಜನಸಂದಣಿ ಇರುವ ಸ್ಥಳದಲ್ಲಿ ಹಾಗೂ ಹೊರಗಡೆ ಹೋಗುವಾಗ ಕಡ್ಡಾಯವಾಗಿ ಮಾಸ್ಕ್ ಧರಿಸುವುದು. ಪ್ರತಿಯೊಬ್ಬರೂ ಮಾಸ್ಕ್ ಧರಿಸುವುದನ್ನು ರೂಢಿಗತ ಮಾಡಿಕೊಂಡರೆ ಸೋಂಕು ಹರಡುವುದನ್ನು ಗಣನೀಯವಾಗಿ ಕಡಿಮೆ ಮಾಡಬಹುದು.
- ಸಾಧ್ಯವಾದಷ್ಟು ಮನೆಯಲ್ಲಿಯೇ ಇರುವುದು. ಅನವಶ್ಯಕವಾಗಿ ಎಲ್ಲೂ ಹೊರಗೆ ಹೋಗದಿರುವುದು. ಅದರಲ್ಲೂ ಹಿರಿಯ ನಾಗರಿಕರು, ರಕ್ತದೊತ್ತಡ (ಬಿ.ಪಿ), ಸಕ್ಕರೆ ಕಾಯಿಲೆ (ಡಯಾಬಿಟಿಸ್) ಗಳಂತಹ ದೀರ್ಘಕಾಲದ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವವರು ಆದಷ್ಟು ಮನೆಯಿಂದ ಹೊರಗೆ ಹೋಗುವುದನ್ನು ನಿಲ್ಲಿಸಬೇಕು.
- ಕೋವಿಡ್ ಲಸಿಕೆಯನ್ನು ಈಗಾಗಲೇ ದೇಶಾದ್ಯಂತ ನೀಡಲಾಗುತ್ತಿದ್ದು, ಸಾರ್ವಜನಿಕರು ಯಾವುದೇ ಗಾಳಿಮಾತುಗಳಿಗೆ ಕಿವಿಗೊಡದೇ ತಪ್ಪದೇ ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ಲಸಿಕೆ ಹಾಕಿಸಿಕೊಳ್ಳುವುದರಿಂದ ಸೋಂಕನ್ನು ಪೂರ್ಣ ಪ್ರಮಾಣದಲ್ಲಿ ನಿಯಂತ್ರಿಸಲು ಸಾಧ್ಯವಾಗದೇ ಇದ್ದರೂ ಕೂಡ ಸೋಂಕಿನಿಂದ ಉಂಟಾಗುವ ಗಂಭೀರ ಪರಿಣಾಮಗಳನ್ನು ಹಾಗೂ ಸಾವುಗಳನ್ನು ಖಂಡಿತವಾಗಿಯೂ ತಪ್ಪಿಸಬಹುದು.



Download From : www.kpscvaani.com



ಲಾಕ್‌ಡೌನ್ ಅನ್ನು ಸಹಿಸಲು ಸಾಧ್ಯವಿಲ್ಲ. ಆದರೆ ಲಾಕ್‌ಡೌನ್‌ನಿಂದ ಸಾಧಿಸಿದ ಪರಿಣಾಮಗಳನ್ನು ಮೇಲೆ ತಿಳಿಸಿದ ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವುದರಿಂದಲೂ ಪಡೆಯಬಹುದು.

ಆದರೆ ಈ ಮುಂಜಾಗ್ರತಾ ಕ್ರಮಗಳನ್ನು ಜನರು ಸರಿಯಾಗಿ ಪಾಲಿಸದೇ ಉಲ್ಲಂಘಿಸುತ್ತಿದ್ದಾರೆ. ಬಹುತೇಕ ಜನರು ಮಾಸ್ಕ್‌ಗಳನ್ನೇ ಧರಿಸುವುದಿಲ್ಲ. ಧರಿಸುವವರೂ ಕೂಡ ಅದನ್ನು ಸರಿಯಾಗಿ ಧರಿಸುವುದಿಲ್ಲ. ಮಾಸ್ಕ್ ಮುಖದ ಮೇಲಿರುವ ಬದಲು ಅವರ ಗದ್ದದ ಮೇಲೆ ಇರುತ್ತದೆ. ಹಾಗೂ ಸೋಂಕಿತ ಮೇಲ್ಮೈಯನ್ನು ಮುಟ್ಟಿ ಹಾಗೆಯೇ ಮಾಸ್ಕನ್ನು ಮುಟ್ಟುವುದರಿಂದ ಸೋಂಕು ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ.

ದೇಶಾದ್ಯಂತ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಪ್ರಮಾಣದ ಏರಿಕೆ ಕಂಡು ಬರುತ್ತಿದ್ದು, ಕೇಂದ್ರ ಗೃಹ ಸಚಿವಾಲಯವು ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವ ಅನಿವಾರ್ಯತೆ ಬಂದೊದಗಿದೆ. ಹಾಗೂ ರಾಜ್ಯ ಸರಕಾರಗಳು ಈ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದೂ ಕೂಡ ಅಷ್ಟೇ ಮುಖ್ಯವಾಗಿದೆ.

**ಕೋವಿಡ್–19 ಸೋಂಕಿನ ಎರಡನೆಯ ಅಲೆಯು ಮೊದಲನೇ ಅಲೆಗಿಂತ ಹೇಗೆ ಭಿನ್ನವಾಗಿದೆ:**

ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಲಾಕ್‌ಡೌನ್ ಘೋಷಣೆ ಮಾಡಿದ್ದರು. ನಂತರದ ದಿನಗಳಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯವಾಗಿ ಏರಿಕೆ ಕಂಡು ಬಂದಿದ್ದರಿಂದ ಲಾಕ್‌ಡೌನ್ ಅನ್ನು ವಿಸ್ತರಿಸಲಾಯಿತು. 2020ರ ಮೇ, ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಸೋಂಕಿನ ಗಂಭೀರತೆಯೂ ಕೂಡ ಹೆಚ್ಚಾಗಿ, ಸಾವಿರಾರು ಜನರು ಹಣ ಹಾಗೂ ಪ್ರಾಣ ಕಳೆದುಕೊಳ್ಳುವಂತಾಯಿತು. ಆ ಸಮಯದಲ್ಲಿ ವೈದ್ಯಕೀಯ ವಲಯಕ್ಕೂ ಕೂಡ ಈ ಸೋಂಕು ಹೊಸದಾಗಿ ಕಂಡು ಬಂದಿದ್ದರಿಂದ ಯಾವ ರೀತಿ ನಿಭಾಯಿಸಬೇಕು ಎಂದು ಸ್ಪಷ್ಟವಾಗಿ ತಿಳಿದಿರಲಿಲ್ಲ. ಅಲ್ಲದೇ ಚಿಕಿತ್ಸೆಯ ಕುರಿತೂ ಕೂಡ ವೈದ್ಯರಲ್ಲಿಯೇ ಸ್ಪಷ್ಟತೆ ಇರಲಿಲ್ಲ. ಅಲ್ಲದೇ ಸೋಂಕಿನ ರೋಗ ಲಕ್ಷಣಗಳೂ ಕೂಡ ಇಂಥದ್ದೇ ರೀತಿಯಲ್ಲಿ ಇರುತ್ತವೆ ಎಂದು ತಿಳಿದಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಕೋವಿಡ್ ಲಸಿಕೆಯು ಇನ್ನು ಅವಿಷ್ಕಾರ ಗೊಂಡಿರಲಿಲ್ಲ. ಈ ಎಲ್ಲ ಕಾರಣಗಳಿಂದಾಗಿಯೇ ಮೊದಲನೆಯ ಅಲೆಯ ಸಂದರ್ಭದಲ್ಲಿ ಸೋಂಕಿನ ಗಂಭೀರತೆಯೂ ಕೂಡ ಹೆಚ್ಚಾಗಿತ್ತು ಹಾಗೂ ಸಾವಿರಾರು ಜನರು ಪ್ರಾಣವನ್ನೂ ಕಳೆದುಕೊಳ್ಳುವಂತಾಗಿತ್ತು.

ಆದರೆ ಇದೀಗ ಪರಿಸ್ಥಿತಿ ಭಿನ್ನವಾಗಿದೆ. ಕೊರೊನಾ ಮೊದಲನೆಯ ಅಲೆಯು ಹಿರಿಯ ನಾಗರಿಕರಲ್ಲಿ ಹೆಚ್ಚಾಗಿ ಕಂಡು ಬಂದಿತ್ತು. ಮಕ್ಕಳು ಹಾಗೂ ಯುವ ಸಮುದಾಯವನ್ನು ಸೋಂಕು ಅಷ್ಟೊಂದು ಬಾಧಿಸಿರಲಿಲ್ಲ. ಆದರೆ ತಜ್ಞರು ಎಚ್ಚರಿಸಿರುವಂತೆ ಎರಡನೆಯ ಅಲೆಯು ಮಕ್ಕಳು ಮತ್ತು 20 ರಿಂದ 40 ವರ್ಷದೊಳಗಿನ ಯುವಕರಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಆದ್ದರಿಂದ ಈ ಬಾರಿ ಪೋಷಕರು ತಮ್ಮ ಮಕ್ಕಳ ಸುರಕ್ಷತೆಯ ಕುರಿತು ಹೆಚ್ಚಿನ ಗಮನ ವಹಿಸಬೇಕಾಗಿದೆ. ಅದರಂತೆ ಯುವ ಸಮುದಾಯವೂ ಕೂಡ ಅತ್ಯಂತ ಜಾಗ್ರತೆಯಿಂದ ಇರಬೇಕಾಗಿದೆ.

ಇನ್ನು ಸೋಂಕಿತರ ಚಿಕಿತ್ಸೆಯ ಕುರಿತು ತಜ್ಞ ವೈದ್ಯರು ಸಾಕಷ್ಟು ಅಧ್ಯಯನ ಮಾಡಿ ಸೂಕ್ತ ಚಿಕಿತ್ಸಾ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದಾರೆ. ಸಾರ್ವಜನಿಕರಲ್ಲಿಯೂ ಕೂಡ ಸೋಂಕಿನ ಕುರಿತು ಸಾಕಷ್ಟು ಅರಿವು ಮೂಡಿದ್ದು, ಜನ ಎಚ್ಚೆತ್ತುಕೊಂಡಿದ್ದಾರೆ. ಅಲ್ಲದೇ ವಿವಿಧ ಕಂಪನಿಗಳು ಹಲವು ಕೋವಿಡ್ ಲಸಿಕೆಗಳನ್ನು ಅಭಿವೃದ್ಧಿ ಪಡಿಸಿದ್ದು, ಈಗಾಗಲೇ ಕೊರೊನಾ ವಾರಿಯರ್ಸ್‌ಗಳಿಗೆ, 60 ವರ್ಷ ಮೇಲ್ಪಟ್ಟ ನಾಗರಿಕರಿಗೆ ಹಾಗೂ 45 ರಿಂದ 60 ವರ್ಷದೊಳಗಿನ ದೀರ್ಘ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಲಸಿಕೆಯನ್ನು ನೀಡುವ ಪ್ರಕ್ರಿಯೆಯು ದೇಶಾದ್ಯಂತ ಅತ್ಯಂತ ವೇಗವಾಗಿ ನಡೆಯುತ್ತಿದ್ದು, ಈಗಾಗಲೇ ಕೋಟ್ಯಂತರ ಜನರಿಗೆ ಲಸಿಕೆ ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಲಸಿಕೆಯನ್ನು ದೇಶದ ಎಲ್ಲ ವರ್ಗದ ಜನರಿಗೂ ನೀಡುವ ಗುರಿ ಹೊಂದಲಾಗಿದೆ.

ಕೋವಿಡ್–19 ಸೋಂಕಿನ ಎರಡನೆಯ ಅಲೆಯು ಅತ್ಯಂತ ವೇಗವಾಗಿ ಹರಡುತ್ತಿದ್ದು, ಮುಂಬರುವ ದಿನಗಳಲ್ಲಿ ಇದರ ತೀವ್ರತೆಯು ಹೆಚ್ಚಾಗುವ ಎಲ್ಲಾ ಲಕ್ಷಣಗಳೂ ಸ್ಪಷ್ಟವಾಗಿ ಗೋಚರಿಸುತ್ತಿವೆ. ವೈದ್ಯರು ಸೋಂಕಿನ ಚಿಕಿತ್ಸೆಯಲ್ಲಿ ಸಾಕಷ್ಟು ಪರಿಣತಿಯನ್ನು ಸಾಧಿಸಿದ್ದರೂ ಕೂಡ ಹಾಗೂ ಕೋವಿಡ್ ಲಸಿಕೆಯನ್ನು ನೀಡಲಾಗುತ್ತಿದ್ದರೂ ಕೂಡ ಜನರು ಮೈ ಮರೆಯುವಂತಿಲ್ಲ. ಸರಕಾರವು ಕಠಿಣ ನಿಯಮಗಳನ್ನು ಜಾರಿಗೊಳಿಸಿದರೂ ಕೂಡ ಅವುಗಳನ್ನು ಪಾಲಿಸುವ ಜವಾಬ್ದಾರಿಯು ಸಾರ್ವಜನಿಕರ ಮೇಲಿದೆ. ಆದ್ದರಿಂದ ದೇಶ ಹಾಗೂ ರಾಜ್ಯಗಳು ಕೋವಿಡ್ –19 ಎರಡನೆ ಅಲೆಯಿಂದ ಪಾರಾಗಲು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲೇ ಬೇಕಾದ ಅನಿವಾರ್ಯತೆ ಸಾರ್ವಜನಿಕರ ಮೇಲಿದೆ. ■

### ತೀವ್ರತೆ

**ಸೆಪ್ಟೆಂಬರ್ 2020ರ ಕೊನೆಯಲ್ಲಿ ಅಮೆರಿಕಾ ಹಾಗೂ ಭಾರತದಂತಹ ದೇಶಗಳು ಇನ್ನೂ ಕೋವಿಡ್–19 ಸಾಂಕ್ರಾಮಿಕ ರೋಗದ ಮೊದಲನೇ ಅಲೆಯಲ್ಲಿದ್ದರೆ, ಯುರೋಪಿನಲ್ಲಿ ರೋಗದ ಎರಡನೆಯ ಅಲೆಯು ಆಗಲೇ ಹೊರ ಹೊಮ್ಮಿರುವುದನ್ನು ಆರೋಗ್ಯ ಅಧಿಕಾರಿಗಳು ಘೋಷಿಸಿದ್ದರು. ಇನ್ನು ಯುರೋಪ್‌ನ ಕೆಲವು ದೇಶಗಳಲ್ಲಿ ಮೂರನೇ ಅಲೆ ಕೂಡ ಆರಂಭವಾಗಿದೆ ಎಂದು ಹೇಳಲಾಗುತ್ತಿದೆ. ಹೆಚ್ಚಿನ ಯುರೋಪಿಯನ್ ದೇಶಗಳಲ್ಲಿ, ಎರಡನೆಯ ಅಲೆಯಲ್ಲಿ ದೈನಂದಿನ ಪ್ರಕರಣಗಳು ಮೊದಲನೆಯದಕ್ಕೆ ಹೋಲಿಸಿದರೆ ಗಣನೀಯವಾಗಿ ಹೆಚ್ಚಾಗಿದ್ದವು.**

**ಸೋಂಕಿನ ಎರಡನೆಯ ಅಲೆಯು ಈಗಾಗಲೇ ದೇಶದ ಹಲವು ರಾಜ್ಯಗಳಲ್ಲಿ ಕಾಣಿಸಿಕೊಂಡಿದ್ದು, ಅದರಲ್ಲೂ ಮಹಾರಾಷ್ಟ್ರದಲ್ಲಿ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಇದು ಮುಂಬರುವ ದಿನಗಳಲ್ಲಿ ಉತ್ತುಂಗಕ್ಕೇರುವ ಸಾಧ್ಯತೆಯಿದ್ದು, ಆರೋಗ್ಯ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಸಾಧ್ಯತೆಯಿದೆ.**



Download From : www.kpscvaani.com

# ಕೋವಿಡ್ ವಿರುದ್ಧದ ಕದನಕ್ಕೆ ಭರ್ತಿ 1 ವರ್ಷ

ಬಿ. ಸಮೀವುಲ್ಲಾ

ಈ ಒಂದು ವರ್ಷದಲ್ಲಿ ಮನುಕುಲ ನಡೆಸಿದ ಸೆಣಸಾಟ, ಜೀವಸಂಕುಲದ ಇತಿಹಾಸದಲ್ಲೆ ಒಂದು ಕರಾಳ ಪರ್ವ. ಒಂದು ನಿಟ್ಟಿನಲ್ಲಿ ಇದು ಮಹಾಸಮರ. ಮತ್ತೊಂದು ನಿಟ್ಟಿನಲ್ಲಿ ಭೇದಿಸುತ್ತಾ ಹೋದಂತೆಲ್ಲಾ ಮತ್ತೆ ಎದುರಾಗುವ ವ್ಯೂಹ. ಹೀಗಾಗಿ ಕೋವಿಡ್ ಅಂದರೆ ಯಶಸ್ಸು ಸಿಗುವವರೆಗೂ ಹೋರಾಡುತ್ತಲೇ ಇರಬೇಕಾದ ಚಕ್ರವ್ಯೂಹ.

ಈ ಲೇಖನ ನಿಮ್ಮ ಕೈಸೇರುವ ಹೊತ್ತಿಗೆ ಕೋವಿಡ್ ವಿರುದ್ಧದ ಸಮರದ ಮತ್ತೊಂದು ಚಾರಿತ್ರಿಕ ಘಟ್ಟದಲ್ಲಿ ನಾವು ಬಂದು ನಿಂತಿರುತ್ತೇವೆ. ಈ ಬಾರಿ ಸಮರದಲ್ಲಿ ಬತ್ತಳಿಕೆಯಲ್ಲಿ ಲಸಿಕೆ ಇದೆ. ಬರೀ ಲಸಿಕೆ ಇದ್ದರೆ ಸಾಲದು, ಗುರಿ ಇರಬೇಕು. ಹೀಗೆ ಕೋವಿಡ್ ವಿರುದ್ಧದ ಲಸಿಕೆ ಅಸ್ತ್ರ ನಾಟಬೇಕಾದ ಗುರಿ, ತಲುಪಬೇಕಾದ ದೂರ, ಮತ್ತು ಗುರಿ ಮುಟ್ಟಲು ಬೇಕಾದ ವೇಗ ಇವೆಲ್ಲಾ ಈ ಹೊತ್ತಿನ ತುರ್ತು ಅಗತ್ಯವಾಗಿದೆ. ಇಂತಹ ಪರಿಸ್ಥಿತಿ ಯಾವುದೇ ಸರ್ಕಾರಕ್ಕೂ ಸವಾಲು ಕೂಡ. ಆಗಲೇ ಹೇಳಿದಂತೆ... ಒಂದು ವರ್ಷದಲ್ಲಿ ವಿಜ್ರಂಭಿಸಿದ ಕೋವಿಡ್, ಹೋದ ವರ್ಷ ನವೆಂಬರ್ ನಂತರ ಹತೋಟಿಗೆ ಬಂದು, ಇನ್ನೇನು ಮಾಯವಾಯಿತು ಎಂದು ಮೂರು ತಿಂಗಳು ನಿಟ್ಟುಸಿರು ಬಿಡುವಷ್ಟರಲ್ಲೇ ಮತ್ತೊಮ್ಮೆ ಎರಡನೇ ಅಲೆ ವಕ್ಕರಿಸಿ ದಿಗ್ಭ್ರಮೆ ಮೂಡಿಸಿದೆ.

ಕಳೆದ ನವೆಂಬರ್ 13 ರ ಆಸುಪಾಸು 2016 ಸಂಖ್ಯೆಯಲ್ಲಿ ಕೊರೊನಾ ಪಾಸಿಟಿವ್ ವರದಿಯಾಗಿತ್ತು. ಈ ಸಂಖ್ಯೆ ಇಳಿಮುಖ ಕಾಣುತ್ತಿರುವಾಗಲೇ, ನಾಲ್ಕು ತಿಂಗಳ ನಂತರ ಬರೋಬ್ಬರಿ 2010 ಪ್ರಕರಣ ದಾಖಲಾಗಿ ಕೊರೊನಾ ಪಾಸಿಟಿವ್ ಸಂಖ್ಯೆ ಮತ್ತೆ ಏರುಗತಿಯಲ್ಲಿ ಏರುತ್ತಿದೆ. ಲಸಿಕೆ ಅಸ್ತ್ರ ಹಿಡಿದು ಸರ್ಕಾರ ಮತ್ತೊಂದು ಸುತ್ತಿನ ಹೊಸ ಸಮರಕ್ಕೆ ಸಜ್ಜಾಗಿರುವುದು, ಹೊಸ ತಂತ್ರಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ. ಇದು ಕೋವಿಡ್ ರೋಗದ ಹಿನ್ನೆಲೆಯಲ್ಲಿ ಬದಲಾದ ಸ್ಥಿತಿಯ ನೈಜ್ಯ ಚಿತ್ರಣ.

ಅಂದು ಲಸಿಕೆ ಇರಲಿಲ್ಲ, ಇಂದು ಲಸಿಕೆ ಇದೆ. ಆದರೂ ಸಾಂಕ್ರಾಮಿಕ ರೋಗವನ್ನು ಹತೋಟಿಗೆ ತರುವ ಹಾದಿ ಮಾತ್ರ ದೂರವಿದೆ. ಸಾರ್ವಜನಿಕರಲ್ಲಿ ಸಾಕಷ್ಟು ಅರಿವು, ಜವಾಬ್ದಾರಿ ಇನ್ನೂ ಬರಬೇಕಾದ ಕಾರಣದಿಂದ ಈ ಹಾದಿ ಇನ್ನೂ ದುರ್ಗಮ ಆಗಿದೆ.

ಇಷ್ಟನ್ನೆಲ್ಲಾ ಏಕೆ ಹೇಳಬೇಕಾಯಿತು ಎಂದರೆ... ಕೊರೊನಾ ಕಲಿಸಿದ ಪಾಠ ಇದೆಯಲ್ಲ ಅದು ಕಕ್ಕಾಬಿಕ್ಕಿಗೊಳಿಸುವಂಥದ್ದು. ಊಹೆ, ಲೆಕ್ಕಾಚಾರ, ತರ್ಕಕ್ಕೆ ಮೀರಿದ್ದು.

ಕೋವಿಡ್ ಹತೋಟಿಗೆ ಬಂದ ಕಾರಣ ಸರ್ಕಾರ ಆರ್ಥಿಕ ಚೇತರಿಕೆಯ ಕಾರಣದಿಂದ ಕೆಲವು ನಿಯಮಾವಳಿಗಳನ್ನು ಸಡಿಲಿಸಿತು. ಆದರೆ ಸಾರ್ವಜನಿಕರು ಕಡ್ಡಾಯವಾಗಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಸಡಿಸಲಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸಾರ್ವಜನಿಕ ಅಂತರ ಕಾಪಾಡಿಕೊಳ್ಳಬೇಕು ಎಂಬುದನ್ನು ಕಡ್ಡಾಯ ಮಾಡಲಾಗಿತ್ತು. ಆದರೆ ಜನರು ಈ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸದ ಕಾರಣ ಇಂದು ಎರಡನೇ ಅಲೆಯನ್ನು ಎದುರಿಸಬೇಕಾಗಿ ಬಂದಿದೆ. ಈ ಸಾಂಕ್ರಾಮಿಕ ರೋಗವನ್ನು ಸರ್ಕಾರ ಒಂದರಿಂದಲೇ ಹತೋಟಿ ಮಾಡಲು ಸಾಧ್ಯವಿಲ್ಲ. ಸಾರ್ವಜನಿಕರ ಸಹಕಾರ ಪ್ರಮುಖವಾಗುತ್ತದೆ.

ದೊಡ್ಡ ಸಮರದಲ್ಲಿ ಟೀಕೆಗಳು ಇದ್ದದ್ದೇ, ಆದರೆ ಈ ಸಮರ ಗೊತ್ತಿಲ್ಲದ

> **ಕೊರೊನಾ ಎರಡನೇ ಅಲೆಯು ಜೋರಾಗಿದ್ದು, ಅಕ್ಕ-ಪಕ್ಕದ ರಾಜ್ಯಗಳಲ್ಲಿ ಕೊರೊನಾ ಪಾಸಿಟಿವ್ ಪ್ರಕರಣ ದಿನದಿಂದ ದಿನಕ್ಕೆ ಏರಿಕೆಯನ್ನು ಕಾಣುತ್ತಿದೆ. ಆದರೂ ಸಹ ಕರ್ನಾಟಕದಲ್ಲಿ ಪಾಸಿಟಿವ್ ಪ್ರಕರಣ ಅಲ್ಪ ಪ್ರಮಾಣದಲ್ಲಿರುವುದಕ್ಕೆ ಸರ್ಕಾರವು ಗಂಭೀರವಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿರುವುದೇ ಕಾರಣ. ಹಾಗಾಗಿ ಸರ್ಕಾರದ ಕ್ರಮಗಳಿಗೆ ಜನರು ಸಹಕಾರ ನೀಡಿದರೆ ಕರ್ನಾಟಕವನ್ನು ಕೊರೊನಾ ಮುಕ್ತ ರಾಜ್ಯವಾಗಿಸಬಹುದು.**



Download From : www.kpscvaani.com

ಶತ್ರುವಿನ ವಿರುದ್ಧ. ಕಾಣದ ಶತ್ರುವಿನ ವಿರುದ್ಧ. ಶತ್ರುವಿನ ಬಳಿ ಇರುವ ಮಾರಕಾಸ್ತ್ರಗಳ ಬಗ್ಗೆ ಅಂದಾಜು ಇಲ್ಲದೆ ದಶದಿಕ್ಕುಗಳಲ್ಲಿ ಸರ್ಕಾರ ನಡೆಸಿದ, ನಡೆಸಬೇಕಾದ ಸಮರ. ಇಂತಹ ಸಮರದಲ್ಲಿ ಶಕ್ತಿ ಸಾಮರ್ಥ್ಯದ ಜೊತೆಗೆ ತಕ್ಷಣ ಸ್ಪಂದಿಸಬೇಕಾದ ಸಮಯ ಪ್ರಜ್ಞೆಯನ್ನು, ತಂತ್ರಗಾರಿಕೆಯನ್ನು ಸರ್ಕಾರ ತೋರಿದೆ. ಇಡೀ ದೇಶಕ್ಕೆ ಮಾದರಿ ಎನ್ನುವ ಮೇಲ್ಪಂಕ್ತಿ ಕೂಡ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತೋರಿದೆ ಎನ್ನುವುದೂ ದಾಖಲಾರ್ಹ.

ಈ ಹೋರಾಟ ಕಥನದಲ್ಲಿ ಸಂದರ್ಭದ ತೀಕ್ಷಣತೆ ಗಮನಿಸಿದ ರಾಜ್ಯ ಸರ್ಕಾರವು ತಾಂತ್ರಿಕ ಸಲಹಾ ಸಮಿತಿ ರಚಿಸಿ ಕೋವಿಡ್ ನಿರ್ನಾಮಕ್ಕೆ ಶಪಥ ಗೈದಿದ್ದು ಫಸ್ಟ್ ಆಫ್ ಇಟ್ಸ್ ಕೈಂಡ್ ಇನ್ ಇಂಡಿಯಾ. ಕೋವಿಡ್ ದಮನಕ್ಕೆ ವೈದ್ಯರನ್ನೇ ತಲೆ ಮೇಲೆ ಕೈ ಹೊತ್ತು ಕೂರುವಂತೆ ಮಾಡಿದ ಹೊತ್ತಲ್ಲಿ ತಜ್ಞರ ತುರ್ತು ನಿಗಾ ನೆರವು ಪಡೆಯಲು ರಚಿಸಿದ ಕ್ರಿಟಿಕಲ್ ಕೇರ್ ಸಪೋರ್ಟ್ ಒಂದು ಹೊಸ ಪ್ರಯೋಗವಾಗಿತ್ತು. ಇದರ ಪರಿಣಾಮ ರೋಗ ತೀವ್ರವಾದರೂ ಸಾವಿನ ಸಂಖ್ಯೆ ನಿಯಂತ್ರಣಕ್ಕೆ ಬಂದಿದ್ದು ವಿಶೇಷ.

ರೋಗ ಭೀಕರವಾಗಿ ಹಬ್ಬುತ್ತಿದ್ದರೂ ಮನುಕುಲವನ್ನು ಅದು ಕಬಳಿಸಲು ಹೂಡಿದ ಮಸಲತ್ತನ್ನು ಸರ್ಕಾರ ವಿಫಲಗೊಳಿಸಲು ನಡೆಸಿದ ಯತ್ನ ಇದೆಯಲ್ಲಾ ಅದು ಕೋವಿಡ್ ವಿರುದ್ಧದ ಸಮರ ತಂತ್ರವೂ ಹೌದು. ಹೆಚ್ಚು ಸಂಖ್ಯೆಯಲ್ಲಿ ಕೋವಿಡ್ ಕೇಂದ್ರ ಸ್ಥಾಪನೆ, ರಾಜ್ಯಾದ್ಯಂತ ಕೋವಿಡ್ ಆಸ್ಪತ್ರೆಗಳ ಸ್ಥಾಪನೆ, ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಯನ್ನು ವಶಪಡಿಸಿಕೊಂಡು ಜನರಿಗೆ ನೆರವಾದ ರೀತಿ ಕೂಡ ಹೊಸ ಪ್ರಯೋಗವೇ. ಹೀಗಾಗಿಯೇ ಹೊಸ ಸವಾಲನ್ನು ಸ್ವೀಕರಿಸಿ ಅಭೂತಪೂರ್ವ ಸೌಕರ್ಯ ಪಡೆದಿದ್ದು ಇದೆ ಕಾಲಘಟ್ಟಕ್ಕೆ ಎನ್ನುವುದು ಅಷ್ಟೇ ಸತ್ಯ.

ಇದು ಒಂದು ಭಾಗವಾದರೆ, ಇಷ್ಟೆಲ್ಲಾ ಪ್ರಯೋಗದ ಬಳಿಕ ಕೋವಿಡ್ ಎರಡನೇ ಅಲೆಯು ತಜ್ಞರ ಲೆಕ್ಕಾಚಾರದಂತೆ ನಾಲ್ಕು ತಿಂಗಳ ಮೇಲೆ ಬಂದಿದೆ. ಇದನ್ನು ಸರ್ಕಾರ ಹೇಗೆ ನಿಭಾಯಿಸುತ್ತದೆ ಎಂಬುದು ಸಹಜವಾದ ಪ್ರಶ್ನೆ.

ನಮ್ಮ ರಾಜ್ಯದ ಗಡಿಗೆ ಅಂಟಿಕೊಂಡಿರುವ ಮಹಾರಾಷ್ಟ್ರ



ಕೊರೊನಾ ಎರಡನೇ ಅಲೆಯ ಅಬ್ಬರಕ್ಕೆ ತತ್ತರಿಸಿ ಹೋಗಿದೆ. ಪ್ರತಿನಿತ್ಯ 25 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿದೆ. ನೆರೆಯ ಗೋವಾ ಅಷ್ಟೇ ಏಕೆ ಕೋವಿಡ್ ನಿಯಂತ್ರಣಕ್ಕೆ ಬೇಕಾದಷ್ಟು ಪ್ರಯೋಗ ಮಾಡಿದ ಕೇರಳದಲ್ಲಿ ಎರಡನೇ ಅಲೆ ಅಪ್ಪಳಿಸಿದೆ. ಕೊರೊನಾ ಪಾಸಿಟಿವಿಟಿ ಪ್ರಮಾಣವನ್ನು ಇಲ್ಲಿ ದಾಖಲೆಯಾಗಿ ಕೊಡಬಹುದು. ಮಹಾರಾಷ್ಟ್ರದಲ್ಲಿ ಈ ಪ್ರಮಾಣ 13.9, ಎಲ್ಲವನ್ನು ಚೆನ್ನಾಗಿಯೇ ನಿಯಂತ್ರಣ ಮಾಡಿಕೊಂಡಿರುವುದಾಗಿ ಹೇಳುವ ಕೇರಳದಲ್ಲಿ ಇದರ ಪ್ರಮಾಣ 8.7, ಗೋವಾದಲ್ಲಿ 10.8 ಇದೆ. ಹೀಗೆ ಕೋವಿಡ್ ವ್ಯೂಹದಿಂದ ಸುತ್ತುವರೆಯಲ್ಪಟ್ಟ ಕರ್ನಾಟದಲ್ಲಿ ಇದರ ಪ್ರಮಾಣ ಅತ್ಯಂತ ಕಡಿಮೆ ಅಂದರೆ ಸರಿ ಸುಮಾರು 4.6 ಇದೆ. ಇದಕ್ಕೆ ಸರ್ಕಾರ, ವೈದ್ಯರು, ಪೌರಕಾರ್ಮಿಕರು, ಪೊಲೀಸರು, ಆಶಾ ಕಾರ್ಯಕರ್ತೆಯರು ತಮ್ಮ ಜೀವ ಒತ್ತೆ ಇಟ್ಟು ಸಾರ್ವಜನಿಕರ ಬದುಕನ್ನು ಉಳಿಸಲು ಹಗಲಿರುಳು ಶ್ರಮಿಸುತ್ತಿರುವುದೇ ಕಾರಣ.

ಇಂಥದೊಂದು ಸಂದಿಗ್ಧ ಕಾಲಘಟ್ಟದಲ್ಲಿ ಸರ್ಕಾರವು ಹಣಕಾಸು ನೆರವು ನೀಡುವ ಜೊತೆಗೆ ಕೊರೊನಾ ನಿಗ್ರಹಕ್ಕಾಗಿ ಅನುಸರಿಸಿದ ಕ್ರಮಗಳು, ರಾಜ್ಯದಲ್ಲಿ ಪರಿಸ್ಥಿತಿ ಕೈಮೀರಿ ಹೋಗುವುದನ್ನು ತಪ್ಪಿಸಿತು. ಹೀಗಾಗಿ ಟೆಸ್ಟಿಂಗ್, ಟ್ರೇಸಿಂಗ್ ಮತ್ತು ಟ್ರೀಟಿಂಗ್‌ನಲ್ಲಿ ಕರ್ನಾಟಕ ತುಂಬಾ ಮೊದಲೇ ಇತರೆ ರಾಜ್ಯಗಳನ್ನು ಮೀರಿಸಿ ದಾಪುಗಾಲು ಹಾಕಿದ್ದಕ್ಕೆ ಇಷ್ಟಲ್ಲಾ ನಿಯಂತ್ರಣಕ್ಕೆ ಸಾಧ್ಯ ಎನ್ನುವುದನ್ನು ನಿಸ್ಸಂಶಯವಾಗಿ ಹೇಳಬಹುದು.

ಆಗಲೇ ಹೇಳಿದಂತೆ ಇದೀಗ ಲಸಿಕೆ ಅಸ್ತ್ರ ಹಿಡಿದು ಒಂದಿಷ್ಟು ಅನುಭವ, ಮತ್ತೊಂದಿಷ್ಟು ಸವಲತ್ತು, ಇದರ ಜೊತೆಗೆ ಭಯರಹಿತ ವಾತಾವರಣದಲ್ಲಿ ಈಗ ಕೊರೊನಾ ಮಹಾಯಜ್ಞವನ್ನು ಆರಂಭಿಸಿದೆ. ಇದು ಎರಡು ಅಲಗಿನ ಕತ್ತಿ ವರಸೆ. ಒಂದು ಅಲುಗಿನಲ್ಲಿ ಲಸಿಕೆ ಕೊಟ್ಟು, ರೋಗ ನಿರೋಧಕ ಶಕ್ತಿ ಹೆಚ್ಚುಸುವುದು, ಮತ್ತೊಂದು ಅಲುಗಿನಲ್ಲಿ ಯಥಾ ಪ್ರಕಾರ ಕೊರೊನಾ ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದು.

ಇದರ ಪರಿಣಾಮವಾಗಿ ಸರಿ ಸುಮಾರು 38.8 ಲಕ್ಷ ಡೋಸೇಜ್ ಲಸಿಕೆ ಮೊದಲ ಹಂತದಲ್ಲೇ ರಾಜ್ಯಕ್ಕೆ ಬಂದಿದ್ದು, ಸರ್ಕಾರದ ನಿಯಮಾವಳಿಗಳ ಅನುಸಾರ ವಯೋವೃದ್ಧರು ಅಷ್ಟೇ ಅಲ್ಲ, ಆರೋಗ್ಯವಂತ ಮಧ್ಯಮ ವಯಸ್ಕರಿಗೂ, ಅಂದರೆ 45 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡುವ ಮಹಾಯಜ್ಞವು ಮನುಕುಲ ಇತಿಹಾಸಲ್ಲಿ ಹೊಸ ಬಾಷ್ಯ ಬರೆಯುತ್ತಿದೆ. ಈ ಭಾಷ್ಯದಲ್ಲಿ ರಾಜ್ಯ ಸರ್ಕಾರದ ಕಳಕಳಿ ಸಮಯ ಪ್ರಜ್ಞೆ ಮುನ್ನೋಟ ಎದ್ದು ಕಾಣುತ್ತಿದೆ.

ರಾಜ್ಯದ ಸೋಂಕಿತರ ಸಂಖ್ಯೆ ಹತ್ತು ಲಕ್ಷಕ್ಕೆ ಹತ್ತಿರವಾಗುತ್ತಿರುವ ಹೊತ್ತಲ್ಲಿ, ಕೋವಿಡ್ ಪರೀಕ್ಷೆ ಬರೋಬ್ಬರಿ ಎರಡು ಕೋಟಿ ಮೀರಿ ಇನ್ನೂ ಸಮರೋಪಾದಿಯಲ್ಲಿ ಮುಂದುವರೆಯುತ್ತಿರುವ ಸಂದರ್ಭದಲ್ಲಿ ಕೋವಿಡ್ ಲಸಿಕೆಯ ಯಜ್ಞ ಮತ್ತೊಂದು ಹೊಸ ಅನುಭವವನ್ನು ಕಟ್ಟಿ ಕೊಡುತ್ತಿದೆ. ಆಗಲೇ ಹೇಳಿದಂತೆ ಮೊದಲು ಮಹಾಸಮರ...ಈಗ ಲಸಿಕೆ ನೀಡುವ ಮಹಾಯಜ್ಞ ಸಫಲವಾಗಬೇಕಾದರೆ ಸರ್ಕಾರದ ಶ್ರಮ ಮತ್ತು ಸಾರ್ವಜನಿಕರ ಸಹಕಾರ ಎರಡೂ ಮುಖ್ಯವಾಗುತ್ತದೆ.



Download From : www.kpscvaani.com



# ಅಂಕಿತ ಮಾಧ್ಯಮಕ್ಕೆ ಅಂಕೆ ಇದೆಯೇ?

ಡಿ. ಪಿ. ಮುರಳೀಧರ್

ಮಾಧ್ಯಮ ಎಂಬುದು ಸಂವಹನ ವಾಹಕ, ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಮುದ್ರಣ ಮಾಧ್ಯಮದ ಪ್ರಮುಖ ಭಾಗ, ಬಾನುಲಿ (ರೇಡಿಯೋ) ಹಾಗೂ ದೂರದರ್ಶನ ವಾಹಿನಿಗಳು ಎಂದೇ ಕರೆಯಲಾಗುವ ಟೆಲಿವಿಜನ್ ಚಾನೆಲ್‌ಗಳು ವಿದ್ಯುನ್ಮಾನ ಮಾಧ್ಯಮದ ವ್ಯಾಪ್ತಿಗೆ ಒಳಪಡುವ ಅಂಗಗಳು.

ಇದೀಗ ನವ ಮಾಧ್ಯಮಗಳು ಎಂಬ ಹೊಸ ಪದ ಕೂಡಾ ಚಾಲ್ತಿಯಲ್ಲಿ ಇದೆ. ನವ ಮಾಧ್ಯಮಗಳು ಎಂಬ ವ್ಯಾಖ್ಯೆಯಲ್ಲಿ ಅಂತರ್ಜಾಲ ತಾಣದಲ್ಲಿ ಕಾಣಸಿಗುವ ಹಾಗೂ ಸಂವಾದಾತ್ಮಕ ಎಲ್ಲಾ ಅಂಶಗಳೂ ಅಡಕಗೊಂಡಿದೆ. ನವ ಮಾಧ್ಯಮ ವೇದಿಕೆಯಲ್ಲಿ ಅಂಕಿತ ಮಾಧ್ಯಮ (ಡಿಜಿಟಲ್ ಮೀಡಿಯಾ) ಹಾಗೂ ಸಾಮಾಜಿಕ ಮಾಧ್ಯಮ (ಸೋಷಿಯಲ್ ಮೀಡಿಯಾ) ಎಂಬ ಎರಡು ಮಾಧ್ಯಮಗಳು ಪ್ರಚಲಿತವಾಗಿದೆ.



Download From : www.kpscvaani.com

### ಅಂಕಿತ ಮಾಧ್ಯಮ !

ರೇಡಿಯೋ, ಟೆಲಿವಿಷನ್ ಹಾಗೂ ಅಂತರ್ಜಾಲ (ಇಂಟರ್‌ನೆಟ್) ಸೌಲಭ್ಯವಿರುವ ಗಣಕ ಯಂತ್ರ (ಕಂಪ್ಯೂಟರ್), ಆನ್‌ಲೈನ್ ನ್ಯೂಸ್ ಹಾಗೂ ಡಿಜಿಟಲ್ ಪೋರ್ಟಲ್ ಇವೆಲ್ಲವೂ ಅಂಕಿತ ಮಾಧ್ಯಮವೇ. ಸಾಮಾಜಿಕ ಮಾಧ್ಯಮವೂ ಕೂಡಾ ಅಂಕಿತ ಮಾಧ್ಯಮ ವೇದಿಕೆಯೇ (ಡಿಜಿಟಲ್ ಮೀಡಿಯಾ ಪ್ಲಾಟ್‌ಫಾರ್ಮ್). ಈ ವಿಷಯವನ್ನು ಎಲ್ಲರಿಗೂ ಸುಲಭವಾಗಿ ಮನವರಿಕೆ ಮಾಡಿಕೊಡಲು ಒಂದು ಸಣ್ಣ ಉದಾಹರಣೆಯೊಂದಿಗೆ ಬಣ್ಣಿಸಬಹುದಾದರೆ, ಅಂಕಿತ ಮಾಧ್ಯಮ ಎಂಬುದು ಊಟವಿದ್ದಂತೆ. ಸಾಮಾಜಿಕ ಮಾಧ್ಯಮ ಎಂಬುದು ಊಟದ ಒಂದು ಭಾಗವಾಗಿರುವ ಪಲ್ಯಗಳು ಇದ್ದಂತೆ. ಇದೀಗ ಈ ಮಾಧ್ಯಮಗಳು ಮಾಹಿತಿ, ಸರಕು ಮತ್ತು ಸೇವೆಗಳನ್ನು ಒದಗಿಸಲು ಪೂರಕ ಮತ್ತು ಪ್ರೇರಕ.

ಸಾಮಾಜಿಕ ಮಾಧ್ಯಮದಲ್ಲಿ ಫೇಸ್‌ಬುಕ್, ಟ್ವಿಟ್ಟರ್, ಟೆಲಿಗ್ರಾಮ್, ಇನ್‌ಸ್ಟಾಗ್ರಾಮ್, ಸ್ನ್ಯಾಪ್‌ಚಾಟ್, ಸಿಗ್ನಲ್ ಪ್ರಮುಖವಾಗಿ ಬಳಕೆಯಲ್ಲಿರುವ ಸಾಮಾಜಿಕ ಜಾಲತಾಣ ವೇದಿಕೆಗಳು (ಸೋಷಿಯಲ್ ನೆಟ್‌ವರ್ಕಿಂಗ್ ಪ್ಲಾಟ್‌ಫಾರ್ಮ್ಸ್). ಅಲ್ಲದೆ, ಕೋರಾ, ಸ್ಟಾಕ್ ಓವರ್ ಫ್ಲೋ, ಯಾಹೂ ಆನ್ಸರ್ಸ್, ರೆಡ್‌ಇಟ್ ಇವುಗಳು ಜ್ಞಾನ ವಿನಿಮಯ ವೇದಿಕೆ ( ನಾಲೆಡ್ಜ್ ಷೇರಿಂಗ್ ಮೀಡಿಯಾ ಪ್ಲಾಟ್‌ಫಾರ್ಮ್ಸ್ ). ಇದಲ್ಲದೆ, ಪಠ್ಯ ಸ್ವರೂಪವಲ್ಲದೆ ಶ್ರವಣ ಮತ್ತು ದೃಶ್ಯ ರೂಪದಲ್ಲಿ ಹಂಚಿಕೆಯಾಗುವ (ಡಿಸ್ಟ್ರಿಬ್ಯೂಟೆಡ್ ಥ್ರೂ ನಾನ್ ಟೆಕ್ಸ್ಚ್ಯುವಲ್ ಆಡಿಯೋ ವಿಷುವಲ್ ಫಾರ್ಮೆಟ್) ಯೂ ಟ್ಯೂಬ್, ಸ್ಪಾಟಿ ಫೈ, ಗಾನಾ, ಅಮೆಜಾನ್ ಮ್ಯೂಸಿಕ್ ಮಾಧ್ಯಮ ವಿನಿಮಯ ವೇದಿಕೆಗಳು (ಮೀಡಿಯಾ ಷೇರಿಂಗ್ ಪ್ಲಾಟ್‌ಫಾರ್ಮ್ಸ್).

ಜೊತೆಗೆ, ವಾಣಿಜ್ಯ ಚಟುವಟಿಕೆಗಳಿಗೆ ಮೀಸಲಿರುವ ಹಾಗೂ ಆನ್‌ಲೈನ್ ಕೋರಿಕೆಯ ಮೇರೆಗೆ ಟ್ಯಾಕ್ಸಿ ಸೇವೆ ಒದಗಿಸುವ ಓಲಾ ಮತ್ತು ಊಬರ್, ಆನ್‌ಲೈನ್ ಮೂಲಕ ಬಸ್ಸುಗಳಲ್ಲಿ ಆಸನಗಳ ಕಾಯ್ದಿಸಲು ಬಳಸುವ ರೆಡ್‌ಬಸ್ ಡಾಟ್ ಇನ್, ರೈಲು ಮತ್ತು ವಿಮಾನ ಯಾನಕ್ಕೆ ಟಿಕೇಟ್ ಖರೀದಿಸಲು ಮತ್ತು ಹೋಟೆಲ್‌ಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸಲು ವೇದಿಕೆಯಾಗಿರುವ ಟಿಕೇಟಿಂಗ್ ಸರ್ವೀಸ್ ಪ್ಲಾಟ್‌ಫಾರ್ಮ್‌ನ ಈಸ್ ಮೈ ಟ್ರಿಪ್, ಮೇಕ್ ಮೈ ಟ್ರಿಪ್ ಡಾಟ್ ಕಾಮ್, ಯಾತ್ರಾ ಡಾಟ್ ಕಾಮ್, ಸಿನಿಮಾ ಟಿಕೇಟ್ ಖರೀದಿಸುವ ಬುಕ್ ಮೈ ಷೋ, ಮನೆ ಮನೆಗೆ ಆಹಾರ ಸರಬರಾಜು ಮಾಡುವ ಮೂಲಕ ರೆಸ್ಟೋರೆಂಟ್ ಸೇವೆ ಒದಗಿಸುವ ಸ್ವಿಗ್ಗಿ, ಝೋಮ್ಯಾಟೋ ಮತ್ತು ಊಬರ್ ಈಟ್ಸ್ ಪ್ರಮುಖ ಸೇವಾ ಆಧಾರಿತ ವೇದಿಕೆಗಳು (ಸರ್ವೀಸ್ ಓರಿಯೆಂಟೆಡ್ ಪ್ಲಾಟ್‌ಫಾರ್ಮ್ಸ್).

ಅಂತೆಯೇ, ಓವರ್ ದ ಟಾಪ್ ಎಂದೇ ಕರೆಯಲಾಗುವ ಓಟಿಟಿ ಪ್ಲಾಟ್‌ಫಾರ್ಮ್‌ನಲ್ಲಿ ಅಮೆಜಾನ್ ಪ್ರೈಮ್, ನೆಟ್‌ಫ್ಲಿಕ್ಸ್, ಹಾಟ್ ಸ್ಟಾರ್ ಮತ್ತು ವೂಟ್ ತಮ್ಮ ಆ್ಯಪ್ ಹಾಗೂ ವೆಬ್‌ಸೈಟ್ ಮೂಲಕ ಮಾಧ್ಯಮ ಪ್ರವಹಿಸುವ ಸೇವೆ (ಮೀಡಿಯಾ ಸ್ಟ್ರೀಮಿಂಗ್ ಸರ್ವೀಸ್) ಒದಗಿಸುತ್ತದೆ.

ಚಂದಾದಾರಿಕೆ ಆಧಾರಿತ (ಸಬ್‌ಸ್ಕ್ರಿಪ್ಷನ್ ಬೇಸ್ಡ್) ಹಾಗೂ ಬೇಡಿಕೆಯ ಮೂಲಕ ಪ್ರವೇಶ (ಆನ್ ಡಿಮ್ಯಾಂಡ್ ಆಕ್ಸೆಸ್) ಪಡೆಯಬಹುದಾದ ಈ ಸೇವೆ ಅತೀ ಹೆಚ್ಚು ವ್ಯಾಪೀ. ಭಾರತದಲ್ಲಿ ಕೋವಿಡ್–19 ರ ಅವಧಿಯಲ್ಲಿ ಲಾಕ್‌ಡೌನ್ ಘೋಷಣೆಯಾದ ನಂತರ ಮನೆಯಿಂದ ಹೊರಬಾರದ ಜನರಿಗೆ ಓಟಿಟಿ ಪ್ಲಾಟ್‌ಫಾರ್ಮ್ ವರವಾಗಿ ಪರಿಣಮಿಸಿ ಮನರಂಜನೆಯ ಕಾರಂಜಿಯನ್ನೇ ಹರಿಸಿದೆ.

ಈ ಅವಧಿಯಲ್ಲಿ ಓಟಿಟಿ ಪ್ಲಾಟ್‌ಫಾರ್ಮ್‌ನ ಚಂದಾದಾರಿಕೆ ಶೇಕಡಾ 30 ಏರಿಕೆಯಾಗಿದೆ. ಇದೀಗ ನಮ್ಮ ಭಾರತದಲ್ಲಿ ಓಟಿಟಿ ಪ್ಲಾಟ್‌ಫಾರ್ಮ್‌ನ ಚಂದಾದಾರಿಕೆ 2.9 ಕೋಟಿ ದಾಟಿದೆ ಎಂಬುದು ಅಚ್ಚರಿ ಮತ್ತು ಆನಂದದ ಸಂಗತಿಯಾಗಿದೆ.

ಆದರೆ, ಕ್ರೌರ್ಯ, ಲೈಂಗಿಕತೆ, ರಾಷ್ಟ್ರ–ವಿರೋಧಿ ಹಾಗೂ ಧರ್ಮ–ವಿರೋಧಿ ಅಂಶಗಳಿದ್ದರೂ ಸೆನ್ಸಾರ್ ಮಾಡಲಾಗದ ಹಿನ್ನೆಲೆಯಲ್ಲಿ, ಓಟಿಟಿ ಪ್ಲಾಟ್‌ಫಾರ್ಮ್ ಪೂರ್ಣ ಪ್ರಮಾಣದಲ್ಲಿ ಭಾರತೀಯ ಕಾನೂನು ವ್ಯಾಪ್ತಿಗೆ ಇನ್ನೂ ಒಳಪಡದೇ ಇರುವುದು ಅತ್ಯಂತ ಕಳವಳಕಾರಿ ವಿಷಯವಾಗಿದೆ.

### ಸ್ವಾತಂತ್ರ್ಯ ಮತ್ತು ನಿರ್ಬಂಧ !

ಭಾರತ ಸಂವಿಧಾನದ ಪರಿಚ್ಛೇಧ 19 (1) (ಎ) ನಲ್ಲಿ ದೇಶದ ಎಲ್ಲಾ ನಾಗರಿಕರಿಗೂ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯವನ್ನು ಕೊಡಮಾಡಲಾಗಿದೆ. ಅಮೆರಿಕಾ ಸಂವಿಧಾನದ ಪರಿಚ್ಛೇಧ 1 ರಲ್ಲಿ ಪ್ರದತ್ತವಾಗಿರುವಂತೆ ನಮ್ಮ ಸಂವಿಧಾನದಲ್ಲಿ ಪ್ರತ್ಯೇಕವಾಗಿ ಪತ್ರಿಕಾ ಸ್ವಾತಂತ್ರ್ಯವನ್ನು ಕೊಡಮಾಡಲಾಗಿಲ್ಲ. ಆದರೆ, ಭಾರತ ಸಂವಿಧಾನದ ಪರಿಚ್ಛೇಧ 19 (1) (ಎ) ರಲ್ಲಿಯೇ ಪತ್ರಿಕಾ ಸ್ವಾತಂತ್ರ್ಯವೂ ಕೂಡಾ ಅಡಕವಾಗಿದೆ. ಪರಿಚ್ಛೇಧ 19 (2) ರಲ್ಲಿ ಯುಕ್ತ ನಿರ್ಬಂಧಗಳೂ ಇವೆ.

ಭಾರತದಲ್ಲಿ ಅಂತರ್ಜಾಲ ಬಳಕೆದಾರರ ಪ್ರಮಾಣ ದಿನೇ ದಿನೇ ತೀವ್ರಗತಿಯಲ್ಲಿ ಏರಿಕೆಯಾಗಿದೆ. ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ, ಭಾರತದ 130 ಕೋಟಿ ಜನಸಂಖ್ಯೆಯಲ್ಲಿ ಐದು ವರ್ಷಗಳ ಹಿಂದೆ ಇಂಟರ್‌ನೆಟ್ ಬಳಕೆದಾರರ ಸಂಖ್ಯೆ 34.5 ಕೋಟಿ ಇತ್ತು. ಇದೀಗ ದೇಶದ ಜನಸಂಖ್ಯೆ 138 ಕೋಟಿ ತಲುಪಿದೆ. ಅಂತೆಯೇ, ಪ್ರತಿಯೊಬ್ಬರ ಕೈಯಲ್ಲಿ ಅಥವಾ ಕಿಸೆಯಲ್ಲಿ ಮೊಬೈಲ್ ಸೇರ್ಪಡೆಯಾಗಿ ಇಂಟರ್‌ನೆಟ್ ಬಳಕೆದಾರರ ಸಂಖ್ಯೆ 62.9 ಕೋಟಿಗೆ ಏರಿಕೆಯಾಗಿದೆ ಎಂಬುದು ಇಡೀ ವಿಶ್ವವನ್ನೇ ಬೆರಗುಗೊಳಿಸುವ ವಿಚಾರವಾಗಿದೆ. ಇದು ರಾಷ್ಟ್ರದ ಅಭ್ಯುದಯದ ಸಂಕೇತವೂ ಹೌದು! ಅಂತೆಯೇ, ಒಂದು ರೀತಿಯಲ್ಲಿ ಇದು ಆತಂಕದ ವಿಷಯವೂ ಕೂಡಾ.

### ಅಭ್ಯುದಯದ ಸಂಕೇತ !

ಲಾಕ್‌ಡೌನ್ ಸಂದರ್ಭದಲ್ಲಿ ನೂರಾರು ವಿಷಯಗಳ ಕುರಿತು ಸಾವಿರಾರು ಮಂದಿ ಸಭೆಗಳನ್ನು ನಡೆಸಿ ಲಕ್ಷಾಂತರ ಮಂದಿಯನ್ನು ವೇಗವಾಗಿ ತಲುಪಲು ಮಾತ್ರವಲ್ಲ, ಕೋಟ್ಯಾಂತರ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಶಿಕ್ಷಣ ಒದಗಿಸಲು ಹಾಗೂ ಮನೆಯಲ್ಲಿಯೇ ಕುಳಿತು ಮನರಂಜನೆ ಪಡೆಯಲು ಅಂಕಿತ ಮಾಧ್ಯಮ ಅತ್ಯುತ್ತಮ ವೇದಿಕೆಯಾಗಿದೆ. ಇಂತಹ ಮಾಧ್ಯಮವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಯಾರೂ ದುರುಪಯೋಗ ಮಾಡಬಾರದು.

ತಾನು ವ್ಯಾಸಂಗ ಮಾಡುತ್ತಿದ್ದ ಶಿಕ್ಷಣ ಸಂಸ್ಥೆಯಲ್ಲಿ ಮೊಬೈಲ್‌ನ ಉಪಯೋಗ ಹಾಗೂ ವಸತಿ ನಿಲಯದಲ್ಲಿ ಇಂಟರ್‌ನೆಟ್‌ನ ಬಳಕೆ ಪ್ರಶ್ನಿಸಿದ್ದ ಫಹೀಮಾ ಷರೀನ್ ಹಾಗೂ ಕೇರಳ ರಾಜ್ಯ ಪ್ರಕರಣದಲ್ಲಿ ಕೇರಳ ಉಚ್ಚ ನ್ಯಾಯಾಲಯವು ಖಾಸಗೀತನದ ಹಕ್ಕು



Download From : www.kpscvaani.com

ಹಾಗೂ ಶಿಕ್ಷಣದ ಹಕ್ಕು ಎಂಬ ಈ ಎರಡು ವಿಚಾರಗಳು ಭಾರತ ಸಂವಿಧಾನ ಪರಿಚ್ಛೇಧ 21 ರ ಅಡಿಯಲ್ಲಿ ಪ್ರದತ್ತವಾದ ಮೂಲಭೂತ ಹಕ್ಕುಗಳಲ್ಲಿ ಅಡಕಗೊಂಡಿದೆ ಎಂದು ಬಣ್ಣಿಸಿ ಇಂಟರ್‌ನೆಟ್‌ನ ಸೌಲಭ್ಯ ಪಡೆಯುವುದು ಮಾನವ ಹಕ್ಕುಗಳ ಮೂಲ ಭಾಗವಾಗಿದೆ ಎಂದು ತೀರ್ಪು ನೀಡಿದೆ.

ಭದ್ರತಾ ಕಾರಣಗಳ ಹಿನ್ನೆಲೆಯಲ್ಲಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಇಂಟರ್‌ನೆಟ್ ಸೌಲಭ್ಯ ಕಡಿತಗೊಳಿಸಿದ್ದನ್ನು ಒಪ್ಪದ ಭಾರತ ಸರ್ವೋಚ್ಛ ನ್ಯಾಯಾಲಯವೂ ಇಂಟರ್‌ನೆಟ್‌ನ ಸೌಲಭ್ಯ ಪಡೆಯುವುದು ಮೂಲಭೂತ ಹಕ್ಕುಗಳಲ್ಲೊಂದು ಎಂದು ಹೇಳಿದೆ.

### ಆತಂಕ ಏಕೆ ?

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ವಿಷಯಗಳು, ಜನಸಾಮಾನ್ಯರ ಮನಸ್ಸುಗಳ ಮೇಲೆ ಅತೀ ಹೆಚ್ಚು ಪರಿಣಾಮ ಬೀರುತ್ತದೆ. ಈ ವಿಷಯಗಳಲ್ಲಿ, ವಿಶೇಷವಾಗಿ ಪಠ್ಯಕ್ಕಿಂತಲೂ, ಕೆಲವೊಮ್ಮೆ ಶ್ರವಣ ಮತ್ತು ದೃಶ್ಯಗಳು, ಪ್ರಚೋದನಾಕಾರಿಯಾಗಿದ್ದಲ್ಲಿ, ಕೋಮು-ಗಲಭೆಗಳು ಸಂಭವಿಸಬಹುದು. ಸಮಾಜದಲ್ಲಿ ಅಶಾಂತಿ ಉಂಟಾಗಬಹುದು. ಏಕೆಂದರೆ, ಒಮ್ಮೆ ಪ್ರವೇಶಿಸಿದರೆ ಸಾಮಾಜಿಕ ಮಾಧ್ಯಮದ ವಿವಿಧ ಜಾಲಗಳಲ್ಲಿ ಅತ್ಯಂತ ಕ್ಷಿಪ್ರವಾಗಿ ಹರಿದಾಡಬಲ್ಲ ಈ ವಿಷಯಗಳ ಕತ್ತರಿ ಪ್ರಯೋಗ (ಸೆನ್ಸಾರ್‌ಷಿಪ್) ಕ್ಕೆ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುವ ಈ ವಿಷಯಗಳ ಮೇಲೆ ಕಣ್ಗಾವಲು (ಸರ್ವೆಲೆನ್ಸ್) ಇರಿಸಲು ಸರ್ಕಾರಕ್ಕೆ ಅವಕಾಶವಿಲ್ಲ. ಅಲ್‌ಖೈದಾ, ಐಸೀಸ್, ತಾಲಿಬಾನ್ ನಂತಹ ಉಗ್ರ ಸಂಘಟನೆಗಳು ತಮ್ಮ ಮೂಲಭೂತ ವಾದವನ್ನು ಹೇರಲು ಯುವಕರೇ ಹೆಚ್ಚಾಗಿ ಬಳಸುತ್ತಿರುವ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡಿವೆ ಎಂಬ ಅಂಶಗಳು ವಿಶ್ವಾದ್ಯಂತ ಭದ್ರತಾ ಕ್ಷೇತ್ರಕ್ಕೆ ಸವಾಲಾಗಿ ಪರಿಣಮಿಸಿದೆ.

ಭಾರತದಲ್ಲಿ ಸಾಕ್ಷರತಾ ಪ್ರಮಾಣ ಶೇಕಡಾ 74 ರಷ್ಟಿದೆ. ಆದರೆ, 2018 ರ ಸರ್ವೇಕ್ಷಣಾ ವರದಿಯಂತೆ, ದೇಶದ ಶೇಕಡಾ 90 ರಷ್ಟು ಜನಸಂಖ್ಯೆ ಅಂಕಿತವಾಗಿ ಅನಕ್ಷರಸ್ಥರು (ಡಿಜಿಟಲೀ ಇಲ್ಲಿಟರೇಟ್ಸ್). ನಮ್ಮಲ್ಲಿ ಅಂಕಿತ ಸಾಕ್ಷರರು (ಡಿಜಿಟಲ್ ಲಿಟರೇಟ್ಸ್) ಕೇವಲ ಶೇಕಡಾ 10 ರಷ್ಟು ಮಾತ್ರ. ಆದರೆ, ವಿಷಯಜನಕರಾಗಲು (ಕಂಟೆಂಟ್ ಜನರೇಟರ್ಸ್) ಸಾಮರ್ಥ್ಯವಿಲ್ಲದಿದ್ದರೂ, ರಾಷ್ಟ್ರದಲ್ಲಿ ಶೇಕಡಾ 45 ರಷ್ಟು ಅಂಕಿತ ಬಳಕೆದಾರರಿದ್ದಾರೆ. (ಡಿಜಿಟಲ್ ಯೂಸರ್ಸ್). ಇವರು ತಪ್ಪು ಹಾದಿ ತುಳಿದರೆ ಹೇಗೆ ? ಈ ಹಂತದಲ್ಲಿ ಅಂಕಿತ ಮಾಧ್ಯಮಕ್ಕೆ ಅಂಕೆ ಇದೆಯೇ ? ಎಂಬ ಪ್ರಶ್ನೆ ಮೂಡುತ್ತದೆ.

### ಸಾಫ್ಟ್ ಟಚ್ ಓವರ್‌ಸೈಟ್ ರೂಲ್ಸ್ ಮೆಕಾನಿಸಂ !

ಸಾಫ್ಟ್ ಟಚ್ ಓವರ್‌ಸೈಟ್ ರೂಲ್ಸ್ ಮೆಕಾನಿಸಂ ಎಂದೇ ಬಣ್ಣಿಸಲಾಗುವ ಇನ್‌ಫಾರ್ಮೇಷನ್ ಟೆಕ್ನಾಲಜಿ (ಇಂಟರ್ ಮೀಡಿಯರಿ ಗೈಡ್‌ಲೈನ್ಸ್ ಅಂಡ್ ಡಿಜಿಟಲ್ ಮೀಡಿಯಾ ಎಥಿಕ್ಸ್ ಕೋಡ್) ರೂಲ್ಸ್-2021 ಸಾಮಾಜಿಕ ಮಾಧ್ಯಮಗಳಲ್ಲಿನ ಸಂದೇಶಗಳಲ್ಲಿ ನಿಂದನೆ ಮತ್ತು ದುರುಪಯೋಗ ಕಂಡು ಬಂದಲ್ಲಿ, 24 ಗಂಟೆಯೊಳಗೆ ದೂರುಗಳನ್ನು ನೋಂದಾಯಿಸಿಕೊಳ್ಳಲು ಹಾಗೂ ನೋಂದಾಸಿಕೊಂಡ 15 ದಿನಗಳಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಕುಂದು-ಕೊರತೆ ಅಧಿಕಾರಿ ನೇಮಕಗೊಂಡು ಕಾನೂನು ಜಾರಿ ಪ್ರಾಧಿಕಾರದೊಂದಿಗೆ ಸಮನ್ವಯಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

ಯು, ಯು/ಎ-7+, ಯು/ಎ-13+, ಯು/ಎ-16+ ಹಾಗೂ ಎ ಎಂಬ ಐದು ವಿಷಯಗಳ ಸ್ವಯಂ ವರ್ಗೀಕರಣ, ವಯಸ್ಕರ ಚಿತ್ರಗಳನ್ನು ಮಕ್ಕಳು ನೋಡದಿರಲು ಪೇರೆಂಟಲ್ ಲಾಕ್ಸ್ ಹಾಗೂ ವಯಸ್ಕರ ಚಿತ್ರ (ನೀಲಿ ಚಿತ್ರ ಅಲ್ಲ) ವೀಕ್ಷಿಸಲು ವಯೋಮಾನ ಪರಿಶೀಲನೆಗೆ ಕಾರ್ಯ ವಿಧಾನ ರೂಪಿಸುವಂತೆ ಭಾರತ ಸರ್ಕಾರ ಓಟಿಟಿ ಪ್ಲಾಟ್‌ಫಾರ್ಮ್‌ಗಳಿಗೆ ಸೂಚಿಸಿದೆ.

ಭಾರತ ಪತ್ರಿಕಾ ಮಂಡಳಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ) ಯ ಹಾಗೂ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ಸ್ (ರೆಗ್ಯುಲೇಷನ್) ಆಕ್ಟ್‌ನ ಎಲ್ಲಾ ನಿಯಮಾವಳಿಗಳೂ ಮತ್ತು ಮಾರ್ಗಸೂಚಿಗಳೂ ಅಂಕಿತ ಮಾಧ್ಯಮದ ಡಿಜಿಟಲ್ ನ್ಯೂಸ್ ಪೋರ್ಟಲ್‌ಗಳಿಗೂ ಅನ್ವಯಿಸುತ್ತದೆ.

ಗಣಕ ಭಾಷೆಯಲ್ಲಿ ಶೂನ್ಯ ಮತ್ತು ಒಂದು ಎಂಬ ದ್ವಿ-ಸಂಕೇತ (ಬೈನರಿ ಕೋಡ್) ದಿಂದ ಕೂಡಿದ ಅಂಕಿತ ಮಾಧ್ಯಮಕ್ಕೆ ಸ್ವಯಂ ನಿಯಂತ್ರಣವೇ ಅಂಕೆಯಾದರೆ ಮತ್ತಷ್ಟು ವಿಸ್ತಾರಗೊಳ್ಳಲು ಅವಕಾಶವಿದೆ. ■

## ಮಾಹಿತಿ ತಂತ್ರಜ್ಞಾನ ಕಾಯಿದೆ-2000

ಸಾಮಾಜಿಕ ಮಾಧ್ಯಮವನ್ನು ಒಳಗೊಂಡ ಅಂಕಿತ ಮಾಧ್ಯಮದ ದುರುಪಯೋಗ ತಡೆಯಲು ಕೇಂದ್ರ ಸರ್ಕಾರ ಮಾಹಿತಿ ತಂತ್ರಜ್ಞಾನ ಕಾಯಿದೆ-2000 ಜಾರಿಗೆ ತಂದಿತು. ಈ ಕಾಯಿದೆಯ ಪರಿಚ್ಛೇಧ 66 (ಎ) ಅಡಿಯಲ್ಲಿ ಆಕ್ಷೇಪಣಾ ಸಂದೇಶಗಳನ್ನು ಕಳುಹಿಸುವುದು ಹಾಗೂ ಆಕ್ರಮಣಕಾರಿ ಸಂದೇಶಗಳನ್ನು ರವಾನಿಸುವುದು ಅಪರಾಧ ಎಂದು ಪರಿಗಣಿಸಿ, ಶಿಕ್ಷೆ ವಿಧಿಸಬಹುದಾಗಿತ್ತು. ಆದರೆ, ಶ್ರೇಯಾ ಸಿಂಘಲ್ ಹಾಗೂ ಭಾರತ ಸರ್ಕಾರದ ಪ್ರಕರಣದಲ್ಲಿ, ಭಾರತ ಸರ್ವೋಚ್ಛ ನ್ಯಾಯಾಲಯವು ಈ ಪರಿಚ್ಛೇಧವನ್ನು ಅನೂರ್ಜಿತಗೊಳಿಸಿತು.

ಆದರೆ, ಆಕ್ಷೇಪಣಾ, ಆಕ್ರಮಣಕಾರಿ ಹಾಗೂ ಪ್ರಚೋದನಾಕಾರಿ ಬರವಣಿಗೆಗೆ ಸಂಬಂಧಿಸಿದಂತೆ ಇತರೆ ಮಾಧ್ಯಮಗಳಲ್ಲಿ ಅನ್ವಯಿಸುವಂತೆಯೇ, ಇಂಡಿಯನ್ ಪೀನಲ್ ಕೋಡ್‌ನ ಪರಿಚ್ಛೇಧಗಳು ಅಂಕಿತ ಮಾಧ್ಯಮಕ್ಕೂ ಅನ್ವಯವಾಗುತ್ತದೆ.

ಸಾಮಾಜಿಕ ಜಾಲತಾಣಗಳಲ್ಲಿನ ಆಕ್ಷೇಪಾರ್ಹ ವಿಷಯವನ್ನು ತಡೆಯಲು ಸರ್ಕಾರಕ್ಕೆ ಅಧಿಕಾರ ಕೊಡಮಾಡುವ ಮಾಹಿತಿ ತಂತ್ರಜ್ಞಾನ ಕಾಯಿದೆ-2000 ರ ಪರಿಚ್ಛೇಧ 69 (ಎ) ಅಡಿಯಲ್ಲಿ ಏಳು ವರ್ಷ ಕಾರಾಗೃಹವಾಸಕ್ಕೂ ಅವಕಾಶವಿದೆ. ಶಿಶು ಕಾಮುಖರ ಕೃತ್ಯ ಮತ್ತು ವಯಸ್ಕರ ಅಶ್ಲೀಲ ಕಾಮಕೇಳಿಗಳ ದೃಶ್ಯಗಳ ಪ್ರಸಾರಕ್ಕೆ ಹಾಗೂ ಧರ್ಮ ನಿಂದನೆ ಮತ್ತು ಧರ್ಮ ಧೂಷಣೆಯ ಪ್ರಚಾರಕ್ಕೆ ತಡೆಯೊಡ್ಡಲು ಪೂರಕವಾಗುವ ಮಾಹಿತಿ ತಂತ್ರಜ್ಞಾನ ಕಾಯಿದೆ-2000 ರ ಪರಿಚ್ಛೇಧ 79 ಅಡಿಯಲ್ಲಿ ಸ್ವಯಂ ನಿಯಂತ್ರಣ ಪ್ರೋತ್ಸಾಹಿಸುವ ಮಾರ್ಗಸೂಚಿಯಾಗಿದೆ.



Download From : www.kpscvaani.com

## ಪ್ರಕಾಶಕರ ಪಾಲಿನ ಮುಕ್ತ ತಾಣ

# ಪುಸ್ತಕ ಪ್ರಾಧಿಕಾರ

### ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೊಂದಿಗೆ ಮಾತುಮಂಥನ

ಚಂದ್ರಮುಖಿ



ಡಾ. ನಂದೀಶ್ ಹಂಚೆ
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಪುಸ್ತಕ ಪ್ರಾಧಿಕಾರ ರಚನೆಯಾಗಿದ್ದು 1993 ರಲ್ಲಿ. ಅದಕ್ಕೂ ಮೊದಲು ಅಸ್ತಿತ್ವಕ್ಕೆ ಬಂದಿದ್ದು ಕನ್ನಡ ಸಂಸ್ಕೃತಿ ಇಲಾಖೆ. ಆಗ ಕೇಂದ್ರ ನಿರ್ದೇಶನಾಲಯದ ಮೂಲಕ ಕನ್ನಡದ ಪ್ರಕಟಣಾ ಯೋಜನೆಗಳು ಬರುತ್ತಿದ್ದವು. ಪುಸ್ತಕ ಪ್ರಕಟಣೆಯೂ ಒಂದು ಬಹುಮುಖ್ಯ ಅಂಗರಚನೆಯಾಗಿ ಹೊಂದಿರುವ ಪುಸ್ತಕ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ಬಳಿಕ ಕೇಂದ್ರ ನಿರ್ದೇಶನಾಲಯವೂ ಅದನ್ನು ಪ್ರಕಟಿಸುವುದರಲ್ಲಿ ಯಾವುದೇ ಅರ್ಥವಿಲ್ಲ ಎಂಬ ಬಹುಮುಖ್ಯ ಕ್ರಿಯಾಲೋಪವನ್ನು ಎತ್ತಿದವರು ಕನ್ನಡ ಪುಸ್ತಕ ಪ್ರಾಧಿಕಾರದ ಈಗಿನ ಅಧ್ಯಕ್ಷರಾದ ಡಾ. ಎಂ.ಎನ್. ನಂದೀಶ್ ಹಂಚೆ ಅವರು. ಆ ಬಗ್ಗೆ ಸಾಕಷ್ಟು ಚರ್ಚೆಯೂ ನಡೆದಿತ್ತು. ಪುಸ್ತಕ ಪ್ರಕಟಣೆಯ ಕೆಲಸವನ್ನು ಒಂದು ಸಂಸ್ಥೆ ಮಾತ್ರ ಕೈಗೆತ್ತಿಕೊಳ್ಳಬೇಕು ಎನ್ನುವುದು ಅವರ ವಾದವಾಗಿದೆ. ತೀರಾ ಅಗತ್ಯವಿರುವ ಸಂದರ್ಭದಲ್ಲಿ ಪ್ರಾಧಿಕಾರದ ಪ್ರಕಟಣಾ ಯೋಜನೆಯಲ್ಲಿ ಅಧ್ಯಕ್ಷರ ಜೊತೆ ಇಲಾಖಾ ನಿರ್ದೇಶಕರನ್ನೂ ಸೇರಿಸಿ ಅವರಿಂದಲೇ ಹೇಳಿಸಿ ಅದನ್ನು ಜಾರಿಗೆ ತರುವ ಕೆಲಸ ಮಾಡಬಹುದು ಎಂಬ ವಾದವನ್ನು ಮುಂದಿಟ್ಟಿರುವ ಹಂಚೆಯವರೊಂದಿಗೆ ನಡೆಸಿದ ಈ ತಿಂಗಳ ಮಾತುಮಂಥನ ಇಲ್ಲಿದೆ:

- **ಈ ಪುಸ್ತಕ ಪ್ರಾಧಿಕಾರಕ್ಕೆ ನಿಮ್ಮ ಪ್ರವೇಶಿಕೆ ಹೇಗಾಯಿತು. ಅದರ ಹಿನ್ನೆಲೆಯನ್ನು ವಿವರಿಸಿ.**

ಪುಸ್ತಕ ಪ್ರಾಧಿಕಾರಕ್ಕೂ ನನಗೂ ಮೊದಲಿನಿಂದಲೂ ನಂಟು ಇತ್ತು. ನನ್ನ ಮೊಟ್ಟ ಮೊದಲ ಕೃತಿ ಪ್ರಕಟವಾಗಿದ್ದು ಈ ಪ್ರಾಧಿಕಾರದ ಮೂಲಕ. ಕೆಲವು ಉದಯೋನ್ಮುಖ ಲೇಖಕರು ಕೃತಿಗಳನ್ನು ಹೇಗೆ ಪ್ರಕಟ ಮಾಡುವುದು ಎಂಬ ಜಿಜ್ಞಾಸೆ ಅಥವಾ ದಾರಿ ಕಾಣದೇ ಇರುವಂತಹ ಸ್ಥಿತಿಯಲ್ಲಿ ಇರುತ್ತೇವೆ. 'ನೀನು ಬರೆದಿರುವ ಲೇಖನವನ್ನೆಲ್ಲ ಪುಸ್ತಕ ಪ್ರಾಧಿಕಾರಕ್ಕೆ ಕಳಿಸಿದರೆ ಅವು ಆಯ್ಕೆಯಾದರೆ ಪುಸ್ತಕವಾಗಿ ಪ್ರಕಟ ಮಾಡಲಿಕ್ಕೆ ಅನುಕೂಲವಾಗುತ್ತದೆ' ಎಂದು ನನ್ನ ಗೆಳೆಯರೊಬ್ಬರು ಸಲಹೆ ಮಾಡಿದರು. ಆಗ ಸಿದ್ದಲಿಂಗಯ್ಯ ಅವರು ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. ನಾನು ಕಳಿಸಿದ ಲೇಖನಗಳು ಆಯ್ಕೆಯಾಗಿ ಪುಸ್ತಕ ರೂಪದಲ್ಲಿ ಪ್ರಕಟವಾಗಿತ್ತು. ಅದು ವಿಮರ್ಶಾ ಕೃತಿ. 'ಕೆಂಡದೊಳಗಣ ಬೇರು' ಎಂಬುದು ಅದರ ಶೀರ್ಷಿಕೆಯಾಗಿತ್ತು. ಆಗಿನಿಂದಲೂ ನನಗೆ ಪ್ರಾಧಿಕಾರದ ಬಗ್ಗೆ ದೂರದೃಷ್ಟಿಯಿತ್ತು.

- **ಪ್ರಾಧಿಕಾರದಿಂದಲೇ ತಮ್ಮ ಮೊದಲ ಕೃತಿಯನ್ನು ಪ್ರಕಟಿಸಿದ ನೀವು ಈಗ ಪ್ರಾಧಿಕಾರದ ಅಧ್ಯಕ್ಷರು. ಇಂತಹ ಹಿನ್ನೆಲೆಯಿಂದ ಪ್ರಾಧಿಕಾರಕ್ಕೆ ಬಂದಾಗ ಎಂತಹ ಯೋಚನೆಗಳಿದ್ದವು?**

ಪ್ರಾಧಿಕಾರಕ್ಕೆ ಬಂದ ತಕ್ಷಣ ಮಾಡಿದ ಕೆಲಸ ಏನೆಂದರೆ ಹಿರಿಯರನ್ನು ಸಂಪರ್ಕಿಸಿದ್ದು, ಅವರ ಜೊತೆ ಸಭೆ ನಡೆಸಿದೆ. ಹೇಗೆ ಈ ಪ್ರಾಧಿಕಾರವನ್ನು ಮುನ್ನಡೆಸಬಹುದು ಎನ್ನುವ ಬಗ್ಗೆ ಚಿಂತನೆ ನಡೆಸಿದೆ. ಪ್ರಾಧಿಕಾರದ ಬೈಲಾನಲ್ಲಿರುವ ಮೂಲ ನಿಯಮದಲ್ಲಿ ಏನಿದೆ ಎಂದರೆ, ಪ್ರಕಾಶಕರು ಪ್ರಕಟಿಸಲು ಸಾಧ್ಯವಾಗದೇ ಇರುವ, ಕನ್ನಡ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಬಹಳ ಮಹತ್ವದ ಕೃತಿಗಳನ್ನು ಪ್ರಕಟಿಸುವ ಹೊಣೆಗಾರಿಕೆಯನ್ನು ಪ್ರಾಧಿಕಾರ ನಿರ್ವಹಿಸಬೇಕು ಎನ್ನುವುದು. ಆಗ ಕನ್ನಡದ ಮಟ್ಟಿಗೆ ನಿಜಕ್ಕೂ ಮಹತ್ವದ ಕೆಲಸ ಯಾವುದು ಎನ್ನುವುದನ್ನು ಯೋಚನೆ ಮಾಡಿದೆ. ಆಗ ನನಗೆ ಹೊಳೆದದ್ದು 'ಅಭಿಜಾತ ಕನ್ನಡ ಕಲ್ಯಾಣ ಯೋಜನೆ'. ಕನ್ನಡದ ಕವಿರಾಜ ಮಾರ್ಗದಿಂದ ಮೊದಲ್ಗೊಂಡು ಮುದ್ದಣ್ಣನ ವರೆಗಿನ ಎಲ್ಲ ಕೃತಿಗಳನ್ನು ಲಭ್ಯವಾಗುವಂತೆ ಮಾಡಬೇಕು. ಮುದ್ರಣ ರೂಪದಲ್ಲಿ ಮಾತ್ರವಲ್ಲದೆ ಅದನ್ನು ಡಿಜಿಟಲೀಕರಣ ಮಾಡಬೇಕು. ಅಂದರೆ ವಿಕಿಸೋರ್ಸ್, ಕನ್ನಡ ಕಣಜದಲ್ಲಿ ಅದು ಲಭ್ಯವಾಗಬೇಕು. ಅದರ ಜೊತೆ ಜೊತೆಯಲ್ಲಿಯೇ ಹಳಗನ್ನಡ ಮತ್ತು ನಡುಗನ್ನಡದ ಎಲ್ಲ ಕೃತಿಗಳನ್ನು ಸಂರಕ್ಷಿಸುವ ಕೆಲಸ ಮಾಡಬೇಕು ಎನ್ನುವುದು ನನ್ನ ಬಹಳ ದೊಡ್ಡ ಯೋಜನೆ. ಈಗ ಎಲ್ಲ ಪೂರ್ವ ತಯಾರಿಗಳೂ ಮುಗಿದಿವೆ. ಸರ್ಕಾರ ಈಗ ಈ ಯೋಜನೆಯನ್ನು ಬಜೆಟ್‌ನಲ್ಲಿಯೂ ಘೋಷಣೆಯನ್ನು ಮಾಡಿದೆ.

ಹಿಂದೆ ಅನೇಕ ವಿಶ್ವವಿದ್ಯಾಲಯಗಳಲ್ಲಿ ಗ್ರಂಥ ಸಂಪಾದನೆಗೆ ಒಂದು ವಿಭಾಗ ಅಂತ ಇತ್ತು. ಎಲ್.ಬಿ. ಬಸವರಾಧ್ಯರು ಮೈಸೂರು ವಿಶ್ವವಿದ್ಯಾಲಯದಲ್ಲಿ ಬಹಳ ದೊಡ್ಡ ಕೆಲಸಗಳನ್ನು ಮಾಡಿದ್ದರು. ಆಗ ಹಸ್ತಪ್ರತಿಯಲ್ಲಿದ್ದ ಒಂದು ಗ್ರಂಥವನ್ನು ಸಂಪಾದನೆ



Download From : www.kpscvaani.com

ಮಾಡಿ ಅದನ್ನು ಪ್ರಸಾರಾಂಗದಿಂದ ಪ್ರಕಟ ಮಾಡುತ್ತಿದ್ದರು. ಈಗ ವಿಶ್ವವಿದ್ಯಾಲಯಗಳ ಆದ್ಯತೆಗಳೇ ಬದಲಾಗಿವೆ. ಕನ್ನಡ ಸಂಸ್ಕೃತಿ ಮಾತ್ರವಲ್ಲ, ಮಾನವಿಕಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳೂ ನಿರುಪಯುಕ್ತ ಎನಿಸಿಬಿಟ್ಟಿರುವುದು ವಿಷಾದನೀಯ. ಇದರ ಪರಿಣಾಮದಿಂದಾಗಿ ಪ್ರಸಾರಾಂಗಗಳೆಲ್ಲ ದುರ್ಬಲವಾಗಿ ಹೋದವು. ಸಂಪಾದನ ವಿಭಾಗಗಳೆಲ್ಲ ಮುಚ್ಚಿ ಹೋದವು. ನಾನು ಇವತ್ತಿಗೂ ಕಾಲೇಜಿನ ಮೇಷ್ಟ್ರಾಗಿರುವುದರಿಂದ ಇವೆಲ್ಲವೂ ಕಣ್ಣಿಗೆ ಕಾಣುತ್ತಿದೆ. ಭಾರತೀಯ ಸಂಸ್ಕೃತಿ ಗ್ರಂಥ, ಧರ್ಮಶಾಸ್ತ್ರ ಗ್ರಂಥವನ್ನೋ ಕನ್ನಡದಲ್ಲಿ ತಂದಿದ್ದಾರೆ ಎನ್ನುವುದೇ ಹೆಮ್ಮೆ. ಅವುಗಳನ್ನು ಮರುಮುದ್ರಣ ಮಾಡಲು ಸಾಧ್ಯವಾಗುತ್ತಿಲ್ಲ. ಇವನ್ನೆಲ್ಲ ಯಾರು ಓದುತ್ತಾರೆ ಎಂಬ ಅಸಡ್ಡೆ ಬೇರೆ.

- **ಪರಿಸ್ಥಿತಿ ಹೀಗಿರುವಾಗ ಕನ್ನಡ ಪುಸ್ತಕ ಪ್ರಾಧಿಕಾರವು ಯಾವ ಒಂದು ಸಿದ್ಧಾಂತಕ್ಕೆ ಕಟ್ಟುಬೀಳದೆ ಎಲ್ಲರನ್ನೂ ಒಳಗೊಳ್ಳುವ ಮತ್ತು ಕನ್ನಡ ಮನಸ್ಸುಗಳನ್ನು ತಲುಪುವ ಕೆಲಸ ಮಾಡಬೇಕಾಗಿದೆ.**

ಪ್ರತಿಯೊಬ್ಬನಿಗೂ ಒಂದು ವೈಯಕ್ತಿಕವಾದ ಅನಿಸಿಕೆ, ಆಸೆ, ಆದ್ಯತೆ ಇರುತ್ತದೆ. ನನಗೆ ಯಾವುದೋ ಒಬ್ಬ ಇಷ್ಟವಾದ ಲೇಖಕ, ಯಾವುದೋ ಒಂದು ಇಷ್ಟವಾದ ಪ್ರಕಾರ ಎಲ್ಲವೂ ಇರುತ್ತದೆ. ಆದರೆ ಕನ್ನಡಕ್ಕೆ ಇಂತಹುದೇ ಒಂದು ಮನಸ್ಥಿತಿ ಇದೆ ಎಂದು ನನಗೆ ಅನಿಸುತ್ತಿಲ್ಲ. ಒಂದು ವಿಶ್ವವಿದ್ಯಾಲಯದ ಕುಲಪತಿಯಾದವನು, ಪ್ರಾಧಿಕಾರದ ಅಧ್ಯಕ್ಷನಾದವನು ಕನ್ನಡದ ಆಶಯವನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು. ಬದಲಾಗಿ ವೈಯಕ್ತಿಕ ನಿಲುವುಗಳು ಅಲ್ಲಿ ಮೇಲುಗೈ ಪಡೆಯಬಾರದು. ಅದು ನನ್ನ ಬಹಳ ದೊಡ್ಡ ಕನಸು. ಸಂಪಾದನ ವಿಭಾಗಗಳು ಮುಚ್ಚಿ ಹೋಗಿದ್ದರಿಂದ ಅನೇಕ ಗ್ರಂಥಗಳು ಮರುಮುದ್ರಣವೇ ಆಗಿರಲಿಲ್ಲ. ಒಮ್ಮೆ ಅವು ನಶಿಸಿ ಹೋದರೆ ಮೂಲ ಹಸ್ತಪ್ರತಿಗಳನ್ನು ಓದಿ ಮತ್ತೆ ಗ್ರಂಥ ಸಂಪಾದನೆ ಮಾಡುವುದು ದುಸ್ತರವಾದ ಕೆಲಸ.

ಹಳಗನ್ನಡ, ನಡುಗನ್ನಡದ ಬಗ್ಗೆ ಇಂದಿನ ಹೊಸ ತಲೆಮಾರಿನ ವಿದ್ಯಾರ್ಥಿಗಳಿಗೆ ಎಂಥ ಅಭಿಪ್ರಾಯಗಳಿವೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರವೇ. ಕನ್ನಡ ಮೇಷ್ಟ್ರುಗಳೇ ಅದನ್ನು ಮಾಡುವುದಿಲ್ಲ. ಈಗಿನ ತಲೆಮಾರಿನ ಮೇಷ್ಟ್ರುಗಳೇ ಕೇಶಿರಾಜನ ಶಬ್ದಮಣಿ ದರ್ಪಣದ ಅಗತ್ಯವಿಲ್ಲ, ಅದನ್ನು ಪಾಠ ಮಾಡಲು ಆಗುತ್ತಿಲ್ಲ, ವಿದ್ಯಾರ್ಥಿಗಳಿಗೆ ಆಸಕ್ತಿ ಇಲ್ಲ ಮತ್ತು ಇಂದಿನ ಕನ್ನಡ ವ್ಯಾಕರಣಕ್ಕೆ ಅದು ಅನ್ವಯವಾಗುವುದಿಲ್ಲ ಎಂಬ ವಾದವನ್ನು ಮುಂದಿಡುತ್ತಾರೆ. ಪಂಪನನ್ನೂ, ಕುಮಾರವ್ಯಾಸನನ್ನೂ ಜ್ಞಾನದ ಶಾಖೆಯಾಗಿ ಓದಿ ಎಂದರೆ ಅದಕ್ಕೆ ಅವರು ಸಿದ್ಧರಿಲ್ಲ.

## 267 ಕವಿಗಳ ಅಭಿಜಾತ ಕನ್ನಡ ಕಲ್ಯಾಣ ಯೋಜನೆ

ಅಭಿಜಾತ ಕನ್ನಡ ಕಲ್ಯಾಣ ಯೋಜನೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರ ನೇತೃತ್ವದಲ್ಲಿ ಒಂದು ಸಾಹಿತ್ಯಕ ಸಮಿತಿಯನ್ನು ಮಾಡಲಾಗಿದೆ. ಈ ಯೋಜನೆಯಲ್ಲಿ ಯಾವ ಯಾವ ಗ್ರಂಥಗಳನ್ನು ಡಿಜಿಟಲೀಕರಣಕ್ಕೆ ಸೇರಿಸಬೇಕು ಎಂಬ ಬಗ್ಗೆ ಚರ್ಚೆ ಮಾಡಲಾಗಿದೆ. ಒಂದು ಮುಖ್ಯ ಸಂಪುಟವನ್ನು ಮಾಡಿ ಉಳಿದವನ್ನು ಅನುಬಂಧದಲ್ಲಿ ಸೇರಿಸಿ ಬಳಿಕ ಉಪ-ಸಂಪುಟಗಳನ್ನು ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ಮಾಜಿ ಕುಲಪತಿ ಚಿದಾನಂದ ಗೌಡರ ನೇತೃತ್ವದಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ. ಸಮಿತಿ ಕೊಟ್ಟ ವರದಿಯ ಪ್ರಕಾರವೇ ಅದನ್ನು ಅನುಷ್ಠಾನಕ್ಕೆ ತರುವ ಕೆಲಸ ನಡೆಯುತ್ತಿದೆ.

ಸರ್ಕಾರ ಈಗ ಬಜೆಟ್‌ನಲ್ಲಿಯೇ 'ಅಭಿಜಾತ ಕನ್ನಡ ಕಲ್ಯಾಣ ಯೋಜನೆ'ಯನ್ನು ಪ್ರಕಟಿಸಿದೆ. ಅದನ್ನು ಕಾರ್ಯರೂಪಕ್ಕೆ ತರುವ ಕೆಲಸಕ್ಕೆ ಇನ್ನು ವೇಗ ಬರಲಿದೆ. ಸುಮಾರು 267 ಶಾಸ್ತ್ರ ಮತ್ತು ಕಾವ್ಯ ಕವಿಗಳನ್ನು ಗುರುತಿಸಲಾಗಿದೆ. ಹಿಂದೆ ಸಾಹಿತ್ಯ ಚರಿತ್ರೆಯ ವಿಭಾಗಗಳಲ್ಲಿ ಜೈನ ಯುಗ, ವೈದಿಕ ಯುಗ, ವೀರಶೈವ ಯುಗ ಅಂತೆಲ್ಲ ವಿಭಾಗಗಳನ್ನು ಮಾಡುತ್ತಿದ್ದರು. ಆ ಬಳಿಕ ಭಾಷಾ ದೃಷ್ಟಿಯಿಂದ ಹಳಗನ್ನಡ, ನಡುಗನ್ನಡ ಬಂದವು. ಈ ಯೋಜನೆಯಲ್ಲಿ ಪ್ರಕಾರಗಳ ರೀತಿಯಲ್ಲಿ ವಿಭಾಗಗಳನ್ನು ಮಾಡಲಾಗಿದೆ. ಛಂಪೂ ಸಮಗ್ರ, ಷಟ್ಪದಿ ಸಮಗ್ರ, ಸಾಂಗತ್ಯ ಸಮಗ್ರ, ರಗಳೆ ಸಮಗ್ರ ಹೀಗೆ ಪ್ರಕಾರಗಳನ್ನು ಮಾಡಲಾಗಿದೆ. ಡಿಜಿಟಲೀಕರಣ ಮಾಡಿದಾಗ ಛಂಪೂ ಎಂಬುದನ್ನು ಕ್ಲಿಕ್ ಮಾಡಿದರೆ ಆ ಪ್ರಕಾರದಲ್ಲಿ ಬರುವ ಕವಿಗಳೆಲ್ಲ ಪರದೆ ಮೇಲೆ ಕಾಣಿಸಿಕೊಳ್ಳುತ್ತಾರೆ. ಪಂಪಭಾರತವನ್ನು ಕ್ಲಿಕ್ ಮಾಡಿದರೆ ಅದರ ಅಷ್ಟೂ ಅಧ್ಯಾಯಗಳು ತೆರೆದುಕೊಳ್ಳುತ್ತವೆ.

ಹಂಪಿ ವಿಶ್ವವಿದ್ಯಾಲಯದವರು ಜೈನ ಸಾಹಿತ್ಯ ಸಮಗ್ರವನ್ನು ತಂದಿದ್ದಾರೆ. ಅದನ್ನು ಸಂಪೂರ್ಣವಾಗಿ ಪಡೆದುಕೊಂಡು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಆ ಸೋರ್ಸ್‌ಗೆ ಹಂಪಿ ವಿವಿಗೆ ಕ್ರೆಡಿಟ್ ಮತ್ತು ಗೌರವ ಸಂಭಾವನೆಯನ್ನು ನೀಡಲಾಗುತ್ತಿದೆ. ಇದೇ ಬೇರೆ ಬೇರೆ ಸಂಸ್ಥೆಗಳು ಮಾಡಿದ ಕೆಲಸಗಳನ್ನು ಇಲ್ಲಿ ಅಳವಡಿಸಿಕೊಂಡು ಮಿತವ್ಯಯವಾಗುವಂತೆ ನೋಡಿಕೊಳ್ಳಲಾಗಿದೆ. ಯಾವ ಕೃತಿಗಳು ಪಿಡಿಎಫ್ ಸ್ವರೂಪದಲ್ಲಿ ಲಭ್ಯವಿಲ್ಲವೋ ಅವುಗಳನ್ನು ಸ್ಕ್ಯಾನ್ ಮಾಡಿ, ಓಸಿಆರ್ ಮಾಡಿ, ಪಿಡಿಎಫ್ ಮಾಡುವ ಕೆಲಸ ಚಾಲ್ತಿಯಲ್ಲಿವೆ.

ಕಣಜ, ವಿಕಿಸೋರ್ಸ್‌ನಲ್ಲಿ ಇದನ್ನು ಅಪ್‌ಲೋಡ್ ಮಾಡಲಾಗುತ್ತದೆ. ಅಲ್ಲಿ ಪುಸ್ತಕ ಪ್ರಾಧಿಕಾರದ ಹೆಸರಿನಲ್ಲೇ ಪ್ರಕಟಿಸಲಾಗುತ್ತದೆ. ಜೊತೆಗೆ ಪ್ರಾಧಿಕಾರದ ವೆಬ್‌ತಾಣದಲ್ಲಿಯೂ ಇದು ಲಭ್ಯವಾಗಲಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಹಂಚೆ ಅವರು ವಿವರಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಇನ್ನೊಂದು ಮಹತ್ವದ ಯೋಜನೆ ಸಮಗ್ರ ವಚನ ಸಾಹಿತ್ಯದ ಮರುಮುದ್ರಣ. ಹದಿನೈದು ಸಂಪುಟಗಳನ್ನು ಒಳಗೊಂಡ ಈ ಪ್ರಕಟಣೆ ಕೆಲವು ತಿಂಗಳಲ್ಲಿ ಮುದ್ರಣಗೊಂಡು ಹೊರಬರಲಿದೆ. 2000 ಪ್ರತಿಗಳನ್ನು ಮುದ್ರಿಸಲಾಗುತ್ತಿದೆ. ಎಲ್ಲ ವಚನಕಾರರ ರಚನೆಗಳು ಈ ಸಂಪುಟಗಳಲ್ಲಿ ಒಳಗೊಂಡಿರುತ್ತವೆ. ಇನ್ನೇನು ಕೆಲವೇ ದಿನಗಳಲ್ಲಿ ಅದರ ಬಿಡುಗಡೆ ನಡೆಯಲಿದೆ ಎಂದು ಅಧ್ಯಕ್ಷರ ಸಂದರ್ಶನದ ವೇಳೆ ಉಪಸ್ಥಿತರಿದ್ದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಕಿರಣ್ ಸಿಂಗ್ ಅವರು ತಿಳಿಸಿದರು.



Download From : www.kpscvaani.com

> ಪುಸ್ತಕ ಪ್ರಾಧಿಕಾರದ ಹಳೆಯ ಯೋಜನೆಗಳೆಲ್ಲಾ ಅಪ್ಪಟ ಚಿನ್ನದಂತಹ ಯೋಜನೆಗಳು, ಹಾಗಾಗಿ ಹಳೆಯ ಯೋಜನೆಗಳನ್ನು ಕೈಬಿಡದೆ ತಮ್ಮ ಐಡಿಯಾಲಜಿಗೆ ತಕ್ಕಂತಹ ಯೋಜನೆಗಳನ್ನು ಹಮ್ಮಿಕೊಳ್ಳುವುದು ಅಧ್ಯಕ್ಷರ ಯೋಜನೆಯಾಗಿದೆ.




ಈ ಎಲ್ಲ ಕಾರಣದಿಂದ ಪ್ರಾಧಿಕಾರಕ್ಕೆ ಬಂದ ಮೇಲೆ ಕೇವಲ ಕಾವ್ಯಗಳನ್ನು ಮಾತ್ರವಲ್ಲ, ಶಾಸ್ತ್ರ ಗ್ರಂಥಗಳನ್ನು ತಿಳಿದುಕೊಳ್ಳುವಂತಾಗಬೇಕು. ಗಜಶಾಸ್ತ್ರ, ಹಯಶಾಸ್ತ್ರವನ್ನೆಲ್ಲ ಓದಿದಾಗ ನಮ್ಮ ಪೂರ್ವಿಕರ ಚಿಂತನೆಗಳು ಏನಿದ್ದವು ಎಂಬುದು ಅರಿವಾಗುತ್ತದೆ. ಅದನ್ನು ಸಂರಕ್ಷಿಸುವ ದೃಷ್ಟಿಯಿಂದ ಪ್ರಾಧಿಕಾರ ಮಹತ್ವದ ಕೆಲಸಗಳನ್ನು ಮಾಡುತ್ತಿದೆ.

ಸಂಸ್ಕೃತಿಯನ್ನು ರೂಪಿಸುವ ಅಧ್ಯಾಪಕರಿಗೆ ಕುಮಾರವ್ಯಾಸ, ಪಂಪ, ರನ್ನನ ಬಗ್ಗೆ ಎಂತಹ ಕಲ್ಪನೆ ಇದೆ ಎಂಬುದು ಎಲ್ಲರಿಗೆ ತಿಳಿದ ವಿಚಾರ. ಹೊಸ ತಲೆಮಾರಿನ ಲೇಖಕರು ನಮ್ಮ ಪೂರ್ವಪರಂಪರೆಯ ಕವಿಗಳನ್ನು ಓದಿ ಜೀರ್ಣಿಸಿಕೊಂಡು ಆ ಬಳಿಕ ಬರೆಯಿರಿ ಎಂಬ ಸಲಹೆ ನೀಡಿದರೆ ಅದರ ಅಗತ್ಯವಿಲ್ಲ ಎಂದೇ ವಾದ ಮಾಡುತ್ತಾರೆ. ನಾನು ಬರೆಯುವುದಕ್ಕೂ, ಕುಮಾರವ್ಯಾಸ, ಪಂಪನ ಓದೂ ಯಾಕೆ ಅಗತ್ಯವಿದೆ ಎಂದು ಕೇಳುತ್ತಾರೆ. ಅವರಿಗೆ ನಮ್ಮ ಸಂಸ್ಕೃತಿಯನ್ನು ಕುರಿತ ಗಂಭೀರವಾದ ಯೋಚನೆಯೇ ಇಲ್ಲ ಎಂದು ಹೇಳಬೇಕು. ನಾವು ಒಪ್ಪುವುದು ಬಿಡುವುದು ಬೇರೆ ವಿಚಾರ. ಆದರೆ ನಮ್ಮ ಬೆನ್ನ ಹಿಂದೆ ಒಂದು ಪರಂಪರೆಯಂತೂ ಕೆಲಸ ಮಾಡುತ್ತಿರಬೇಕು.

- **ನೀವು ಪ್ರಾಧಿಕಾರಕ್ಕೆ ಬರುವಾಗ ಇದ್ದ ಕಲ್ಪನೆಗೂ ಬಂದ ಮೇಲಿನ ವಾಸ್ತವಕ್ಕೂ ಎಷ್ಟು ವ್ಯತ್ಯಾಸಗಳಿವೆ? ನಿಮ್ಮ ಬದಲಾದ ಯೋಚನಾ ಕ್ರಮಗಳು ಏನು?**

ಪ್ರಾಧಿಕಾರಕ್ಕೆ ಬರುವುದಕ್ಕೂ ಮುನ್ನ ನನಗೊಂದಿಷ್ಟು ಕಲ್ಪನೆಗಳಿದ್ದವು. ಬರುತ್ತಲೇ ಎಲ್ಲರ ಸಹಕಾರವನ್ನು ಪಡೆದು ಇವನ್ನೆಲ್ಲ ಜಾರಿಗೆ ತಂದು ಬಿಡಬಹುದು ಎಂದುಕೊಂಡಿದ್ದೆ. ಆದರೆ ಇದೊಂದು ಸಾಂಸ್ಕೃತಿಕ ವಲಯವಾದ ಕಾರಣ ಎಲ್ಲರನ್ನೂ ಒಳಗೊಳ್ಳುವ ಕೆಲಸ ಮಾಡಬೇಕು ಎಂಬ ಯೋಚನೆ ಈ ಸ್ಥಾನದಲ್ಲಿ ಕುಳಿತುಕೊಳ್ಳುತ್ತಲೇ ಗಟ್ಟಿಯಾಯಿತು. ನನ್ನನ್ನು ನೇಮಕ ಮಾಡಿದ ಸರ್ಕಾರಕ್ಕೆ ನಾನು ಮಾಡುವ ಕೆಲಸದ ಬಗ್ಗೆ ಕೇಳುವ ಹಕ್ಕು ಇರುತ್ತದಾದರೂ ಈವರೆಗೆ ಯಾರೊಬ್ಬರೂ ಮಧ್ಯಪ್ರವೇಶ ಮಾಡಿಲ್ಲ. ಹಾಗಾಗಿ ನಾನು ಮಾಡುವ ಕೆಲಸದ ಮೇಲೆ ವಿಶ್ವಾಸವಿಟ್ಟಿರುವುದು ನನ್ನ ಅದೃಷ್ಟ. ಇಲ್ಲಿ ಮುಕ್ತವಾದ ಸ್ವಾತಂತ್ರ್ಯವಿದೆ. ನಾನು ಪ್ರಾಧಿಕಾರಕ್ಕೆ ಬಂದಾಗ ಸುಮಾರು ಎಂಟು ಕೋಟಿ ರೂಪಾಯಿಗಳಷ್ಟು ನಿಧಿ ಉಳಿದುಕೊಂಡಿತ್ತು. ಬೇರೆ ಯಾವ ಪ್ರಾಧಿಕಾರದಲ್ಲಿಯೂ ಇಷ್ಟೊಂದು ದುಡ್ಡು ಇರಲಿಲ್ಲ. ಇದಕ್ಕೆ ಕಾರಣ 2006 ರಿಂದ ಅನೇಕ ಯೋಜನೆಗಳು ಬಾಕಿ ಉಳಿದುಕೊಂಡಿದ್ದವು. ಅವುಗಳು ಜಾರಿಗೇ ಬಂದಿಲ್ಲ. ಹಿಂದಿನ ಅಧ್ಯಕ್ಷರುಗಳು ಅವರವರ ಯೋಜನೆಗಳನ್ನು ಮಾಡಿಕೊಂಡು ಅವನ್ನಷ್ಟೇ ಜಾರಿಗೆ ತರುವುದರ ಬಗ್ಗೆ ಆಸಕ್ತಿ ವಹಿಸಿದರು. ಹಳೆಯದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ.

- **ಹಾಗೆ ಬಾಕಿ ಉಳಿದುಕೊಂಡಿರುವ ಯೋಜನೆಗಳು ಯಾವುವು? ಹಾಗಾದರೆ ನಿಮ್ಮ ಅವಧಿಯಲ್ಲಿ ಅವುಗಳಿಗೆ ಮರು ಜೀವ ದೊರೆಯಲಿದೆ?**

ನಿಶ್ಚಿತವಾಗಿ ಮರುಜೀವ ದೊರೆಯಲಿದೆ. ಹಳೆಯ ಯೋಜನೆಗಳ ಕಡತಗಳನ್ನು ನೋಡಿದಾಗ ನಿಜಕ್ಕೂ ಆಶ್ಚರ್ಯವಾಯಿತು ನನಗೆ. ಅವೆಲ್ಲವೂ ಅಪ್ಪಟ ಚಿನ್ನದಂತಹ

## ಪ್ರಕಟಣೆ ಕಾಣಲಿವೆ ಸತ್ಯಕಾಮ ಸೇರಿದಂತೆ ಹಿರಿಯರ ಸಮಗ್ರಗಳು

ಸತ್ಯಕಾಮರ ಸಮಗ್ರ ಸಾಹಿತ್ಯವನ್ನು ಪ್ರಕಟಿಸಬೇಕು ಎಂದು ಯೋಜನೆ ರೂಪುಗೊಂಡಿದ್ದು ಬಹಳ ಹಿಂದೆಯೇ. ಈ ವಿಚಾರದಲ್ಲಿ ಸತ್ಯಕಾಮರ ಸಾಹಿತ್ಯ ಪ್ರಕಟಣೆಯ ಹಕ್ಕನ್ನು ಪಡೆದಿರುವ ವೀಣಾ ಬನ್ನಂಜೆ ಅವರೊಂದಿಗೆ ಸಾಕಷ್ಟು ಪತ್ರ ವ್ಯವಹಾರಗಳು ನಡೆದಿದ್ದವು. ಕೊನೆಗೆ ಇಂತಹ ಅಪರೂಪದ ಕನ್ನಡದ ಕೆಲಸವನ್ನು ಮಾಡಲು ಸಾಧ್ಯವಾಗದೇ ಇರುವ ಬಗ್ಗೆ ಅಸಮಾಧಾನಗೊಂಡ ಅವರು ಪ್ರಕಟಣೆಯ ಹಕ್ಕನ್ನು ನಮ್ಮಿಂದ ವಾಪಸ್ ಪಡೆದಿದ್ದರು. ಈಗ ಸತ್ಯಕಾಮರ ಸಮಗ್ರವೂ ಸೇರಿದಂತೆ ಅನೇಕ ಹಿರಿಯ ಸಾಹಿತಿಗಳ ಸಮಗ್ರವನ್ನು ಪ್ರಕಟಿಸುವ ಕೆಲಸವನ್ನು ಪ್ರಾಧಿಕಾರ ಕೈಗೆತ್ತಿಕೊಂಡಿದೆ.

ಎ.ಆರ್.ಕೃಷ್ಣಶಾಸ್ತ್ರಿ ಸಮಗ್ರ, ಅನಕೃ ಸಮಗ್ರ, ರಾವ್‌ಬಹದ್ದೂರ್ ಸಮಗ್ರ, ಕೀರ್ತಿನಾಥ ಕುರ್ತಕೋಟಿ ಸಮಗ್ರ, ಎಸ್.ವಿ.ಪರಮೇಶ್ವರ ಭಟ್, ಸಿದ್ದಯ್ಯ ಪುರಾಣಿಕ್, ಯು.ಆರ್.ಅನಂತಮೂರ್ತಿ, ವಿ.ಜಿ.ಭಟ್, ಕಂಬಾರರ ಸಮಗ್ರಗಳನ್ನು ಪ್ರಕಟಿಸುವ ಕೆಲಸವನ್ನು ಒಂದೊಂದಾಗಿ ಜಾರಿಗೆ ತರಲಾಗುತ್ತಿದೆ. ಇವನ್ನೆಲ್ಲ ಪ್ರಕಟಿಸಲು ಪ್ರಾಧಿಕಾರದಲ್ಲಿ ಹಣದ ಕೊರತೆಯಿಲ್ಲ ಎಂದು ನಂದೀಶ್ ಹಂಚೆ ತಿಳಿಸಿದರು.



Download From : www.kpscvaani.com

## ದೇಶದಲ್ಲೇ ಮೊಟ್ಟ ಮೊದಲ ಪುಸ್ತಕೋದ್ಯಾನ

ಕನ್ನಡ ಪುಸ್ತಕ ಪ್ರಾಧಿಕಾರದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆ ಎಂದರೆ ಪುಸ್ತಕೋದ್ಯಾನ. ಇಡೀ ಭಾರತದಲ್ಲಿಯೇ ಅಂತಹುದೊಂದು ಕಲ್ಪನೆ ಇಲ್ಲ. ಸುಮಾರು ಹತ್ತು ಎಕರೆ ಪ್ರದೇಶದಲ್ಲಿ ಪ್ರಪಂಚದ ಎಲ್ಲ ಸಂಶೋಧನಾ ಗ್ರಂಥಗಳು, ಎಲ್ಲ ಕಾದಂಬರಿಗಳು, ಕಥೆಗಳು, ಲಭ್ಯವಾಗುವಂತೆ ಮಾಡಬೇಕು. ಅಲ್ಲೊಂದು ಇ-ಲೈಬ್ರರಿಯನ್ನು ರಚನೆ ಮಾಡಬೇಕು. ಜಗತ್ತಿನ ಯಾವ ಭಾಗದಲ್ಲಿರುವ ಸಾಹಿತ್ಯವನ್ನು ಬೇಕಿದ್ದರೂ ಅಲ್ಲಿ ಪಡೆಯುವ ಅವಕಾಶವಿರಬೇಕು ಎಂಬುದು ಪ್ರಾಧಿಕಾರದ ಉದ್ದೇಶ.

ಇಂತಹುದೊಂದು ಪುಸ್ತಕೋದ್ಯಾನದ ಹೊರಭಾಗದಲ್ಲಿ ಸಣ್ಣ ಸಣ್ಣ ಮಳಿಗೆಗಳನ್ನು ಮಾಡಲಾಗುತ್ತದೆ. ಅಲ್ಲಿ ಎಲ್ಲ ಪ್ರಕಾಶಕರಿಗೆ ರಿಯಾಯ್ತಿ ದರದಲ್ಲಿ ಪುಸ್ತಕಗಳ ಮಾರಾಟಕ್ಕೆ ಅವಕಾಶ ನೀಡಲಾಗುತ್ತದೆ. ಆ ಮಳಿಗೆಯನ್ನು ಕೂಡ ರಿಯಾಯ್ತಿ ದರದಲ್ಲಿ ಪ್ರಕಾಶಕರಿಗೆ ನೀಡುವ ವ್ಯವಸ್ಥೆ ಕಲ್ಪಿಸಬೇಕು ಎನ್ನುವುದು ಯೋಜನೆ.

ಇದರ ಜೊತೆಗೆ ಈ ಉದ್ಯಾನದಲ್ಲಿ ಕೆಲವು ಸ್ಕ್ರೀನ್‌ಗಳ ಸಿನೆಮಾ ಥಿಯೇಟರ್ ಇರುತ್ತದೆ. ಇಲ್ಲಿ ಪ್ರಪಂಚದ ಕ್ಲಾಸಿಕಲ್ ಚಿತ್ರಗಳನ್ನು ಮಾತ್ರ ಪ್ರದರ್ಶಿಸಲಾಗುತ್ತದೆ. ಬಯಲು ರಂಗ ಮಂಟಪಗಳನ್ನು ಮಾಡಿ ಅಲ್ಲಿ ಪ್ರತಿದಿನವೂ ಒಂದಲ್ಲ ಒಂದು ಕಾರ್ಯಕ್ರಮವನ್ನು ಆಯೋಜಿಸಬೇಕು ಎಂಬ ಚಿಂತನೆ ಪ್ರಾಧಿಕಾರದ್ದು. ಉದ್ಯಾನದ ಇನ್ನೊಂದು ಪಾರ್ಶ್ವದಲ್ಲಿ ಫುಡ್ ಕೋರ್ಟ್ ಮಾಡಲಾಗುತ್ತದೆ. ಅದರ ಮಗ್ಗುಲಲ್ಲಿ ಒಂದು ಸಣ್ಣ ಮಕ್ಕಳ ಪಾರ್ಕ್ ಇರುತ್ತದೆ. ದೇಶದ ಮತ್ತು ಪ್ರಪಂಚದ ಅತ್ಯುತ್ತಮ ಕರಕುಶಲ ವಸ್ತುಗಳ ಮಾರಾಟವೂ ಅಲ್ಲಿರುತ್ತದೆ. ಒಟ್ಟಾರೆ ಅಲ್ಲಿ ಸಂಪೂರ್ಣವಾಗಿ ಇಕೋ-ಕಲ್ಚರ್ ಇರುವಂತೆ ನೋಡಿಕೊಳ್ಳಲಾಗುತ್ತದೆ.

ಇಂತಹ ಒಂದು ಪುಸ್ತಕೋದ್ಯಾನದಲ್ಲಿ ಒಂದು ಬೃಹತ್ ಸಮ್ಮೇಳನವನ್ನೂ ಮಾಡಬಹುದು, ಒಂದು ವಿಚಾರಗೋಷ್ಠಿ, ಕಾರ್ಯಾಗಾರ, ಸಂವಾದವನ್ನು ಹಮ್ಮಿಕೊಳ್ಳಬಹುದು. ವಿದೇಶದಿಂದಲೋ, ದೇಶದ ಇನ್ಯಾವುದೋ ಭಾಗದಿಂದ ಬಂದ ಲೇಖಕ/ಕಿ ಜೊತೆ ಮಾತು-ಮಂಥನ ನಡೆಸುವುದು ಈ ಯೋಜನೆಯ ಒಟ್ಟು ಪರಿಕಲ್ಪನೆಯಾಗಿದೆ.

ಸಾಹಿತ್ಯ ಪ್ರೇಮಿಗಳು ಮಾತ್ರವಲ್ಲದೆ ಜನಸಾಮಾನ್ಯರೂ ತಮ್ಮ ವಾರಾಂತ್ಯವನ್ನು ಕಳೆಯುವ ಹಾಗೆ ಇಂತಹ ಪುಸ್ತಕೋದ್ಯಾನವನ್ನು ನಿರ್ಮಿಸಬೇಕು ಎಂಬ ಕನಸು ಪ್ರಾಧಿಕಾರದ್ದು ಎಂದು ಡಾ.ಹಂಚಿ ಅವರು ವಿವರಿಸಿದರು. ಮೈಸೂರಿನ ಚಾಮುಂಡಿ ಬೆಟ್ಟದ ಬಳಿ ಇದನ್ನು ಮಾಡಬೇಕು ಎನ್ನುವ ಯೋಚನೆಯೂ ಇತ್ತು ಎಂದು ಅವರು ಬಹುರಂಗಪಡಿಸಿದರು. ಒಂದು ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ದಿನವಿಡೀ ಪುಸ್ತಕೋದ್ಯಾನದಲ್ಲಿ ಕಳೆದು ಅಧ್ಯಯನ ಮಾಡಿ, ಒಂದು ಮರದ ಕೆಳಗೆ ಕುಂತು ಓದಿ ಮನನ ಮಾಡಿಕೊಂಡು ಹೋಗುವಂತಹ ವಾತಾವರಣವನ್ನು ಕಲ್ಪಿಸಬೇಕು ಎಂಬುದು ಈ ಮಹತ್ವಾಕಾಂಕ್ಷಿ ಯೋಜನೆಯ ಉದ್ದೇಶವಾಗಿದೆ.

ಯೋಜನೆಗಳು. ಅಶ್ವಿನಿ ದೇವತೆಗಳಲ್ಲಿ ಒಬ್ಬರೆಂದೇ ಪರಿಗಣಿತರಾದ ಎ.ಆರ್.ಕೃಷ್ಣಶಾಸ್ತ್ರಿಗಳ ಸಮಗ್ರ ಸಂಪುಟಕ್ಕೆ 2006ರಲ್ಲಿ ಸರ್ಕಾರ 10 ಲಕ್ಷ ರೂ. ಮಂಜೂರು ಮಾಡುತ್ತದೆ. ಆದರೆ ಇವತ್ತಿನ ತನಕ ಅದರ ಓಂಕಾರವೂ ಆಗಿಲ್ಲ. ಅದೇ ರೀತಿ ಗೌರೀಶ್ ಕಾಯ್ಕಿಣಿ ಅವರ ಸಮಗ್ರ ಸಂಪುಟವನ್ನು ಪ್ರಕಟಿಸಲು ಸರ್ಕಾರ ಹಣ ಬಿಡುಗಡೆ ಮಾಡುತ್ತದೆ. ಆದರೆ ಆ ಯೋಜನೆಯೇ ಜಾರಿಗೆ ಬರುವುದಿಲ್ಲ. ಈ ರೀತಿಯ ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ನಾನೀಗ ಪ್ರಾಧಿಕಾರಕ್ಕೆ ಬಂದಿದ್ದೇನೆ ಎಂದ ಮಾತ್ರಕ್ಕೆ ನನ್ನ ಐಡಿಯಾಲಜಿಗೆ ತಕ್ಕಂತೆ ಯೋಜನೆಗಳನ್ನು ಜಾರಿಗೆ ತಂದು ಉಳಿದ ಮೌಲಿಕ ಯೋಜನೆಗಳನ್ನು ಕೈಬಿಡುತ್ತ ಹೋದರೆ ಅದಕ್ಕೆ ಯಾವ ಅರ್ಥವಿದೆ ಹೇಳಿ? ಅಂತಹುದನ್ನು ನಾನು ಎಂದಿಗೂ ಮಾಡುವುದಿಲ್ಲ.

- **ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ಮೇಲೆ ಇವತ್ತಿನ ತನಕ ಲೆಕ್ಕಪರಿಶೋಧನೆಯ ಕೆಲಸ ಆಗಿಲ್ಲ ಎಂಬ ಮಾತಿದೆ...?**

ಹೌದು ಇವತ್ತಿನ ವರೆಗೆ ಆಡಿಟ್ ಕೆಲಸ ಆಗಿಲ್ಲ. ಅದು ಮುಂದೂಡತ್ತಲೇ ಬಂದಿದ್ದಾರೆ. ಈಗ ಬಂದಿರುವ ನಾನೂ ಅದನ್ನು ಮಾಡದೇ ಅವಧಿ ಮುಗಿಸಿ ಹೊರಟುಬಿಡಬಹುದು. ಆದರೆ ಹಾಗೆ ಮಾಡುವುದಿಲ್ಲ. ಆಡಿಟ್ ಕೆಲಸವನ್ನು ಈಗ ಗಂಭೀರವಾಗಿ ಕೈಗೆತ್ತಿಕೊಳ್ಳಲಾಗಿದೆ ಮತ್ತು ಅದನ್ನು ಬೇಗ ಮುಗಿಸುತ್ತೇವೆ ಕೂಡ. ಆರಂಭದಿಂದಲೂ ಪ್ರಾಧಿಕಾರ ಸರ್ಕಾರದ ಅನುದಾನದ ಮೂಲಕ ನಡೆದುಕೊಂಡು ಬಂದಿರುವುದರಿಂದ ಆ ವರ್ಷದಿಂದಲೇ ಆಡಿಟ್ ಮಾಡಿಸಲಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ಅನುಮತಿಯನ್ನು ಕೂಡ ಪಡೆದುಕೊಂಡಿದ್ದೇನೆ.

- **ನಮ್ಮ ಜನರಲ್ಲಿ ಪುಸ್ತಕ ಸಂಸ್ಕೃತಿಯನ್ನು ಹುಟ್ಟುಹಾಕಲಿಕ್ಕೆ ಮತ್ತು ಮುಂದಿನ ತಲೆಮಾರಿಗೆ ಅದನ್ನು ರೀಚ್ ಮಾಡಿಸಲು ನಿಮ್ಮ ಯೋಚನೆಗಳು?**

ಈ ಹಿಂದೆ ಪ್ರಾಧಿಕಾರದಲ್ಲಿ ಒಂದು ಯೋಜನೆಯಿತ್ತು. ಪ್ರತಿ ಶಾಲಾ-ಕಾಲೇಜುಗಳಲ್ಲಿ ಓದುವ ಅಭಿರುಚಿಯನ್ನು ಬೆಳೆಸಲು ಜಾಣಜಾಣೆಯರ ಬಳಗ ಎಂದು ಮಾಡಲಾಗುತ್ತಿತ್ತು. ಅದನ್ನು ಯಶಸ್ವಿಯಾಗಿ ಮಾಡಿಕೊಂಡು ಬರಲಾಗುತ್ತಿದೆ. ಎಲ್ಲ ಶಾಲಾ-ಕಾಲೇಜುಗಳಿಗೆ ಉಚಿತವಾಗಿ ಪುಸ್ತಕಗಳನ್ನು ಕೊಡುವುದು, ಓದಿಸುವ ಕೆಲಸವನ್ನು ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದೇವೆ. ಈಗ ಆಧುನಿಕವಾಗಿ ಲಭ್ಯವಿರುವ ಮಾಧ್ಯಮದಲ್ಲಿಯೂ ಕೂಡ ಈ ಎಲ್ಲ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಎಪ್ಪತ್ತು ಎಂಭತ್ತರ ದಶಕದಲ್ಲಿ ಅನಕೃ, ಸಾಯಿಸುತೆ ಅವರು ಬರೆಯುತ್ತಿದ್ದ ಕಾಲಘಟ್ಟದಲ್ಲಿ ನಮ್ಮ ಮಹಿಳೆಯರು ಕಡ್ಡಾಯ ಎಂಬಂತೆ ಕಾದಂಬರಿಗಳನ್ನು ಓದುತ್ತಿದ್ದರು. ಈಗ ಕಾಲ ಬದಲಾಗಿದೆ. ಮುಂದುವರಿದ ತಂತ್ರಜ್ಞಾನಕ್ಕೆ ತಕ್ಕಂತೆ ನಾವು ಯೋಜನೆಗಳನ್ನು ರೂಪಿಸಬೇಕಿದೆ. ಅದಕ್ಕಾಗಿ ನಾವು ಎಫ್‌ಎಂ ರೇಡಿಯೋ ಚಾನಲ್‌ಗಳನ್ನು ಬಳಸಿಕೊಂಡು ಆ-ಪುಸ್ತಕ (ಆಡಿಯೋ)ದ ಮೂಲಕ ತಲುಪುವ ಪ್ರಯತ್ನ ಮಾಡುತ್ತಿದ್ದೇವೆ. ಪಂಪನ, ಕುಮಾರವ್ಯಾಸನ ಕೃತಿಗಳನ್ನು ನಿಮಗೆ ಓದಲು ಕಷ್ಟವಾಗುತ್ತಿದೆ ಎನ್ನುವುದಾದರೆ ಅದನ್ನು ಯಾರಾದರೂ ಪ್ರಸಿದ್ಧ ಗಮಕಿಗಳ ಮೂಲಕ ಓದಿಸಿ ರೆಕಾರ್ಡ್ ಮಾಡಿ ಕೇಳಿಸುವ ಕೆಲಸ ಇದಾಗಿದೆ. ಆಡಿಯೋ ಪುಸ್ತಕದ ಮೂಲಕ ಓದುವ ವಲಯವನ್ನು ವಿಸ್ತರಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಓದುವುದರಿಂದ ಅಕ್ಷರ ಜ್ಞಾನ ಬೆಳೆಯುತ್ತದೆ, ಭಾಷಾ ಅಭಿವೃದ್ಧಿಯಾಗುತ್ತದೆ ಎಂಬುದು ನಿಜವಾದರೂ ಅದು ಆಗುತ್ತಿಲ್ಲ ಎಂದಾಗ ಕೇಳಿಸುವುದರ ಮೂಲಕವಾದರೂ ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸುವ ಅಗತ್ಯ ಕಾಣುತ್ತಿದೆ. 'ಕೇಳುವ ಸೂರಿಗಳು ಸನಕಾದಿ ಸಜ್ಜನರು' ಎಂದು ಕುಮಾರವ್ಯಾಸ ಹೇಳುವಂತೆ ಕಾವ್ಯವನ್ನು ಓದಿಸುವ ಪರಿಪಾಠ



Download From : www.kpscvaani.com

ಈಗಲೂ ಉಳಿಸಿಕೊಂಡು ನಾವು ಬಂದಿದ್ದೇವೆ. ಅದನ್ನು ಆಧುನಿಕ ತಂತ್ರಜ್ಞಾನದ ಮೂಲಕ ಕೇಳಿಸುವ ಪ್ರಯತ್ನವನ್ನು ಮಾಡಬೇಕಿದೆ ಮತ್ತು ಅದನ್ನು ಮಾಡುತ್ತೇವೆ.

- **ನಮ್ಮ ಕಾವ್ಯವನ್ನು ಕನ್ನಡದ ಮನಸ್ಸುಗಳಿಗೆ ತಲುಪಿಸುವ ಕೆಲಸ ನಿರಂತರ. ಅದನ್ನು ತಿಂಗಳಿಗೊಂದು ಕಾರ್ಯಕ್ರಮವಾಗಿ ಮಾಡಿ ಗಮಕಿಗಳ ಮೂಲಕ ತಲುಪಿಸಬಹುದು ಅಲ್ಲವೇ?**

ನಿಜ, ಅಂತಹ ಯೋಚನೆ ಪ್ರಾಧಿಕಾರದ ಮುಂದೆ ಇದೆ. ಕೊರೊನಾ ಬಂದಿದ್ದರಿಂದ ನಮ್ಮ ಎಲ್ಲ ಕಾರ್ಯಕ್ರಮಗಳಿಗೆ ಬ್ರೇಕ್ ಬಿದ್ದಿದೆ. ಆ-ಪುಸ್ತಕ ಮತ್ತು ಇ-ಪುಸ್ತಕದ ಯೋಜನೆಗಳ ಜೊತೆಗೆ ಇಂತಹ ಕಾರ್ಯಕ್ರಮಗಳನ್ನು ಕೂಡ ಆರಂಭ ಮಾಡಲಿದ್ದೇವೆ. ಇದರ ಜೊತೆ ಪ್ರಕಾಶಕರ ಸಮ್ಮೇಳನ ಬಾಕಿ ಉಳಿದುಕೊಂಡಿದೆ. ಈ ಬಾರಿ ಮುದ್ರಣ ಕಾಶಿ ಗದಗದಲ್ಲಿ ಸಮ್ಮೇಳನ ಮಾಡುತ್ತೇವೆ. ಅದಕ್ಕಾಗಿ ಸ್ಥಾಯಿ ಸಮಿತಿ ಕರೆದು ಅಧ್ಯಕ್ಷರ ಆಯ್ಕೆಯನ್ನು ಮಾಡುತ್ತೇವೆ. ಎರಡನೆಯದಾಗಿ ಪುಸ್ತಕ ಮಾರಾಟ ಮೇಳಗಳು ಬಹಳ ದಿನಗಳಿಂದ ನಡೆದಿಲ್ಲ. ಅದನ್ನು ಆಯೋಜಿಸಬೇಕು.

- **ಈ ಪುಸ್ತಕ ಮಾರಾಟ ಮೇಳಗಳನ್ನೇ ವಿಕೇಂದ್ರೀಕರಣ ಮಾಡಿ ರಾಜ್ಯದ ಬೇರೆ ಬೇರೆ ಕಡೆ, ಜಿಲ್ಲಾ, ತಾಲೂಕು ಮಟ್ಟದಲ್ಲಿ ಏರ್ಪಡಿಸಬಹುದು..?**

ಹೌದು. ಅದು ಒಳ್ಳೆಯ ಯೋಚನೆ. ಈ ಬಾರಿ ಮಾರಾಟ ಮೇಳಗಳನ್ನು ಮೂರು ಕಡೆ ಏರ್ಪಡಿಸಲು ಯೋಜಿಸಿದ್ದೇವೆ. ಬೆಂಗಳೂರು, ಮಂಗಳೂರು ಮತ್ತು ಧಾರವಾಡದಲ್ಲಿ. ಅದನ್ನು ನಿಯಮಾವಳಿ ಪ್ರಕಾರವೇ ಇ-ಟೆಂಡರ್ ಕರೆದೇ ನಡೆಸಬೇಕಾಗಿದೆ. ಹಾಗಾಗಿ ವಿಳಂಬವಾಗುತ್ತಿದೆ.

ಸಿರಿಗನ್ನಡ ಮಾರಾಟ ಮಳಿಗೆಗಳ ಮೂಲಕ ಜಿಲ್ಲಾ ಮಟ್ಟದಲ್ಲಿ ಪುಸ್ತಕಗಳು ಲಭ್ಯವಾಗುವಂತೆ ಮಾಡಬೇಕು ಎಂಬುದು ಪ್ರಾಧಿಕಾರದ ಮಹತ್ವಾಕಾಂಕ್ಷಿ ಯೋಜನೆ. ರಾಜ್ಯಾದ್ಯಂತ ಇಂತಹ 27 ಮಳಿಗೆಗಳಿವೆ. ಆದರೆ ಇವ್ಯಾವೂ ಇದುವರೆಗೂ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅಂತಹ ಸಿರಿಗನ್ನಡ ಮಳಿಗೆಗಳಿಗೆ ಮಾಸಿಕ 2500 ರೂ ಮಳಿಗೆ ಚಾರ್ಜು, 2500 ರೂ. ಗೌರವ ಸಂಭಾವನೆ ಕೊಡ್ತೇವೆ. ಆದರೆ ನಮಗೆ ಬರುವ ಆದಾಯ 20 ರೂ., 100 ರೂ. ಹೀಗೆ ಬರುತ್ತಿದೆ. ಒಂದು ವರ್ಷಕ್ಕೆ ಒಂದು ಮಳಿಗೆಯಿಂದ ಮುನ್ನೂರು, ನಾನ್ನೂರು ರೂ. ಆದಾಯ ಬಂದ ಉದಾಹರಣೆಗಳಿವೆ. ಇಷ್ಟೆಲ್ಲ ನಷ್ಟವಾದ ಮೇಲೆ ಯಾಕೆ ನಡೆಸುತ್ತೀರಿ, ಮುಚ್ಚಿಬಿಡಿ ಎಂದು ಆಡಿಟ್‌ನಲ್ಲೂ ಆಕ್ಷೇಪ ಬಂದಿದೆ. ಇದು ತೀರಾ ನೋವಿನ ಸಂಗತಿ. ಕೆಲವು ಬಾಹ್ಯ ಒತ್ತಡಗಳಿಂದಾಗಿ ಅವುಗಳನ್ನು ಮುಚ್ಚಲೂ ಆಗುತ್ತಿಲ್ಲ. ಪ್ರಾಧಿಕಾರದ ಎಲ್ಲ ಪ್ರಕಟಣೆಗಳ ಜೊತೆಗೆ ಅಲ್ಲಿ ಖಾಸಗಿ ಪ್ರಕಾಶನಗಳ ಪುಸ್ತಕಗಳನ್ನು ಮಾರಾಟ ಮಾಡಲೂ ಅವಕಾಶವಿದೆ. ಆದರೂ ಅನೇಕ ಮಳಿಗೆಗಳಲ್ಲಿ ಆದಾಯ ಮಾತ್ರ ಶೂನ್ಯ. ಅಲ್ಲಿ ನಮ್ಮ ಪುಸ್ತಕಗಳನ್ನು ಬಿಟ್ಟು ಉಳಿದೆಲ್ಲ ಪುಸ್ತಕಗಳನ್ನು ಮಾರಾಟ ಮಾಡುತ್ತಾರೆ. ಅದು ತೀರಾ ನೋವಿನ ಸಂಗತಿ.

- **ಅದಕ್ಕೆ ತಕ್ಕಂತೆ ಪುಸ್ತಕ ಉತ್ಪಾದನೆಯ ಗುಣಮಟ್ಟ ಕೂಡ ಖಾಸಗಿಯವರಿಗೆ ಸರಿಸಾಟಿಯಾಗುವ ಹಾಗೆ ಹೆಚ್ಚಿಸಬೇಕು...**

ಈ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಮುದ್ರಣದ ಗುಣಮಟ್ಟದಲ್ಲಿ ಯಾವುದೇ ರೀತಿಯಲ್ಲಿ ರಾಜಿ ಮಾಡಿಕೊಳ್ಳಬಾರದು. ನಮ್ಮ ಮುಂದಿನ ಪ್ರಕಟಣೆಗಳನ್ನು ಕೈಗೆತ್ತಿಕೊಳ್ಳುವಾಗ ಗುಣಮಟ್ಟದ ಕಡೆಗೆ ಹೆಚ್ಚಿನ ಮುತುವರ್ಜಿ



ವಹಿಸುತ್ತೇವೆ. ಈಗ ನಾವು ಕೈಗೆತ್ತಿಕೊಂಡಿರುವ ಸಮಗ್ರ ವಚನ ಸಾಹಿತ್ಯದ ಮರುಮುದ್ರಣದ ಸಂದರ್ಭದಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಲಾಗಿದೆ.

- **ಪುಸ್ತಕಗಳ ಸಗಟು ಖರೀದಿ ಎನ್ನುವುದು ಪ್ರತಿ ಸಾಲಿನಲ್ಲಿ ಎದುರಾಗುವ ಬಹುದೊಡ್ಡ ಸವಾಲು. ಅದಕ್ಕೊಂದು ಹೊಸ ಆಯಾಮ ಕೊಡುವ ಯೋಚನೆ?**

ಹೌದು ನಿಜಕ್ಕೂ ಅದೊಂದು ಸವಾಲು. 2016 ನೇ ಸಾಲಿನದನ್ನು ಈಗಷ್ಟೇ ಮುಗಿಸಿದ್ದೇವೆ. 2017ನೇ ಸಾಲಿನದನ್ನು ಕೈಗೆತ್ತಿಕೊಳ್ಳಬೇಕು. ಇಲ್ಲಿ 700-800 ಶೀರ್ಷಿಕೆಗಳು ಬರುತ್ತವೆ. ಹೇಗಾದರೂ ಆಯ್ಕೆ ಮಾಡುವುದು? ಗ್ರಂಥಾಲಯ ಇಲಾಖೆಯಲ್ಲಿಯೂ ಇದು ದೊಡ್ಡ ಸವಾಲು. ಇದನ್ನು ನಿಭಾಯಿಸಲು ಗಂಭೀರವಾಗಿ ಯೋಚನೆ ಮಾಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಪ್ರಕಾಶಕರು ಮತ್ತು ಲೇಖಕರು ಅತ್ಯಂತ ಜವಾಬ್ದಾರಿಯುತವಾಗಿ ವರ್ತಿಸಬೇಕು. ಪ್ರಕಾಶಕರು ಮಾಡಿದ ಪುಸ್ತಕವನ್ನೆಲ್ಲ ಸರ್ಕಾರ ಖರೀದಿ ಮಾಡಬೇಕು ಎನ್ನುವ ಇರಾದೆಯನ್ನು ಬಿಡಬೇಕು. ನೀವು ಪುಸ್ತಕಗಳನ್ನು ಮುದ್ರಿಸುವಾಗಲೇ ಗುಣಮಟ್ಟದಿಂದ ಮಾಡಿದರೆ ಇವೆಲ್ಲ ಪ್ರಶ್ನೆ ಉದ್ಭವಿಸುವುದೇ ಇಲ್ಲ. ನಾವು ಎಲ್ಲದಕ್ಕೂ ಒಂದು ಸ್ಟಾಂಡರ್ಡ್ ನಿಗದಿ ಮಾಡದೇ ಇದ್ದರೆ ಅದನ್ನು ನಿಯಂತ್ರಿಸುವುದೇ ಕಷ್ಟವಾಗಿ ಬಿಡುತ್ತದೆ.

- **ಕನ್ನಡ ಪುಸ್ತಕ ಪ್ರಾಧಿಕಾರ ಇಡೀ ಪ್ರಕಾಶಕರ ಪಾಲಿನ ನಾಯಕ. ಅಥವಾ ಸರ್ಕಾರದ ಪ್ರತಿನಿಧಿ. ಪ್ರಕಾಶಕರ ವಲಯವನ್ನು ಒಳಗೊಳ್ಳುವ, ಅವರ ಜೊತೆ ಸಂವಾದ ನಡೆಸುವಂತಹ ಹಾಗೂ ಸರ್ಕಾರ ಮತ್ತು ಪ್ರಕಾಶಕರ ನಡುವಿನ ಅಂತರವನ್ನು ತಗ್ಗಿಸುವ ಕೆಲಸ ಆಗುತ್ತಿದೆಯಾ?**

ಈಗ ಪ್ರಕಾಶಕರ ಸಮ್ಮೇಳನವನ್ನು ಎರಡು ದಿನಗಳ ಕಾಲ ಮಾಡಿ ಅಲ್ಲಿ ಮುಕ್ತವಾದ ಚರ್ಚೆ ಮಾಡಬೇಕು ಎಂದು ತೀರ್ಮಾನಿಸಲಾಗಿದೆ. ಪ್ರಕಾಶಕರು ಯಾವತ್ತು ಬಂದು ಕೇಳಿದರೂ ಅದಕ್ಕೆ ನಾವು ಮುಕ್ತವಾಗಿ ಸ್ಪಂದಿಸುತ್ತೇವೆ. ಇತ್ತೀಚೆಗೆ ಪ್ರಕಾಶಕರು ಒಂದು ಮನವಿ ಮಾಡಿಕೊಂಡು, ಪುಸ್ತಕಗಳನ್ನು ಡಿಜಿಟಲೀಕರಣ ಮಾಡುವ ಬಗ್ಗೆ ಬಲವಾದ ಆಕ್ಷೇಪವನ್ನು ವ್ಯಕ್ತಪಡಿಸಿದ್ದರು. ಈ ಎಲ್ಲ ಹಿನ್ನೆಲೆಯಲ್ಲಿ ಹೊಸ ಪುಸ್ತಕ ನೀತಿಯನ್ನು ರೂಪಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ಅದಕ್ಕೆ ಈಗಾಗಲೇ ಪ್ರಕಾಶಕರು, ಲೇಖಕರು, ತಂತ್ರಜ್ಞರನ್ನು ಒಳಗೊಂಡ ಸಮಿತಿಯನ್ನು ರಚನೆ ಮಾಡಿದ್ದೇವೆ. ಪುಸ್ತಕ ಪ್ರಾಧಿಕಾರದಿಂದ ಪ್ರಕಾಶಕರ ಹಿತವನ್ನು ಸಂರಕ್ಷಿಸುವುದು, ಅದೆಲ್ಲಕ್ಕಿಂತಲೂ ಮುಖ್ಯವಾಗಿ ಕನ್ನಡದ ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ಸಂರಕ್ಷಿಸುವ ದೃಷ್ಟಿಯಿಂದ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವ ಚಿಂತನೆ ನಡೆದಿದೆ. ಮುಂದಿನ ಮೂರು ತಿಂಗಳಲ್ಲಿ ಅದರ ವರದಿ ಬರುವ ನಿರೀಕ್ಷೆಯಿದೆ.



Download From : www.kpscvaani.com

# ಕೋವಿಡ್-19



**ಇವುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿ**

- ಹತ್ತಿರದ ಸಂಭಾಷಣೆ
- ಜನಸಂದಣಿಯ ಪ್ರದೇಶಗಳು
- ಗಾಳಿಯಾಡದ ಸ್ಥಳಗಳು

ಕೋವಿಡ್-19 ವೈದ್ಯಕೀಯ ಸಹಾಯಕ್ಕಾಗಿ ಆಪ್ತಮಿತ್ರ ಸಹಾಯವಾಣಿ **14410** ಗೆ ಕರೆ ಮಾಡಿ

**#KarnatakaFightsCorona**

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

Download From : www.kpscvaani.com



## ಕರಿ ಬಂಗಾರದಿಂದ

# ಬಾಳು ಬಂಗಾರ

**ಕೇವಲ ಪಿಯುಸಿವರೆಗೆ ಓದಿದ್ದರೂ ಇವರ ಸಾಧನೆ ಯಾವ ಕೃಷಿ ವಿಜ್ಞಾನಿಗೂ ಕಡಿಮೆ ಇಲ್ಲ. ಬದಲಿಗೆ ಕೃಷಿಯನ್ನು ನಂಬಿದವರಿಗೆ ಕೃಷಿ ಎಂದೆಂದಿಗೂ ಕೈ ಬಿಡುವುದಿಲ್ಲ ಎನ್ನುವುದನ್ನು ಎಲ್ಲರಿಗೂ ತೋರಿಸಿ ಮಾದರಿ ರೈತ ಎನಿಸಿಕೊಂಡಿದ್ದಾರೆ.**

ಡಾ. ರವಿಪ್ರಸಾದ ಸಜ್ಜನ್. ಎಂ.





ಒಬ್ಬ ರೈತ ಕಷ್ಟಗಳನ್ನು, ಸವಾಲುಗಳನ್ನು ಮೆಟ್ಟಿ ನಿಂತು ಸುಖ ಪಡೆಯಲು ಸಾಧ್ಯವಿದೆ ಎಂಬುದನ್ನು ಇತರರಿಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಹಾಗೆಂದು ಈ ಹಿಂದೆ ಈ ರೈತ ಮುಟ್ಟಿದ್ದೆಲ್ಲಾ ಹೊನ್ನಾಗಿಲ್ಲ. ಇವರು ಕೃಷಿಕರಷ್ಟೇ ಅಲ್ಲ, ಸಾಧನೆಯಲ್ಲಿ "ಕೃಷಿ ವಿಜ್ಞಾನಿ"ಯಾಗಿದ್ದಾರೆ. 'ಕರಿ ಬಂಗಾರ' (ಕಾಳು ಮೆಣಸು) ಬೆಳೆದು ಬಾಳನ್ನು ಬಂಗಾರವಾಗಿಸಿಕೊಂಡಿದ್ದಾರೆ. ಈ ರೈತನ ಯಶಸ್ಸಿನ ಹಿಂದೆ ಕೃಷಿಯ ಮೇಲಿನ ಶ್ರದ್ಧೆ ಮತ್ತು ಅಪಾರ ಪರಿಶ್ರಮ ಅಡಗಿದೆ.

ಅಂದ ಹಾಗೆ ಇವರ ಹೆಸರು **ಎನ್.ಡಿ.ಹೆಗಡೆ (ದತ್ತಾತ್ರೇಯ ನಾರಾಯಣ ಹೆಗಡೆ)** ಉತ್ತರ ಕನ್ನಡದ ಕುಮಟಾದಿಂದ ಅನತಿ ದೂರದಲ್ಲಿ ಇವರ ತೋಟವಿದೆ. ಅಂತ್ರವಳ್ಳಿಯ ನಡಿಗದ್ದೆ ಇವರ ಊರು. ಹೆಗಡೆಯವರನ್ನು ಭೇಟಿಯಾಗಲು ನಾವು ಹೊರಟೆವು. ತೋಟದಲ್ಲಿದ್ದ ಎನ್. ಡಿ. ಹೆಗಡೆಯವರು ನಮ್ಮನ್ನು ನೋಡಿ "ನಮಸ್ಕಾರ ಬನ್ನಿ ಸಾರ್" ಎಂದರು.



Download From : www.kpscvaani.com



**ಎನ್.ಡಿ.ಹೆಗಡೆಯವರು ಹೇಳುವ ಪ್ರಕಾರ ಕಸಿ ಕಟ್ಟುವಾಗ ನೆನಪಿಡಬೇಕಾದ ಮುಖ್ಯ ವಿಷಯವೇನೆಂದರೆ, ಅಡಿ ಗಿಡ (ಕೆಳಗಿನದು) ಮತ್ತು ಕಸಿ ಕುಡಿ (ಮೇಲಿನದು)ಗಳ ಪ್ರಭೇದಗಳು ಬೇರೆಬೇರೆಯಾಗಿರುತ್ತದೆ. ಕೆಳಗಿನದು ಕಾಡು ಹಿಪ್ಪಲಿ (ಕೊಲಿಬ್ರಿನಮ್) ಮತ್ತು ಮೇಲಿನದು ಕಾಳುಮೆಣಸು (ನೈಗ್ರಮ್). ಅಡಿ ಗಿಡವಾದ ಕಾಡು ಹಿಪ್ಪಲಿಯು ಕಾಳುಮೆಣಸಿನಷ್ಟು ವೇಗವಾಗಿ ಬೆಳವಣಿಗೆಯಾಗುವುದಿಲ್ಲ. ಹೀಗಾಗಿ ಕಾಲಕ್ರಮದಲ್ಲಿ, ಕಾಳುಮೆಣಸಿನ ಕಾಂಡ ಹೆಚ್ಚು ದಪ್ಪಗಾಗುತ್ತದೆ. ಹಾಗಾಗಿ 4–5 ವರ್ಷವಾದಾಗ ಕಸಿ ಮಾಡಿದ ಜಾಗದಲ್ಲೇ ಅದು ತುಂಡಾಗುತ್ತದೆ. ಈ ಸಮಸ್ಯೆಯನ್ನು 'ಉಲ್ಟಾ' ಕಸಿ ಅಥವಾ 'ವಿ'ಯ ಸೀಳನ್ನು ಹೆಚ್ಚು ಉದ್ದವಾಗಿಸುವ ಮೂಲಕ ಪರಿಹರಿಸಬಹುದಾಗಿದೆ.**

ಇವರದು ಸುಮಾರು 30 ವರ್ಷದ ತೋಟ. ಪ್ರಸ್ತುತ ಇವರ ಮೂರು ಎಕರೆ ತೋಟದಲ್ಲಿ ಅಡಿಕೆ, ಕಾಳು ಮೆಣಸು, ಜಾಯಿಕಾಯಿ, ಬಾಳೆ ಮುಂತಾದ ಸಾಂಪ್ರಾದಾಯಿಕ ಬೆಳೆಗಳಿವೆ. ಅಡಿಕೆ ಮತ್ತು ಇತರೆ ಎಲ್ಲಾ ಮರಗಳಿಗೆ ಫಣಿಯೂರು ಜಾತಿಯ 2 ಸಾವಿರಕ್ಕೂ ಹೆಚ್ಚೂ ಕಾಳುಮೆಣಸು ಬಳ್ಳಿಗಳನ್ನು ಹಚ್ಚಿದ್ದಾರೆ. ಇವರ ತೋಟವು ಎಲ್ಲಿ ನೋಡಿದರಲ್ಲಿ ಹಚ್ಚ ಹಸುರಿನಿಂದ ಕೂಡಿದೆ. ತೋಟದಲ್ಲಿ ಸೊರಗು ರೋಗ, ಕೊಳೆ ರೋಗ ಇದ್ಯಾವುದೂ ಸುಳಿಯುವುದಿಲ್ಲ ಎಂಬುವುದೇ ವಿಶೇಷತೆ. ಜೂನ್‌ನಲ್ಲಿ  ಇವರ ತೋಟ ಮದುವೆ ಚಪ್ಪರದಂತೆ ಕಾಣುತ್ತದೆ.

ಮೂಲತ: ಕೃಷಿ ಕುಟುಂಬದಿಂದ ಬಂದ ಇವರು ದುರ್ಬಲ ಆರ್ಥಿಕ ಪರಿಸ್ಥಿತಿಯಿಂದ ತಮ್ಮ ಪಿಯುಸಿ ವ್ಯಾಸಂಗದ ನಂತರ ಓದು ಮುಂದವರಿಸಲಾಗದೆ ಅನಿವಾರ್ಯವಾಗಿ ಕೃಷಿ ಬದುಕಿಗೆ ಬಂದರು. ಹಿಂದೆ  ಇವರು ಗೌರಿ ಹೂ, ಅಣಬೆ, ಶುಂಠಿ, ಅಂಗಾಂಶ ಕಸಿ ಬಾಳೆಗಳು ಇತ್ಯಾದಿಯಾಗಿ ಬೆಳೆದು ಕೈ ಸುಟ್ಟುಕೊಂಡಿದ್ದಾರೆ. ಆದರೆ ಪ್ರಯೋಗಶೀಲತೆ ಮತ್ತು ಪ್ರಗತಿಪರ ಕೃಷಿಯ ಬಗ್ಗೆ ಉತ್ಸುಕರಾಗಿದ್ದ ಇವರು ಪ್ರತಿಬಾರಿ ಸೋಲಿನಿಂದ ಮೈಕೊಡವಿಕೊಂಡು ಎದ್ದು ನಿಂತಿದ್ದಾರೆ.

ನಾವು ಹೆಗಡೆಯವರಿಗೆ "ನಿಮ್ಮ ಯಶಸ್ಸು ಸಾಧನೆಯಾಗಿದ್ದು ಹೇಗೆ?"ಎಂದೆವು. ಅದಕ್ಕೆ ಹೆಗಡೆಯವರು ಅಡಿಕೆ ತೋಟವನ್ನು ನಮಗೆ ತೋರಿಸುತ್ತಾ... ತಮ್ಮ ತೋಟದ ನೆನಪಿನ ಬುತ್ತಿ ಬಿಚ್ಚಿಟ್ಟರು.

"ಪ್ರಾರಂಭದಲ್ಲಿ ಎಲ್ಲಾ ರೈತರಂತೆ ನಾನು ಕೂಡ ಅಡಿಕೆ ತೋಟದಲ್ಲಿ ಕಾಳು ಮೆಣಸಿನ ಕೃಷಿಯಲ್ಲಿ ಕಟ್ಟೆ ರೋಗದ ಬಾಧೆಯಿಂದ ನಷ್ಟ ಅನುಭವಿಸಿದೆ. ಹಾಗಾಗಿ ಇನ್ನು ಕಾಳು ಮೆಣಸಿನ ಕೃಷಿ ಸಾಕು ಎನ್ನುವ ಹಂತಕ್ಕೆ ಬಂದು ತಲುಪಿದೆ. ಆದರೆ ಕೃಷಿಯ ಮೇಲಿನ ನನ್ನ ಒಲವು ಮತ್ತು ಕೃಷಿಯಲ್ಲಿಯೇ ಏನಾದರೂ ಸಾಧಿಸಬೇಕೆಂಬ ಅದಮ್ಯ ಉತ್ಸಾಹ ನನ್ನಲ್ಲಿತ್ತು. ಅದಕ್ಕಾಗಿ ರೋಗದ ಸಮಸ್ಯೆಗೆ ಪರಿಹಾರ ಹುಡುಕಲು ಸೂಕ್ತ ತಂತ್ರಜ್ಞಾನದ ಹುಡುಕಾಟದಲ್ಲಿದ್ದೆ" ಎಂದು ತಾವು ಅನುಭವಿಸಿದ ಹಳೆಯ ನೋವನ್ನು ಮೆಲುಕು ಹಾಕಿದರು.

> **ಕಾಳು ಮೆಣಸಿನ ಕೃಷಿಯಲ್ಲಿ ವಿಯೆಟ್ನಾಂ ದೇಶವನ್ನೇ ಮೀರಿಸುವ ಗುರಿಯನ್ನು ಹೊಂದಿರುವ ಇವರ ನರ್ಸರಿಯು ಇಂದು ಉದ್ಯಮವಾಗಿ ಬೆಳೆದಿದೆ. ವರ್ಷದಿಂದ ವರ್ಷಕ್ಕೆ ಇವರ ಕಾಳು ಮೆಣಸಿನ ಕಸಿ ಬಳ್ಳಿಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಪ್ರಸ್ತುತ ಇವರ ನರ್ಸರಿಯಿಂದ ವರ್ಷಕ್ಕೆ ಸುಮಾರು 3.5 ಲಕ್ಷ ಕಸಿ ಬಳ್ಳಿಗಳು ಮಾರಾಟವಾಗುತ್ತದೆ.**

ಹೆಗಡೆಯವರು ಕಟ್ಟೆರೋಗದ ಸಮಸ್ಯೆಗೆ ಪರಿಹಾರ ಹುಡುಕುವಾಗ ಇವರಿಗೆ ವರದಾನವಾಗಿ ಪರಿಣಮಿಸಿದ್ದು ಪುತ್ತೂರಿನ "ಪರ್ಪಲ್ ನರ್ಸರಿ"ಯವರ ಒಂದು ಕರಪತ್ರ. ಇದರಲ್ಲಿ ಕಸಿ ಮಾಡಿದ ಕಾಳು ಮೆಣಸಿಗೆ ಕಟ್ಟೆರೋಗ ಬರುವುದಿಲ್ಲ ಎಂಬ ಒಕ್ಕಣೆ ನೋಡಿ ಇವರಲ್ಲಿ ಹೊಸ ಚೈತನ್ಯ ಚಿಗುರಿತು. ಕರ ಪತ್ರದಲ್ಲಿ ಕಾಡು ಹಿಪ್ಪಲಿ (ಬ್ರೆಝಿಲ್ ಹಿಪ್ಪಲಿ) ಗಿಡಗಳಿಗೆ ಕಸಿ



Download From : www.kpscvaani.com



ಮಾಡಿದ ಕಾಳುಮೆಣಸಿನ ಕೃಷಿಯ ಕುರಿತು ಮಾಹಿತಿ ಕೊಟ್ಟಿದ್ದರು. ಸದಾ ಪ್ರಯೋಗದ ಮನಸಿರುವ ಇವರು ಪತ್ರದ ಕೆಳಭಾಗದಲ್ಲಿದ್ದ ನಂಬರಿಗೆ ಫೋನಾಯಿಸಿ, 1,300 ಕಾಳುಮೆಣಸಿನ ಬಳ್ಳಿಯನ್ನು ತರಿಸಿಕೊಂಡು ನಾಟಿ ಮಾಡಿದರು.

ಕಸಿ ಮಾಡಿದ ಕಾಳುಮೆಣಸಿನ ಬಳ್ಳಿಯನ್ನು ಮೂರುವರೆ ಎಕರೆ ಅಡಿಕೆ ತೋಟದ ಕೆಲವು ಭಾಗಗಳಲ್ಲಿ, ಅಡಿಕೆ ಮರದ ಒಂದು ಬುಡದಲ್ಲಿ ನೆಟ್ಟು ಕೊಟ್ಟಿಗೆ ಗೊಬ್ಬರ ಹಾಕಿದರು. ಮುತುವರ್ಜಿಯಿಂದ ಪ್ರತಿದಿನವೂ ಕೂಡ ಜೈವಿಕಗೊಬ್ಬರದ ನೀರುಣಿಸಿದರು. ಅಡಿಕೆ ಮರ ಆಶ್ರಯಿಸಿ ಹಬ್ಬಿದ ಕಾಳುಮೆಣಸಿನ ಬಳ್ಳಿಗಳು ಹೊಸ ಚಿಗುರು ಮೂಡಿಸಿ, ಸೊಂಪಾಗಿ, ಯಾವುದೇ ರೋಗ ಬಾಧೆಗೊಳಗಾಗದೇ ಉತ್ತಮ ಬೆಳವಣಿಗೆ ತೋರಿಸಿದವು. ಒಂದು ಸಸಿಯೂ ಸಾಯಲಿಲ್ಲ ಎಂಬುದೇ ಆಶ್ಚರ್ಯ. ಹೀಗೆ ತಮ್ಮ ಬದುಕು ಅರಳಿಸಿದ ಕಸಿ ಕಾಳುಮೆಣಸಿನ ಕೃಷಿಯ ಬಗ್ಗೆ ನಲಿವುಗಳನ್ನು ಅನಾವರಣಗೊಳಿಸಿದರು.

ಕಾಳು ಮೆಣಸಿನಲ್ಲಿ 'ತಲದಕುಡಿ'ಎಂದು ಕರೆಯುವ ತುದಿಯ ಕಾಳು ಮೆಣಸಿನಕುಡಿಯನ್ನು ಕಸಿಗೆ ಬಳಸಿದರೆ, ಗಿಡ ಕಸಿ ಕಟ್ಟಿದ ಸ್ಥಳದಿಂದಲೇ ಅಡ್ಡ ಟಿಸಿಲು ಒಡೆಯುತ್ತದೆ. ಹಾಗೆ ಒಂದು ವೇಳೆ ನೆಲದಲ್ಲಿ ಹಬ್ಬುವ 'ಅಡ್ಡಕುಡಿ'ಯನ್ನು ಬಳಸಿದರೆ, ಅದು ನಾಲ್ಕೈದು ಅಡಿ ಮೇಲೆ ಹೋಗಿ ನಂತರ ಟಿಸಿಲು ಒಡೆಯುತ್ತದೆ. ನಾವು ಬೆಳವಣಿಗೆಯ ದೃಷ್ಟಿಯಿಂದ ನೋಡಿದರೆ 'ಅಡ್ಡಕುಡಿ'ಯಿಂದ ಹೆಚ್ಚು ಫಲಿತಾಂಶ ಕಂಡುಬರುತ್ತದೆ. ಕಸಿ ಕುಡಿಗಿಂತಲೂ ವೇಗವಾಗಿ ಅಡಿಗಿಡ ಹಿಪ್ಪಲಿ ಚಿಗುರು ಬಿಡುತ್ತಿರುತ್ತದೆ. ರೈತರು ಇದನ್ನು ಆಗಾಗ ಗಮನಿಸುತ್ತಾ ಚಿವುಟಿ ತೆಗೆಯುತ್ತಲೇ ಇರಬೇಕು. ಇಲ್ಲದೆ ಹೋದರೆ ಕಾಡುಹಿಪ್ಪಲಿ ಎಲ್ಲಾ ಆಹಾರ ಪಡೆದು ಬೆಳೆಯುತ್ತಾ, ಕರಿಮೆಣಸು ಸೊರಗುತ್ತದೆ. ಆಗ ಕರಿಮೆಣಸಿನ ತೋಟವಾಗುವ ಬದಲು ಹಿಪ್ಪಲಿ ತೋಟವಾಗುತ್ತದೆ ಎಂದು ಹೆಗಡೆಯವರು ಎಚ್ಚರಿಸುತ್ತಾರೆ.

ಕಸಿ ಕರಿಮೆಣಸಿನ ಕೃಷಿಯು ಒಂದು ಕಸಿಗಿಡ ನೆಟ್ಟು ಮರೆತು

ಹೆಗಡೆಯವರ ಯಶಸ್ವಿ ಪ್ರಯತ್ನಗಳನ್ನು ಕರ್ನಾಟಕ ಹಾಗೂ ಗೋವಾ ಭಾಗದ ಅನೇಕ ಕಾಳು ಮೆಣಸು ಬೆಳೆಗಾರರು ಅನುಸರಿಸಿ ಸಫಲರಾಗಿದ್ದಾರೆ. ಇಂದು ಕಸಿ ಕರಿಮೆಣಸು ತಂತ್ರಜ್ಞಾನವನ್ನು ತುಂಬ ಜಾಣ್ಮೆಯಿಂದ ಬಳಸಿ ಫಲಿತಾಂಶ ಪಡೆದ ರಾಜ್ಯದ ಬೆರಳೆಣಿಕೆಯ ಅತ್ಯುತ್ತಮ ಉದಾಹರಣೆಗಳಲ್ಲಿ ಹೆಗಡೆಯವರ ಸಾಧನೆ ಮುಂಚೂಣಿಯಲ್ಲಿ ನಿಲ್ಲುತ್ತದೆ. ಇದೇ ಕಾರಣದಿಂದಾಗಿ ಹೆಗಡೆಯವರನ್ನು"ರೈತ ವಿಜ್ಞಾನಿ" ಎಂದು ಹಲವರು ಗುರುತಿಸುತ್ತಾರೆ.

ಎನ್.ಡಿ. ಹೆಗಡೆಯವರು ಉತ್ತಮ ಪ್ರಯೋಗಶೀಲ ಕೃಷಿಕರಾದ ಕಾರಣ ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ರೈತರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಅವರನ್ನು ಯಾವುದೇ ಸಂದರ್ಭದಲ್ಲಿ ಸಂಪರ್ಕಿಸಿದರೂ ಮಾರ್ಗದರ್ಶನ ನೀಡುವ ಔದಾರ್ಯವಿದೆ. ಒಟ್ಟಾರೆ ಇವರೊಬ್ಬ ಪರಿಪೂರ್ಣ ಮಾದರಿ ಕೃಷಿಕನೆಂಬುದರಲ್ಲಿ ಎರಡು ಮಾತಿಲ್ಲ. ಎನ್.ಡಿ.ಹೆಗಡೆ ಬಹುತೇಕ ದಿನದ 14 ತಾಸು ಕೃಷಿಯಲ್ಲಿಯೇ ತೊಡಗಿರುತ್ತಾರೆ.

"2010 ರಲ್ಲಿ ನೆಟ್ಟ ಈ ಬಳ್ಳಿಗಳು ಈಗ 25-30 ಅಡಿ ಎತ್ತರಕ್ಕೆ ಬೆಳೆದು ಮುಗಿಲಿಗೆ ಮುಖ ಮಾಡಿ ನಗುತ್ತಿವೆ. ಆಗ ಕಾಳು ಮೆಣಸು ಉಪಬೆಳೆಯಾಗಿತ್ತು. ಆದರೆ ಇತ್ತೀಚಿಗೆ ಅಡಕೆ ಉಪ ಬೆಳೆಯಾಗಿದ್ದು, ಕಾಳುಮೆಣಸು ಮುಖ್ಯ ಬೆಳೆಯಾಗಿದೆ" ಎಂದು ಭಟ್ಟರು ಸಂತೋಷ ವ್ಯಕ್ತಪಡಿಸಿದರು.





Download From : www.kpscvaani.com

ಬಿಡುವವರಿಗೆ ಆಗುವಂಥದಲ್ಲ. ಹಂತಹಂತವಾಗಿ ಒಂದು ಅಡಿಕೆ ಮರಕ್ಕೆ ಕಾಡುಹಿಪ್ಪಲಿಯ ಆರು ಶಾಖೆಗಳಿಗಾದರೂ ಕಸಿ ಕಟ್ಟಿ ಏರಿಸಬೇಕು. ಕಸಿಯಲ್ಲದ ಸಾಮಾನ್ಯ ಕಾಳುಮೆಣಸಿನ ಬಳ್ಳಿಗೆ ನಿಧಾನ ಸೊರಗು ರೋಗ ಮತ್ತು ಶೀಘ್ರ ಸೊರಗು ರೋಗ ಹೆಚ್ಚು ಕಾಡುತ್ತದೆ. ಆದರೆ ಕಸಿಗಿಡದಲ್ಲಿ ಈ ಸಮಸ್ಯೆ ಇಲ್ಲವೇ ಇಲ್ಲ. ಆದರೂ ಸಹ ಮುಂಜಾಗೃತ ಕ್ರಮವಾಗಿ ಎರಡು ಬಾರಿ ಅಂದರೆ ಮಳೆಗಾಲದಲ್ಲಿ ಜೂನ್ ಕೊನೆಯಲ್ಲಿ ಮತ್ತು ಆಗಸ್ಟ್ ತಿಂಗಳಿನಲ್ಲಿ ಶೇ.1 ರ ಬೋರ್ಡೋ ಮಿಶ್ರಣ ಸಿಂಪಡಣೆಯಿಂದ ರೋಗ ನಿಯಂತ್ರಣಕ್ಕೆ ತರಬಹುದು. ಹೀಗೆ ಹೆಗಡೆಯವರು ಮಾಹಿತಿಗಳ ಸುರಿಮಳೆಯನ್ನೇ ಸುರಿಸುತ್ತಾರೆ.

ಹೆಗಡೆ ಅವರ ತೋಟದಲ್ಲಿ ಯಾವ ಮರಗಳನ್ನು ನೋಡಿದರೂ ಕಾಳುಮೆಣಸು ಬಳ್ಳಿಗಳು ಹಬ್ಬಿಕೊಂಡಿವೆ. ಹಾಗೆಯೇ ಬೇಲಿಯಲ್ಲಿ ಬೆಳೆಸಿದ ಗ್ಲಿರಿಸೀಡಿಯಾ, ಬೆಟ್ಟದಲ್ಲಿರುವ ಮ್ಯಾಂಜಿಯಂ ಸಸಿ, ಆಕೇಷಿಯಾ ಹಾಗೂ ಕಾಡು ಮರಗಳು ಸಹ ಕಾಳುಮೆಣಸಿನ ಬಳ್ಳಿಯನ್ನು ಹೊತ್ತು ಕೊಂಡಿವೆ. ಹೆಗಡೆಯವರ ಪ್ರಕಾರ ಹೊರ ತೊಗಟೆಯನ್ನು ಕಳಚುವ ಮರವೊಂದನ್ನು ಬಿಟ್ಟು ಉಳಿದೆಲ್ಲ ಮರಗಳಿಗೂ ಕಾಳುಮೆಣಸಿನ ಬಳ್ಳಿಯನ್ನು ಹಬ್ಬಿಸಿ ಬೆಳೆಸಬಹುದು.

ಉತ್ತರಕನ್ನಡ ಜಿಲ್ಲೆಯ ಭಾಗಗಳಲ್ಲಿ ಈ ಕಸಿ ಬಳ್ಳಿಯ ಕೃಷಿ ಮೊದಲು ಅಷ್ಟೇನೂ ಪ್ರಚಾರದಲ್ಲಿರಲಿಲ್ಲ. ಯಾವಾಗ ಎನ್.ಡಿ.ಹೆಗಡೆ ಹಿಪ್ಪಲಿ ಕಸಿ ಮಾಡಿದ ಕಾಳುಮೆಣಸಿನ ಕೃಷಿಯಲ್ಲಿ ಯಶಸ್ವಿಯಾದರೋ ಅಂದಿನಿಂದ ಈ ಭಾಗದಲ್ಲಿ ಪ್ರಚಾರವೂ ಹೆಚ್ಚಾಯಿತು. ಇಂದು ಇವರು ದೊಡ್ಡ ಪ್ರಮಾಣದಲ್ಲಿ ಮೂಲ ಕಾಡು ಹಿಪ್ಪಲಿ ಗಿಡಕ್ಕೆ ಪಣಿಯೂರು ಜಾತಿಯ ಕಾಳುಮೆಣಸು ಬುಡ ಕಸಿ ಮಾಡಿ ರಾಜ್ಯದಾದ್ಯಂತ ಮಾರಾಟ ಮಾಡುತ್ತಿದ್ದಾರೆ. ಈಗ ಇವರ ತೋಟದಲ್ಲೂ ಮನೆ ಅಂಗಳದಲ್ಲೂ ಸಾವಿರಾರು ಕಸಿ ಮೆಣಸಿನ ಗಿಡಗಳೇ ತುಂಬಿವೆ. 25 ರಿಂದ 30 ಕೆಲಸಗಾರರನ್ನು ತಮ್ಮ ಮನೆ ಮಕ್ಕಳಂತೆ ಪರಿಗಣಿಸಿ ಅವರಿಂದಲೂ ಉತ್ತಮ ಕೆಲಸ ಪಡೆಯುತ್ತಿದ್ದಾರೆ. ಇದರಲ್ಲಿ ದಿನವಿಡೀ 13–15 ಜನ ಸ್ಥಳೀಯ ಹಾಲಕ್ಕಿ ಮಹಿಳೆಯರೂ ಕಸಿಯಲ್ಲಿ ನಿರತರಾಗಿರುತ್ತಾರೆ.

ಹೆಗಡೆಯವರಿಗೆ ಅನೇಕ ಜಿಲ್ಲಾ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳು ಸನ್ಮಾನಗಳೂ ಲಭಿಸಿವೆ. ಇವರು ಯಾವುದೇ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿಲ್ಲ, ಪ್ರಶಸ್ತಿಗಳನ್ನು ಹುಡುಕಿಕೊಂಡು ಹೋಗಿಲ್ಲ. ಬದಲಿಗೆ ಪ್ರಶಸ್ತಿಗಳೇ ಇವರನ್ನು ಹುಡುಕಿಕೊಂಡು ಬಂದಿವೆ ಎನ್ನುವುದೇ ವಿಶೇಷ.

ಭಾರತೀಯ ಕೃಷಿ ಸಂಶೋಧನಾ ಕೇಂದ್ರ (ಐ.ಸಿ.ಎ.ಆರ್.), ನವದೆಹಲಿ ಇವರು ಹೆಗಡೆಯವರಿಗೆ ಕೃಷಿಯಲ್ಲಿ ನೀಡುವ ರಾಷ್ಟ್ರಮಟ್ಟದ **"ಪ್ರಯೋಗಶೀಲ ಕೃಷಿಕ"** ಪ್ರಶಸ್ತಿಯನ್ನು 2014–15 ನೇ ಸಾಲಿನಲ್ಲಿ ನೀಡಿ ಗೌರವಿಸಿದೆ. ಹೆಗಡೆಯವರಿಗೆ ಧಾರವಾಡದ ಕೃಷಿ ವಿಶ್ವವಿದ್ಯಾಲಯದಿಂದ ಮತ್ತು ಸ್ವರ್ಣವಲ್ಲಿ ಮಹಾಸಂಸ್ಥಾನದಿಂದ **"ಕೃಷಿ ಪಂಡಿತ"** ಪ್ರಶಸ್ತಿ ಸಂದಿವೆ. ಹಾಗೇ ಶಿರಸಿ ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಕೃಷಿ ವಿಶ್ವವಿದ್ಯಾಲಯಗಳು ಇವರಿಗೆ **"ಉತ್ತಮ ಕೃಷಿಕ"** ಪುರಸ್ಕಾರ ನೀಡಿವೆ. 2012–13 ರಲ್ಲಿ ಧಾರವಾಡ ವಿಶ್ವವಿದ್ಯಾಲಯದ ವತಿಯಿಂದ **"ಪ್ರಯೋಗಶೀಲ ಕೃಷಿಕ"** ಪ್ರಶಸ್ತಿಗೂ ಕೂಡ ಭಾಜನರಾಗಿದ್ದಾರೆ.

ಕಾರವಾರದ ಕೆನರಾ ಚಾರಿಟೇಬಲ್ ಟ್ರಸ್ಟ್ ವತಿಯಿಂದ **"ಕಿಸಾನ್‌ಡೇ ಸನ್ಮಾನ"** ನೀಡಿ ಗೌರವಿಸಿದೆ. ಅತಿ ಕಡಿಮೆ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಫಸಲು ಪಡೆದ ಬಗ್ಗೆ ಶಿರಸಿಯ ಕೃಷಿ ವಿಜ್ಞಾನ ಕೇಂದ್ರವು ಪ್ರಶಸ್ತಿ ನೀಡಿ ಗೌರವಿಸಿದೆ. ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಸೇಷನ್ ಮೈಸೂರು ವತಿಯಿಂದ 2018 ರಲ್ಲಿ **"ಕೃಷಿ ರತ್ನ"** ಪ್ರಶಸ್ತಿಯನ್ನು ಹೆಗಡೆಯವರು ತಮ್ಮದಾಗಿಸಿಕೊಂಡಿದ್ದಾರೆ.

ಕಾಳು ಮೆಣಸಿನಲ್ಲಿ ಮಾಡಿದ ಸಾಧನೆಯನ್ನು ಗುರುತಿಸಿ ತೋಟಗಾರಿಕೆ ಇಲಾಖೆ, ಉತ್ತರಕನ್ನಡ ಇವರು ಸನ್ಮಾನಿಸಿ ಗೌರವಿಸಿದ್ದಾರೆ. ಹೀಗೆ ಹಲವಾರು ಸರ್ಕಾರಿ ಇಲಾಖೆ, ಸಂಘ–ಸಂಸ್ಥೆಗಳು ಇವರಿಗೆ ಪ್ರಶಸ್ತಿಗಳು, ಫಲಕಗಳನ್ನು ನೀಡಿ ಉತ್ತೇಜಿಸಿದ್ದಾರೆ.

ಇಂದು ಇವರ ನರ್ಸರಿಯು ಉದ್ಯಮವಾಗಿ ಬೆಳೆದು ನಿಂತಿದೆ. ವರ್ಷಕ್ಕೆ ಸರಾಸರಿ 3.5 ಲಕ್ಷದಷ್ಟು ಕಸಿ ಬಳ್ಳಿಗಳನ್ನು ಮಾರಾಟ ಮಾಡುತ್ತಿದ್ದಾರೆ. ಹೀಗೆ ವರ್ಷದಿಂದ ವರ್ಷಕ್ಕೆ ಕಸಿ ಕಾಳು ಮೆಣಸಿನ ಬಳ್ಳಿಗಳ ಬೇಡಿಕೆ ಹೆಚ್ಚುತ್ತಿದೆ. ತೋಟಗಾರಿಕೆ ಇಲಾಖೆ, ಕರ್ನಾಟಕ ಸರಕಾರ ಇವರು ಗುಚ್ಛ ಗ್ರಾಮ ಯೋಜನೆಯಡಿಯಲ್ಲಿ ಸುಮಾರು 1 ಲಕ್ಷ ಕಸಿ ಕಾಳು ಮೆಣಸಿನ ಬಳ್ಳಿಗಳನ್ನು ಎನ್.ಡಿ.ಹೆಗಡೆಯವರಿಂದ ಖರೀದಿಸಿ ಫಲಾನುಭವಿ ರೈತರಿಗೆ ನೀಡಿದ್ದಾರೆ. ಈಗ ಎನ್.ಡಿ. ಹೆಗಡೆಯವರು ನರ್ಸರಿಯಿಂದ ಲಕ್ಷಾಂತರ ಕಸಿ ಮೆಣಸಿನ ಬಳ್ಳಿಗಳನ್ನು ರಾಜ್ಯಾದ್ಯಂತ ಕೃಷಿಕರಿಗೆ ಮತ್ತು ಕೃಷಿ ಹಾಗೂ ತೋಟಗಾರಿಕೆ ಇಲಾಖೆಯವರಿಗೆ ನೀಡುವ ಮೂಲಕ ಕಸಿ ಬಳ್ಳಿಯ ಅತಿದೊಡ್ಡ ಬೇಡಿಕೆಗಳನ್ನು ಪೂರೈಸುವಲ್ಲಿ ಸಫಲರಾಗಿದ್ದಾರೆ.

ಕಾಳುಮೆಣಸಿನ ಕೃಷಿಯಲ್ಲಿ ವಿಯೆಟ್ನಾಂ ದೇಶವನ್ನೇ ಮೀರಿಸುವ ಗುರಿ ಇವರದ್ದು. ಅಲ್ಲಿಗಿಂತ ಹೆಚ್ಚಿನ ಇಳುವರಿಯನ್ನು ಭಾರತದಲ್ಲಿ ಹೆಚ್ಚಿನ ಶ್ರಮವಿಲ್ಲದೇ ಪಡೆಯಬಹುದು ಎಂಬುದು ಎನ್.ಡಿ. ಹೆಗಡೆಯವರು ಪ್ರಯೋಗಗಳಿಂದ ತಿಳಿದುಕೊಂಡ ಸತ್ಯ. ಇಲ್ಲಿಯವರೆಗೂ ಹೆಗಡೆಯವರ ತೋಟಕ್ಕೆ ರೈತರು, ಇಲಾಖೆಯ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಅಧಿಕಾರಿಗಳು ಮತ್ತು ಐ.ಸಿ.ಎ.ಆರ್.ಸಂಸ್ಥೆಯ ಅಧಿಕಾರಿಗಳು, ನಿರ್ದೇಶಕರುಗಳು ಹೀಗೆ ಅನೇಕ ಜನರು ಭೇಟಿ ನೀಡಿದ್ದಾರೆ.

ನಾವು ಹೆಗಡೆಯವರ ತೋಟದ ಫೋಟೋ ಕ್ಲಿಕ್ಕಿಸಿ ವಾಪಸ್ಸಾಗುವಾಗ ಕೊನೆಯ ಬಾರಿಗೆ ಒಮ್ಮೆ ನಿಂತು ಹಸುರಿನಿಂದ ಕಂಗೊಳಿಸುತ್ತಿದ್ದ ಅವರ ತೋಟದ ಪ್ರಕೃತಿ ಸೊಬಗನ್ನು ನೋಡುತ್ತಾ ನಿಂತೆ. ನನ್ನ ಪಕ್ಕದಲ್ಲಿದ್ದ ಕೃಷಿ ವಿಜ್ಞಾನಿಯೊಬ್ಬರು "ಸರ್, ನಾವು ಇಲ್ಲೇ ನಿಂತಿದ್ದರೆ ಹೆಗಡೆಯವರು ನಮ್ಮ ಮೇಲೂ ಸಹ ಕಾಳು ಮೆಣಸಿನ ಬಳ್ಳಿಯನ್ನು ಹಬ್ಬಿಸಿ ಬಿಡುತ್ತಾರೆ. ಬನ್ನಿ ಹೋಗೋಣಾ" ಎಂದರು. ಇದನ್ನು ಕೇಳಿ ಅಲ್ಲಿದ್ದ ಎಲ್ಲರೂ ನಕ್ಕೆವು.

ಎನ್.ಡಿ. ಹೆಗಡೆ ಅವರ ಸಂಪರ್ಕ ಸಂಖ್ಯೆ: 82773 94054, 08386 264248–ಸಂಜೆ ಬಳಿಕ ಸಂಪರ್ಕಿಸಬಹುದು. ■



Download From : www.kpscvaani.com



# ಅರಿವಿನೆಡೆಗೆ ಭಾರತ ಭಾಗ್ಯ ವಿಧಾತನ ನಡಿಗೆ

**ಆ ದಿನಗಳಲ್ಲಿ ಅಸ್ಪೃಶ್ಯತೆಯ ನಡುವೆ ಉನ್ನತ ವಿದ್ಯಾಭ್ಯಾಸವನ್ನು ಪಡೆದುಕೊಳ್ಳುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆದಾಗ್ಯೂ ಡಾ. ಬಿ.ಆರ್.ಅಂಬೇಡ್ಕರ್ ಅವರು ತಮ್ಮ ವಿದ್ಯಾಭ್ಯಾಸವನ್ನು ಹೇಗೆ ಪಡೆದುಕೊಂಡರು ಎಂಬುದರ ಕುರಿತು ಲೇಖಕರು ಈ ಲೇಖನದ ಮೂಲಕ ಬೆಳಕು ಚೆಲ್ಲಿದ್ದಾರೆ.**

ಮಂಜುನಾಥ ಡಿ.ಡೊಳ್ಳಿನ

ನೋವು, ಅವಮಾನಗಳನ್ನೇ ಉಂಡು ಬೆಳೆದರೂ ಕೂಡ, ಅವುಗಳನ್ನೇ ತಮ್ಮ ಸಾಧನೆಯ ಮೆಟ್ಟಿಲುಗಳನ್ನಾಗಿಸಿ ಕೊಂಡವರು **ಭೀಮರಾವ್ ರಾಮ್‌ಜಿ ಸಕ್ಪಾಲ್**. ಬಾಲ್ಯದಲ್ಲಿಯೇ ಅಸ್ಪೃಶ್ಯತೆಯ ಅಮಾನವೀಯ ಪ್ರಸಂಗಗಳನ್ನು ಎದುರಿಸುತ್ತಾ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪೂರೈಸಿದರು.

ಅವರ ವಿದ್ಯಾಭ್ಯಾಸದಲ್ಲಿ ತಂದೆ ರಾಮ್‌ಜಿ ಸಕ್ಪಾಲ್, ತಾಯಿ ಭೀಮಾಬಾಯಿ, ಬ್ರಾಹ್ಮಣ ಸಮುದಾಯದ ಮಹದೇವ ಅಂಬೇಡ್ಕರ್ ಗುರುಗಳು, ಪೇಂಡ್ಸೆ ಸರ್, ಕೃಷ್ಣಾಜಿ ಅರ್ಜುನ ಕೇಳೂಸ್ಕರ್, ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡ, ಕೊಲ್ಲಾಪುರದ ಶಾಹೂ ಮಹಾರಾಜರು ಸೇರಿದಂತೆ ಅನೇಕರು ಸಕಾಲಿಕವಾಗಿ ನೀಡಿದ ಮಾನವೀಯ ಸ್ಪಂದನೆ, ಆರ್ಥಿಕ ಪ್ರೋತ್ಸಾಹದಿಂದ ಭಾರತೀಯರಿಗಷ್ಟೇ ಅಲ್ಲ, ಸಮಸ್ತ  ಜಗತ್ತಿಗೆ ಜ್ಞಾನದ ಬೆಳಕಿನ ಹೊಸ ಕಿರಣವಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರು ರೂಪುಗೊಳ್ಳಲು ಸಾಧ್ಯವಾಯಿತು.  ಪದವಿ, ಸ್ನಾತಕೋತ್ತರ ಪದವಿ ಪಡೆದು ಉನ್ನತ ಶಿಕ್ಷಣದಲ್ಲಿ ಅವರು ತೋರಿದ ಅಪಾರ ಆಸಕ್ತಿ ಮತ್ತು ಪರಿಶ್ರಮಕ್ಕೆ ಹಲವು ವಿದ್ವಾಂಸರು ನೀಡಿದ ಪ್ರೋತ್ಸಾಹವೂ ಸ್ಮರಣೀಯವಾಗಿದೆ. ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಹೆಸರಾಂತ ಪ್ರಾಧ್ಯಾಪಕರಾದ



Download From : www.kpscvaani.com

ಪ್ರೊ.ಸೆಲಿಗ್ಮನ್ ಹಾಗೂ ಪ್ರೊ.ಜಾನ್ ಡ್ಯೂಯಿ ಅವರು ನೀಡಿದ ಮಾರ್ಗದರ್ಶನ ಅಂಬೇಡ್ಕರ್ ಅವರೊಳಗಿನ ನಿಗಿ ನಿಗಿ ಕೆಂಡವು ಭಾರತವನ್ನು ಬೆಳಗುವ ಜ್ಯೋತಿಯಾಗಿ ಪರಿವರ್ತನೆಯಾಗಲು ಕಾರಣವಾಯಿತು.

### ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ವ್ಯಾಸಂಗ:

ಅಂಬೇಡ್ಕರ್ ಅವರು ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ನಂತರ ತಂದೆಯ ಅಪೇಕ್ಷೆಯಂತೆ ಚಿಕ್ಕ ವಯಸ್ಸಿನಲ್ಲಿಯೇ ವಿವಾಹಿತರಾದರೂ ಕೂಡ, ಯಾವ ಅಡ್ಡಿ ಆತಂಕಗಳೂ ಇಲ್ಲದೇ ವಿದ್ಯಾಭ್ಯಾಸ ಮುಂದುವರೆಸಿದರು. ತಂದೆಯ ಆಸೆ ಈಡೇರಿಸಲು ಭೀಮನ ಅಣ್ಣ ಆನಂದರಾವ್ ತನ್ನ ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲಿಸಿ, ತಮ್ಮನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಲು ಕೆಲಸಕ್ಕೆ ಸೇರಿಕೊಂಡು ಸಹೋದರನ ಇಂಟರ್ ಮೀಡಿಯಟ್ ಶಿಕ್ಷಣಕ್ಕೆ ನೆರವು ನೀಡಿದರು.

1908 ರ ಜನವರಿ 3 ರಂದು ಮುಂಬೈನ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ತರಗತಿಗೆ ಭೀಮರಾವ್ ಅಂಬೇಡ್ಕರ್ ಪ್ರವೇಶ ಪಡೆದರು. ಅನಾರೋಗ್ಯದ ನಡುವೆಯೂ ಇಂಟರ್ ಮೀಡಿಯೆಟ್ ಆರ್ಟ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

### ಬರೋಡಾ ಮಹಾರಾಜರ ವಿದ್ಯಾರ್ಥಿ ವೇತನ ಮತ್ತು ಬಿ.ಎ. ಪದವಿ ಶಿಕ್ಷಣ:

ಮುಂಬೈನ ಎಲ್ಫಿನ್‌ಸ್ಟನ್ ಹೈಸ್ಕೂಲಿನ ಪ್ರಧಾನ ಗುರುಗಳಾಗಿದ್ದ ಕೃಷ್ಣಾಜಿ ಅರ್ಜುನ

**ಮಗ ಭೀಮರಾಮ್ ಅಂಬೇಡ್ಕರ್ ಪದವಿ ನಂತರ ಶಿಕ್ಷಣ ಮುಂದುವರೆಸಬೇಕು ಎಂಬುದು ತಂದೆ ರಾಮ್‌ಜಿ ಅವರ ಇಚ್ಛೆಯಾಗಿತ್ತು. ಅದು ಸಾಧ್ಯವಾಗದೇ, ಉದ್ಯೋಗಕ್ಕಾಗಿ ಬರೋಡಾಕ್ಕೆ ತೆರಳಿದ್ದು ಹಾಗೂ ಮಗನಿಂದ ದೂರ ಇರಬೇಕಾದ ಪರಿಸ್ಥಿತಿ ಎದುರಿಸಲಾಗದೇ ತಂದೆ ರಾಮ್‌ಜಿ ಸಕ್ಪಾಲ್ ಅನಾರೋಗ್ಯಕ್ಕೀಡಾದರು. 1913ರ ಫೆಬ್ರವರಿ 02 ರಂದು**



### ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ:

ತಂದೆಯ ನಿಧನದ ನಂತರ ಅಂಬೇಡ್ಕರ್ ಅವರಿಗೆ ಬರೋಡಕ್ಕೆ ತೆರಳಿ ಪುನಃ ಸೇನೆಯ ಸೇವೆ ಮಾಡಲು ಮನಸ್ಸಾಗಲಿಲ್ಲ. ಅದೇ ಸಂದರ್ಭದಲ್ಲಿ ಬರೋಡಾ ಮಹಾರಾಜರು ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಾಕ್ಕೆ ಹೋಗಿ ವ್ಯಾಸಂಗ ಮಾಡಬಯಸುವ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪ್ರಕಟಿಸಿದರು. ಈ ಅವಕಾಶ ಪಡೆದುಕೊಂಡ ಅಂಬೇಡ್ಕರ್ ಅವರು ನಿರ್ದಿಷ್ಟ ಅವಧಿಯಲ್ಲಿ ವ್ಯಾಸಂಗ ಮುಗಿಸಿ ಮರಳಿ ಬಂದ ನಂತರ ಹತ್ತು ವರ್ಷಗಳ ಕಾಲ ಸರ್ಕಾರಿ ಸೇವೆ ಸಲ್ಲಿಸುವ ಕರಾರು ಪತ್ರಗಳಿಗೆ 1913 ರ ಜೂನ್ 4 ರಂದು ಬರೋಡಾ ಸಂಸ್ಥಾನದ ವಿದ್ಯಾಮಂತ್ರಿಗಳ ಸಮ್ಮುಖದಲ್ಲಿ ಸಹಿ ಹಾಕಿದರು.

ಜುಲೈ ತಿಂಗಳಿನಲ್ಲಿ ನ್ಯೂಯಾರ್ಕ್ ನಗರದ ಕೊಲಂಬಿಯಾ ವಿ.ವಿ.ಯಲ್ಲಿ ಎಂ.ಎ.ಪದವಿಗೆ ಪ್ರವೇಶ ಪಡೆದರು. ರಾಜನೀತಿ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರ ಮತ್ತು ಮಾನವಶಾಸ್ತ್ರ ವಿಷಯಗಳನ್ನು ಆಯ್ದು ಕೊಂಡಿದ್ದರು. ಅಂಬೇಡ್ಕರ್ ಅವರನ್ನು 'ಗಾಯಕವಾಡ್ ಸ್ಕಾಲರ್' ಎಂದು ಕರೆಯಲಾಗುತ್ತಿತ್ತು. ಭಾರತೀಯ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿದ್ದ ಕಾಸ್ಮೋಪಾಲಿಟಿನ್ ಕ್ಲಬ್‌ಗೆ ಸೇರಿ, ಲಿವಿಂಗ್‌ಸ್ಟನ್ ಹಾಲ್‌ನಲ್ಲಿ ವಸತಿ ಪಡೆದರು. ಪಾರ್ಸಿ ವಿದ್ಯಾರ್ಥಿ ಸಲ್‌ಭತೇನ್ ಎಂಬ ಭಾರತೀಯ ಶ್ರೀಮಂತನ ಜೊತೆಗೆ ನೆಲೆಸಿದರು. ಸಲ್‌ಭತೇನ್ ಬಹುಕಾಲ ಅವರ ಪರಮಾಪ್ತರಾಗಿ ಉಳಿದರು.

ಕೊಲಂಬಿಯಾ ವಿ.ವಿ.ಯಲ್ಲಿ ಅಂಬೇಡ್ಕರ್ ಅವರು ಪ್ರೊ.ಎಡ್ವಿನ್, ಪ್ರೊ. ಆರ್.ಎ. ಸೆಲಿಗ್ಮನ್ ಮತ್ತು ಪ್ರೊ. ಜಾನ್ ಡಿವೆ ಶಿಷ್ಯರಾಗಿ ಅವರಿಂದ ಅಪಾರವಾಗಿ ಆಕರ್ಷಿತರಾದರು. ಪ್ರೊ. ಸೆಲಿಗ್ಮನ್ ಅವರು ಯಾವುದೇ ತರಗತಿಗಳಲ್ಲಿ ಪಾಠ ಮಾಡುತ್ತಿದ್ದರೂ ಸಹ ಅಂಬೇಡ್ಕರ್ ಅವರು ಅಲ್ಲಿ ಹಾಜರಿರುತ್ತಿದ್ದರು. ಅವರ ಮಾರ್ಗದರ್ಶನ ಮತ್ತು ಮುನ್ನುಡಿಯೊಂದಿಗೆ ಅರ್ಥಶಾಸ್ತ್ರದಲ್ಲಿ "ಪ್ರಾಚೀನ ಭಾರತೀಯ ವಾಣಿಜ್ಯ"(Ancient Indian Commerce) ಎಂಬ ವಿಷಯ ಕುರಿತು ಪ್ರಬಂಧ ಮಂಡಿಸಿ 1915 ರ ಜೂನ್ 5 ರಲ್ಲಿ ಎಂ.ಎ.ಪದವಿ ಪಡೆದರು.



Download From : www.kpscvaani.com



**ಅಂಬೇಡ್ಕರರ ವಿದ್ವತ್ತು ಗುರುತಿಸಿದ ಬ್ರಿಟಿಷ್ ಸರ್ಕಾರ;**

ಅಂಬೇಡ್ಕರರು ತಮ್ಮ ವಿದ್ವತ್ತಿನಿಂದ ಕೊಲಂಬಿಯಾ ವಿ.ವಿ.ಯಲ್ಲಿ ಗೌರವಕ್ಕೆ ಪಾತ್ರರಾದರು. ಭಾರತದ ಅತ್ಯಂತ ಶೋಷಿತ ಅಸ್ಪೃಶ್ಯ ಯುವಕನ ಪ್ರೌಢಿಮೆ ಗುರುತಿಸಿದ ನಿಗ್ರೋ ಯುವಕರು ಸಂತೋಷ ಸಂಭ್ರಮಗಳಿಂದ ಸನ್ಮಾನಿಸಿ, ಗೌರವಿಸಿದರು. ಮೂಲ ಪ್ರೌಢ ಪ್ರಬಂಧಕ್ಕೆ ಮಾಂಟೆಗೂ ಚೆಲ್ಮ್ ಫೋರ್ಡ್ ಸುಧಾರಣೆಗಳ ವಿಮರ್ಶೆ ಸೇರ್ಪಡೆ ಮಾಡಿ ಹಸ್ತಪ್ರತಿಯನ್ನು ಸಮಕಾಲೀನಕ್ಕೆ ಪರಿಷ್ಕರಿಸಿದ್ದರು. ಈ ಕೃತಿ ತನ್ನ ವಿದ್ವತ್ತಿನ ಕಾರಣದಿಂದ ಬ್ರಿಟಿಷ್ ಸರ್ಕಾರದ ಗಮನ ಸೆಳೆಯಿತು. ಸರ್ಕಾರವು ಈ ಪುಸ್ತಕವನ್ನು ಇಂಡಿಯನ್ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಿಗೆ ಹಾಗೂ ಕೇಂದ್ರ ಶಾಸನ ಸಭೆ ಸದಸ್ಯರಿಗೆ ಅಧ್ಯಯನಕ್ಕೆ ನೀಡಿ, ಸದಸ್ಯರು ವಾರ್ಷಿಕ ಬಜೆಟ್ ಮಂಡನೆಗೆ ಪೂರಕವಾಗಿ ಇದರಲ್ಲಿರುವ ವಿಷಯಗಳನ್ನು ಚರ್ಚಿಸಿ, ಬಳಸಿಕೊಳ್ಳಲು ತಿಳಿಸಿದರು.

ಕೇಳೂಸ್ಕರ್ ಅವರು, ಅಂಬೇಡ್ಕರ್ ಅವರ ಓದಿನ ಹಂಬಲ, ಪ್ರಾಮಾಣಿಕತೆ ಮತ್ತು ಬಡತನ ಗುರುತಿಸಿದ್ದರು. ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡರು ಶಿಕ್ಷಣ ಪ್ರೇಮಿಯಾಗಿದ್ದರು. ಕೇಳೂಸ್ಕರ್ ಅವರು ಅಂಬೇಡ್ಕರ್ ಅವರೊಳಗಿನ ಪ್ರತಿಭೆ, ಮೇಧಾವಿತನಗಳನ್ನು ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡ ಅವರಿಗೆ ವಿವರಿಸಿ ಮಾಸಿಕ 25 ರೂಪಾಯಿಗಳ ವಿದ್ಯಾರ್ಥಿ ವೇತನ ದೊರೆಯುವಂತೆ ಮಾಡಿದರು. ಈ ನೆರವಿನಿಂದ ಅಂಬೇಡ್ಕರ್ ಅವರು ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಬಿ.ಎ.ಪದವಿಗೆ ಪ್ರವೇಶ ಪಡೆದರು.

ಎಲ್ಫಿನ್‌ಸ್ಟನ್ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ಪ್ರೊ.ಮುಲ್ಲರ್ ಅವರು ಸಹಾಯಹಸ್ತ ನೀಡಿದರು. ತಮ್ಮ ಖರ್ಚಿನಲ್ಲಿ ಬಟ್ಟೆಗಳನ್ನು ಕೊಡಿಸಿದರು. ಇನ್ನೋರ್ವ ಪ್ರಾಧ್ಯಾಪಕರಾಗಿದ್ದ ಇರಾನಿಯವರ ಸಹಾಯವೂ ದೊರಕಿತು. ಪುಸ್ತಕಗಳ ನಿರಂತರ ಅಧ್ಯಯನದಿಂದ ಅಂಬೇಡ್ಕರ್ ಅವರಲ್ಲಿ ಹೊಸ ಅಲೋಚನೆಗಳು, ಚಿಂತನೆಗಳು ಬೆಳೆಯತೊಡಗಿದವು. ವ್ಯಾಸಂಗದ ಜೊತೆಗೆ ರಾಮಾಯಣ, ಮಹಾಭಾರತ, ಭಾಗವತ ಮತ್ತಿತರ ಮಹಾಕಾವ್ಯಗಳನ್ನೂ, ಮನುಸ್ಮೃತಿ, ಯಾಜ್ಞವಲ್ಕ್ಯ, ಸ್ಮೃತಿ, ಶುಕ್ರನೀತಿಸಾರ, ಚಾಣಕ್ಯನ ಅರ್ಥಶಾಸ್ತ್ರ, ಭಾರತೀಯ ನ್ಯಾಯಶಾಸ್ತ್ರ, ನೀತಿಶಾಸ್ತ್ರ ಮೊದಲಾದವುಗಳನ್ನು ಅಭ್ಯಾಸ ಮಾಡಿ ಅಂಬೇಡ್ಕರರು ತಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಂಡರು.

ಅಂಬೇಡ್ಕರರು ಬಿ.ಎ.ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ದೇಶದಾದ್ಯಂತ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳವಳಿ ಪ್ರಬಲವಾಗಿ ರೂಪುಗೊಳ್ಳುತ್ತಿತ್ತು. ಅಂಬೇಡ್ಕರರ ಅಂತರಂಗದಲ್ಲಿ ಹೋರಾಟ ಪುಟಿದೆದ್ದರೂ ಕೂಡ, ಅದನ್ನು ತಡೆದು ಶಿಕ್ಷಣದಲ್ಲಿ ಗಂಭೀರವಾಗಿ ತೊಡಗಿಸಿಕೊಂಡರು. 1912 ರಲ್ಲಿ ಬಿ.ಎ.ಪದವಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ, 1913 ರಲ್ಲಿ ಮುಂಬೈ ವಿ.ವಿ.ಯಿಂದ ಪದವಿ ಪಡೆದುಕೊಂಡರು. ಪದವಿ ನಂತರ ಬರೋಡಾದ ಸಯ್ಯಾಜಿರಾವ್ ಗಾಯಕವಾಡ ಅವರ ಆಸ್ಥಾನದಲ್ಲಿ ಸೈನ್ಯದ ಲೆಫ್ಟಿನೆಂಟ್ ಹುದ್ದೆಗೆ ಸೇರಿದರು. ಆದರೆ ಅಸ್ಪೃಶ್ಯತೆ ಅವರ ಬೆನ್ನು ಬಿಡಲೇ ಇಲ್ಲ.

**ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಪ್ರವೇಶ:**

1916 ರಲ್ಲಿ ಅಮೆರಿಕದಿಂದ ನೇರವಾಗಿ ಲಂಡನ್‌ಗೆ ತೆರಳಿ ಅಲ್ಲಿನ ಆಕ್ಸ್‌ಫರ್ಡ್ ಮತ್ತು ಕೆಂಬ್ರಿಡ್ಜ್ ವಿ.ವಿ.ಗಳಿಗೆ ಸೇರಿದರು. ಗ್ರೇಸ್ ಇನ್ ಕಾಲೇಜಿನಲ್ಲಿ ನ್ಯಾಯಶಾಸ್ತ್ರದ ವ್ಯಾಸಂಗಕ್ಕಾಗಿ, ಪ್ರತಿಷ್ಠಿತ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರ ಅಧ್ಯಯನ ಹಾಗೂ ಪೊಲಿಟಿಕಲ್ ಸೈನ್ಸ್



Download From : www.kpscvaani.com

ವಿದ್ಯಾ ಸಂಸ್ಥೆಯಲ್ಲಿ ರಾಜ್ಯಶಾಸ್ತ್ರ ಅಧ್ಯಯನಕ್ಕೆ ಹೆಸರು ನೊಂದಾಯಿಸಿಕೊಂಡರು. ಹಗಲಿರುಳೆನ್ನದೇ ಪರಿಶ್ರಮದ ಅಧ್ಯಯನದಲ್ಲಿ ನಿರತರಾಗಿದ್ದ ಅಂಬೇಡ್ಕರ್ ಅವರಿಗೆ ಒಂದು ಆಘಾತ ಕಾದಿತ್ತು. ವಿದ್ಯಾರ್ಥಿ ವೇತನದ ಕಾಲಾವಧಿ ಮುಗಿದುದರಿಂದ ರಾಜ್ಯಕ್ಕೆ ಹಿಂದಿರುಗಿ ಅಮೂಲ್ಯ ಸೇವೆ ಸಲ್ಲಿಸಬೇಕೆಂಬ ಪತ್ರ ಬರೋಡಾ ಮಹಾರಾಜರಿಂದ ಬಂದಿತ್ತು. ಇಂಗ್ಲೆಂಡಿನಿಂದ ಹಿಂದಿರುಗುವಾಗ ತಾವು ಸಂಗ್ರಹಿಸಿದ ಸಾವಿರಾರು ಪುಸ್ತಕಗಳನ್ನು ಹಡಗಿನ ಮೂಲಕ ಭಾರತಕ್ಕೆ ಕಳಿಸಿದರು. ತಾವು 'ಕೈಸರ್.ಎ.ಹಿಂದ್' ಹಡಗಿನ ಮೂಲಕ ಕೊಲಂಬೋ ಮಾರ್ಗವಾಗಿ 1917 ರ ಆಗಸ್ಟ್ 21 ರಂದು ಭಾರತಕ್ಕೆ ಬಂದರು. ಪುಸ್ತಕ ತರುತ್ತಿದ್ದ ಹಡಗು ನೀರು ಪಾಲಾದದ್ದು ಕೇಳಿ ತೀವ್ರ ದು:ಖಿತರಾದರು. ಥಾಮಸ್ ಆಂಡ್ ಕುಕ್ ಕಂಪನಿ ಪರಿಹಾರ ನೀಡಿತು. ಅಂಬೇಡ್ಕರ್ ಭಾರತಕ್ಕೆ ಹಿಂದಿರುಗುವ ವೇಳೆ ಸಾಂಬಾಜಿ ವಾಘ್ಮೋರೆ ಎಂಬುವರ ನೇತೃತ್ವದಲ್ಲಿ ಸನ್ಮಾನ ಏರ್ಪಡಿಸಲಾಗಿತ್ತು.

**ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಮರು ಪ್ರವೇಶ:**

ವಿದ್ಯಾರ್ಥಿ ವೇತನ ಅವಧಿ ಪೂರ್ಣಗೊಂಡಿದ್ದರಿಂದ ಭಾರತಕ್ಕೆ ಹಿಂದಿರುಗಿದ್ದ ಅಂಬೇಡ್ಕರ್ ಅವರು 1920 ರ ಸೆಪ್ಟಂಬರ್ 30 ರಂದು ಮತ್ತೆ ಲಂಡನ್‌ಗೆ ತೆರಳಿದರು. ಪುನಃ ಲಂಡನ್‌ಗೆ ತೆರಳಿ ವ್ಯಾಸಂಗ ಮುಂದುವರೆಸಲು ತಮ್ಮ ಸ್ನೇಹಿತ ಸಲ್‌ಭತೇನ್ ರಿಂದ ಐದು ಸಾವಿರ ರೂ. ಸಾಲ ಹಾಗೂ ಕೊಲ್ಲಾಪುರದ ಛತ್ರಪತಿ ಶಾಹೂ ಮಹಾರಾಜರಿಂದ ಸಹಾಯ ತೆಗೆದುಕೊಂಡರು. ಕಡಿಮೆ ಖರ್ಚಿನಲ್ಲಿ ಸರಳ ಊಟ, ಉಪಹಾರದೊಂದಿಗೆ ಬೋರ್ಡಿಂಗ್‌ನಲ್ಲಿ ವಾಸಿಸುತ್ತಾ, ಆರ್ಥಿಕ ಮಿತವ್ಯಯ ಸಾಧಿಸಲು ಕೆಲವೊಮ್ಮೆ ಮುಂಜಾನೆಯ ಉಪಹಾರ ಸೇವನೆ ಮೊಟಕುಗೊಳಿಸುತ್ತಾರೆ. ದಿನಕ್ಕೆ 18 ಗಂಟೆಗಳ ಕಾಲ ಲಂಡನ್ ಗ್ರಂಥಾಲಯದಲ್ಲಿ ಅಧ್ಯಯನದಲ್ಲಿ ತೊಡಗಿದರು. ಗ್ರಂಥಾಲಯದ ಸಮಯ ಮುಗಿದ ಬಳಿಕ ಅಲ್ಲಿನ ಸಿಬ್ಬಂದಿಯೇ ಅಂಬೇಡ್ಕರ್ ಅವರಿಗೆ ಸಮಯ ತಿಳಿಸಿ ಹಾಸ್ಟೆಲಿಗೆ ಕಳುಹಿಸಬೇಕಾಗುತಿತ್ತು. ಬೋರ್ಡಿಂಗ್ ಹೌಸ್‌ನ ಸಹಪಾಠಿಯಾಗಿದ್ದ ಅಸ್ನೋಟಿಕರ್ ಎಂಬುವರು ಕಾಳಜಿಯಿಂದ ಅಂಬೇಡ್ಕರರಿಗೆ ವಿಶ್ರಾಂತಿ ಪಡೆಯಲು ಸೂಚಿಸುತ್ತಿದ್ದರು. ಅಂಬೇಡ್ಕರ್ ಅವರು ಅಸ್ಪೃಶ್ಯರ ಕಲ್ಯಾಣಕ್ಕಾಗಿ ಭಾರತದಲ್ಲಿನ ಕಾರ್ಯಕರ್ತರಿಗೆ ವಿದೇಶದಿಂದಲೇ ಮಾರ್ಗದರ್ಶನ ನೀಡುತ್ತಿದ್ದರು.

1921 ರಲ್ಲಿ ಅಂಬೇಡ್ಕರ್ ಅವರು ಪ್ರೊ. ಎಡ್ವಿನ್ ಕ್ಯಾನನ್ ಅವರ ಮಾರ್ಗದರ್ಶನದಲ್ಲಿ "ಬ್ರಿಟಿಷ್ ಭಾರತದಲ್ಲಿ ಸಾಮ್ರಾಜ್ಯಶಾಹಿಯ ಹಣಕಾಸಿನ ಪ್ರಾಂತೀಯ ವಿಕೇಂದ್ರೀಕರಣ" ಎಂಬ ಪ್ರಬಂಧ ಮಂಡಿಸಿ ಎಂ.ಎಸ್.ಸಿ. ಪದವಿಯನ್ನು ಪಡೆದರು. ಕೂಡಲೇ ಡಿ.ಎಸ್.ಸಿ ಪದವಿಗೆ ನೊಂದಾಯಿಸಿಕೊಂಡು "ರೂಪಾಯಿ ಸಮಸ್ಯೆಗಳು ಮತ್ತು ಅದರ ಪರಿಹಾರಗಳು" ಎಂಬ ಪ್ರಬಂಧ ಮಂಡಿಸಿದರು. ಕ್ರಿ.ಶ.1922 ರಲ್ಲಿ ಜರ್ಮನಿಯ ಬಾನ್ ವಿಶ್ವವಿದ್ಯಾಲಯಕ್ಕೆ ತೆರಳಿದರು. ಇಷ್ಟೆಲ್ಲ ಪದವಿಗಳನ್ನೂ ಪಡೆದರೂ ಕೂಡ ಅವರ ಅಧ್ಯಯನದ ಆಸಕ್ತಿ ತಣಿದಿರಲಿಲ್ಲ. ಆರ್ಥಿಕ ಸಂಕಷ್ಟದ ಕಾರಣದಿಂದ 1923 ರ ಎಪ್ರಿಲ್‌ನಲ್ಲಿ ಭಾರತಕ್ಕೆ ಮರಳಿದರು. ಅಂಬೇಡ್ಕರರು ಇಂಗ್ಲೆಂಡಿನಲ್ಲಿ ಅಧ್ಯಯನ ಮಾಡುವಾಗ ಅಂದಿನ ಭಾರತದ ಕಾರ್ಯದರ್ಶಿಗಳಾಗಿದ್ದ ಮಾಂಟೆಗೋ ಚೆಲ್ಮ್‌ಫೋರ್ಡ ಅವರು ಲಂಡನ್ನಿಗೆ ಬಂದಿದ್ದರು, ಅವರ ಜೊತೆಗಿದ್ದ ವಿಠಲಬಾಯಿ ಪಟೇಲರೊಂದಿಗೆ ಭಾರತದ ಕಾರ್ಯದರ್ಶಿಗಳನ್ನು ಭೇಟಿಯಾಗಿ ಭಾರತೀಯ ಅಸ್ಪೃಶ್ಯ ಜನಾಂಗಗಳ ನೋವುಗಳನ್ನು ಅವರ ಗಮನಕ್ಕೆ ತಂದು ಪರಿಹರಿಸಲು ವಿನಂತಿಸಿದರು.

ಮನುಕುಲದ ವಿಕಾಸಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿ, ಭಾರತದ ಜನತೆಗೆ ಬೆಳಕು ನೀಡಿದ ಸೂರ್ಯ, ಭಾರತ ಭಾಗ್ಯ ವಿಧಾತ ಎನಿಸಿಕೊಂಡ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಎಲ್ಲರಿಗೂ ಸ್ವಾಭಿಮಾನದ ಬದುಕು ಕಲ್ಪಿಸಿದ ಮಹಾನ್ ಚೇತನ.



**ಮೇಧಾವಿಗಳ ಮನಗೆದ್ದ ಪಿ.ಹೆಚ್.ಡಿ. ಪದವಿ:**

ಕ್ರಿ.ಶ.1916 ರಲ್ಲಿ ಪ್ರೊ. ಗೊಯಿಡನ್ ವೀಸರ್ ಅವರ ಸ್ಮರಣಾರ್ಥ ಆಯೋಜಿಸಿದ್ದ ಮಾನವ ವಿಜ್ಞಾನ ವಿಚಾರ ಸಂಕಿರಣದಲ್ಲಿ ಅಂಬೇಡ್ಕರ್ ಅವರು "ಭಾರತದಲ್ಲಿ ಜಾತಿಗಳು: ಉಗಮ ಮತ್ತು ಬೆಳವಣಿಗೆ" ಎಂಬ ವಿಷಯ ಕುರಿತು ಪ್ರಬಂಧ ಮಂಡಿಸಿದರು. ಇದು ಮೇಧಾವಿಗಳ ಮನಗೆದ್ದು 24 ವರ್ಷದ ಯುವಕ ಅಂಬೇಡ್ಕರ್‌ರ ಪ್ರತಿಭೆಯ ಗುಣಗಾನ ಮಾಡಿದರು. ತಮ್ಮ ಸಂಶೋಧನೆ, ಬರವಣಿಗೆ ತೀವ್ರಗೊಳಿಸಿದ ಅಂಬೇಡ್ಕರ್ ಅವರು " ಭಾರತದ ರಾಷ್ಟ್ರೀಯ ಉತ್ಪನ್ನ ಹಾಗೂ ಆದಾಯ ವಿಶ್ಲೇಷಣೆ" ( The National Dividend of India; A Historical and Analytical Study) ಎಂಬ ವಿಷಯದ ಬಗ್ಗೆ ಸಂಶೋಧನೆ ಕೈಗೊಂಡು, 1916 ರ ಜೂನ್‌ನಲ್ಲಿ ಕೊಲಂಬಿಯಾ ವಿ.ವಿ.ಗೆ ಮಹಾಪ್ರಬಂಧ ಮಂಡಿಸಿದರು. 1917 ರಲ್ಲಿ ವಿ.ವಿ.ಯು ಪಿಹೆಚ್‌ಡಿ ಪದವಿ ನೀಡಿತು. 1925 ರಲ್ಲಿ ಪಿ.ಎಸ್.ಕಿಂಗ್ ಮತ್ತು ಸನ್ಸ್ (ಲಿ) ಪ್ರಕಾಶನ ಸಂಸ್ಥೆಯು "ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಆರ್ಥಿಕ ವ್ಯವಸ್ಥೆಯ ವಿಕಾಸ" ಎಂಬ ಹೆಸರಿನಲ್ಲಿ ಈ ಗ್ರಂಥ ಪ್ರಕಟಿಸಿತು. ವಿದೇಶ ವಿದ್ಯಾಭ್ಯಾಸಕ್ಕೆ ಕಳುಹಿಸಲು ನೆರವಾಗಿದ್ದ ಬರೋಡಾದ ಸಯ್ಯಾಜಿರಾವ್ ಗಾಯಕವಾಡ ಅವರಿಗೆ ಅಂಬೇಡ್ಕರ್ ಅವರು ಈ ಪುಸ್ತಕ ಅರ್ಪಿಸಿದರು.



Download From : www.kpscvaani.com



# ಯುಗಾದಿ

**ವಸಂತ ಮಾಸದಲ್ಲಿ ಚಿಗುರು ಎಲೆಗಳಿಂದ ನಿಸರ್ಗದ ಸೊಬಗು ಮನಮೋಹಕವಾಗಿ ಮೈದೆಳೆದಿರುತ್ತದೆ. ಇಂತಹ ಋತುವಿನಲ್ಲಿ ಯುಗಾದಿ ಹಬ್ಬವನ್ನು ಒಂದು ರೀತಿಯಲ್ಲಿ ವೈಜ್ಞಾನಿಕವಾಗಿ ಆಚರಿಸಲಾಗುತ್ತದೆ.**

## ನಿಸರ್ಗದ ಸೊಬಗಿನೊಂದಿಗೆ

# ವೈಜ್ಞಾನಿಕವಾಗಿ ಆಚರಣೆ



ಪ್ರೊ. ಮಂಜುನಾಥ ಉಲವತ್ತಿ ಶೆಟ್ಟರ್

ಶಿಶಿರ ಋತುವಿನಲ್ಲಿ ಮೃತಪ್ರಾಯವಾಗಿದ್ದ ನಿಸರ್ಗ ಶೋಭೆ ಒಮ್ಮಿಂದೊಮ್ಮೆ ಚೇತನಗೊಂಡು ಮೆರೆಯ ತೊಡಗಿ ಅದು ವಸಂತ ಕಾಲದಲ್ಲಿ ಗಿಡಮರಗಳು ತಳಿರ ಭಾರ ಹೊರುತ್ತವೆ. ವಸಂತ ಮಾಸ ಋತುಗಳ ರಾಜ. ಗಿಡಬಳ್ಳಿಗಳೂ ಹೂಹಣ್ಣು ಬಿಟ್ಟು, ಕಣ್ಣು ಸೆಳೆಯುವ ಕಾಲ. ಸಸ್ಯ ಸಮೃದ್ಧಿ, ಪುಷ್ಪ ವೈಭವ ಮಂದಮಾರುತ ಪಕ್ಷಿ ಸಂಕುಲದ ಕಲರವ ಇವೆಲ್ಲ ವಸಂತ ಋತುವಿನಲ್ಲಿ ಸಿಗುವ ಸಿರಿಸಂಪದಗಳು. ಬದಲಾಗುವ ಈ ಪರಿಸರದಲ್ಲಿ ತನ್ನ ಹೃದಯದೊಳಗೂ ಏನೋ ಒಂದು ಉತ್ಕಟತೆ ತಳಮಳ ಏಳುವುದನ್ನು ಮನುಷ್ಯ ತನ್ನ ಬುದ್ಧಿಶಕ್ತಿಯ ಮೂಲಕ ಗುರುತಿಸುತ್ತಾನೆ. ನಿಸರ್ಗದ ಈ ಬದಲಾವಣೆ ಮತ್ತು ಮನುಷ್ಯ ಅದರಿಂದ ಉತ್ತೇಜಿತನಾಗುವ ಬಗೆಗಳಿಗೆ ಕವಿ ಮರುಳಾಗಿದ್ದು ಸಹಜವೇ. ವಸಂತ ಋತುವಿನುದ್ದಕ್ಕೂ ಹಬ್ಬಗಳು ಹರಡಿಕೊಂಡಿವೆ. ಚೈತ್ರ ಹುಣ್ಣಿಮೆಯ ಶಕ್ತಿಪೂಜೆಗೂ, ಹನುಮ ಜಯಂತಿಯೆಂದೂ ಅಚರಿಸಲಾಗುತ್ತಿದೆ. ಶ್ರೀಪಂಚಮಿ, ಹೋಳಿ, ಯುಗಾದಿ, ಚೈತ್ರ ಪೂರ್ಣಿಮ, ಮದನತ್ತಯೋದಶೀ, ರಾಮನವಮಿ ಮುಂತಾದವು ಈ ಕಾಲದಲ್ಲಿ ಮಾನ್ಯ.

ಬಹುಪಾಲು ಭಾರತೀಯರ ಹಬ್ಬಗಳು ಋತುಗಳನ್ನು ಆಧರಿಸಿಯೇ ಆಚರಿಸಲಾಗುವ ಹಬ್ಬಗಳು. ವಸಂತ ಎನ್ನುವ ಪದವು ಸಂತಸ ಸಂಭ್ರಮಗಳ ಪರ್ಯಾಯ ಪದವೇ ಆಗಿಬಿಟ್ಟಿದೆ. ವಸಂತ ಋತುವಿನುದ್ದಕ್ಕೂ ನಡೆಯುವ ಉತ್ಸವಾಚರಣೆಯ ಪರಂಪರೆಯೇ ಇದಕ್ಕೆ ಕಾರಣ. ಈ ಋತುವಿಗೆ ಮಧುಮಾಸ, ಮಾಧವಮಾಸ, ಲಕ್ಷೀಮಾಸ ಎಂಬ ಉಪನಾಮಗಳು ಇವೆ. ಈ ಕಾಲದಲ್ಲಿ ಚಳಿಯ ಇರಿತವೂ ಇಲ್ಲ, ಮಳೆಯ ಕಸವಿಸಿವೂ ಇಲ್ಲ. ಹಗಲಲ್ಲಿ ಮೂಡಣನು ಹಿತಮಿತ್ರನಾಗಿರುತ್ತಾನೆ. ರಾತ್ರಿಯ ಶುಭ್ರಾಕಾಶವೂ ಚಂದ್ರತಾರೆಗಳ ಚಿತ್ತಾರವನ್ನು ತಳೆಯುತ್ತದೆ. ನವ–ಚಿಗುರುಗಳ ಸೊಂಪನಿಂದಲೂ, ಶುಕಪಿಕಗಳ ಇಂಪಿನಿಂದಲೂ, ಮಾವಿನ ತಳಿರುಗಳ ಕಂಪಿನಿಂದಲೂ ಸಮೃದ್ಧವಾಗಿರುತ್ತದೆ. ವಸಂತದ ಸಂತಸವನ್ನು ಮನುಷ್ಯ ಮಾತ್ರವಲ್ಲ ಪಶುಪಕ್ಷಿಗಳು, ಗಿಡಮರಬಳ್ಳಿಗಳೂ ಆಚರಿಸುತ್ತವೆ.



Download From : www.kpscvaani.com

ಹೆಚ್ಚಿನ ವನಸ್ಪತಿಗಳು ವಣ ಎಲೆಗಳನ್ನು ಉದುರಿಸಿ, ಹೊಸ ಚಿಗುರುಗಳಿಂದ ಸಜ್ಜಾಗುತ್ತವೆ. ಕೋಗಿಲೆಗಳು ಸುಶ್ರಾವ್ಯವಾಗಿ ಹಾಡುತ್ತಾ ಸಂತಾನದ ಸಂಭ್ರಮಕ್ಕೆ ಸಜ್ಜಾಗುತ್ತವೆ.

ಯುಗಾದಿಯಲ್ಲಿ ನಾವು ಆಚರಿಸುವ ಪ್ರತಿಯೊಂದು ಕಾರ್ಯವು ವೈಜ್ಞಾನಿಕತೆಯ ಮೇಲೆಯೇ ನಿಂತಿದೆ. ಯುಗಾದಿಯ ವರ್ಷಾರಂಭದ ದಿನದಿಂದ ಶುಭಾರಂಭಗೊಂಡ ಎಲ್ಲಾ ಸತ್ಕಾರ್ಯಗಳೂ ಯಶಸ್ಸನ್ನು ಸಾಧಿಸುತ್ತವೆ ಎಂಬುದು ಬರೀ ವಿಶ್ವಾಸದ ಮಾತಲ್ಲ. ಆ ಹೊಸತು ವ್ಯಾವಹಾರಿಕ ಸತ್ಯವೂ ಹೌದು. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ 'ತಿಜಟಟ ಭಜರುಟ ಏ ಡಿಜಚಿಜಥಿ ಃಚಿಟಜಿ ಛಿಠಟಠಿಟಜಣಜಜ' ಅದಕ್ಕಾಗಿಯೇ ಒಳ್ಳೆಯ ಕಾರ್ಯಗಳೆನ್ನೆಲ್ಲ ಯುಗಾದಿಯಿಂದ ಆರಂಭಿಸುವ ಕ್ರಮವಿದೆ. ಅದು ವಿದ್ಯಾರಂಭವಿರಲಿ, ವಿವಾಹ ಸಮಾರಂಭವಿರಲಿ ಗೃಹ ಪ್ರವೇಶವೇ ಇರಲಿ, ದೂರ ಪ್ರಯಾಣವೇ ಇರಲಿ, ಸಂಧಾನವಿರಲಿ ಮತ್ತು ಸಂಗ್ರಾಮವಿರಲಿ ಈ ಎಲ್ಲಾ ಕಾರ್ಯಗಳು ಹೊಸತಿನ ಯುಗಾದಿಯಿಂದ ಕಾರ್ಯಗಳನ್ನು ಮೊದಲು ಮಾಡಲಾಗುತ್ತದೆ. ಈ ಹೊಸ ದಿನದ ವಿಶೇಷತೆಯಲ್ಲಿ ಬೇವು-ಬೆಲ್ಲದ ಸೇವನೆಯು ವೈಜ್ಞಾನಿಕವಾಗಿ ಅಷ್ಟೇ ಸತ್ಯಕ್ಕೆ ಹತ್ತಿರವಾದ ಸಂಗತಿಯಾಗಿದೆ. ಬೇವನ್ನು ಪರ್ಯಾಯ ಕಲ್ಪವೃಕ್ಷವೆಂದು ಕರೆಯಲಾಗಿದೆ. ಬೇವಿನ ಸರ್ವಾಂಗವೂ ಉತ್ಕೃಷ್ಟವೇ, ಔಷಧಿಯೇ. ಇದರ ಎಲೆ ಬೇರು ಕಾಂಡ ಸರ್ವಸ್ವವೂ ವಿವಿಧ ರೀತಿಯ ರೋಗಗಳಿಗೆ ದಿವ್ಯ ಔಷಧಿಯಾಗಿ ನೆರವಾಗುವುದು. ಇದು ಚರ್ಮರೋಗ ನಿವಾರಕ ಕ್ರಿಮಿಹಾರಕ ಜಂತುನಾಶಕ ಶಕ್ತಿದಾಯಕ ದಿವ್ಯ ಔಷಧವಾಗಿದೆ. ಇದು ಕೃಷಿ ಕೈಗಾರಿಕೆ ವ್ಯಾಪಾರ ವಾಣಿಜ್ಯ ತೈಲಗೊಬ್ಬರವಾಗಿ ನೆರವಾಗುತ್ತದೆ. ಇನ್ನು ನಾವು ನೂರ್ಕಾಲ ವಜ್ರದೇಹಿಯಾಗಿ ಬಾಳಲು, ಎಲ್ಲಾ ರೀತಿಯ ಸಂಪತ್ತುಗಳಿಗಾಗಿ ಮತ್ತು ಸಕಲ ರೋಗ ನಿವಾರಣೆಗಾಗಿ ಬೇವಿನ ಚಿಗುರು ಮತ್ತು ಎಲೆ ತಿನ್ನಬೇಕು.


ಖಾದ್ಯ ತಯಾರಿಕೆಯಲ್ಲಿ ಬಳಸುವ ಬೆಲ್ಲವು ಸಹ ಅಷ್ಟೇ ಉತ್ಕೃಷ್ಟವಾದದ್ದು. ಅದು ಶಕ್ತಿ-ಚೈತನ್ಯದಾಯಕವೂ, ರಕ್ತ-ಹಿಮೋಗ್ಲೋಬಿನ್‌ಕಾರಕವೂ ಮತ್ತು ಆರೋಗ್ಯವರ್ಧಕವೂ ಆಗಿರುತ್ತದೆ. ಇಂತಹ ಅಮೂಲ್ಯ ಬೇವು-ಬೆಲ್ಲ ಸೇವನೆಯು ಆಯುರಾರೋಗ್ಯ ವರ್ಧಕವೂ ಮನೋದೈನಿಕ ಸ್ವಾಸ್ಥ್ಯ ಸಮತೋಲನಕಾರಕವೂ ಕೂಡ ಆಗಿರುತ್ತದೆ. ಈ ಹೊಸ ದಿನದಿಂದ ಭಾರತೀಯರು ಕಾಲಮಾನದ ನಿಖರತೆಯನ್ನು ತಿಳಿಯಲು ದಿನದ ಪಂಚಾಂಗ ಶ್ರವಣವೂ ಸಹ ಅಷ್ಟೇ ವೈಜ್ಞಾನಿಕವಾಗಿದೆ. ಈ ಪಂಚಾಂಗದ ಮೂಲಕ ಆ ವರ್ಷದ ಮಳೆ ಬೆಳೆ ಭವಿಷ್ಯದ ಆಗುಹೋಗುಗಳನ್ನು ಪೂರ್ವಭಾವಿಯಾಗಿ ತಿಳಿದು ಅದಕ್ಕೆ ಅನುಗುಣವಾಗಿ ಜೀವನಕ್ರಮವನ್ನು ಹೊಂದಿಸಿಕೊಂಡು ಒತ್ತಡ ರಹಿತ, ರೋಗರಹಿತ ಬದುಕಿನಿಂದ ಸಂತೃಪ್ತ ಜೀವನ ನಡೆಸಲು ಸಹಾಯವಾಗುತ್ತದೆ. ಇದರ(ಯುಗಾದಿಯ) ಹಿನ್ನೆಲೆಯನ್ನು ಸ್ವಲ್ಪ ರಾಮಾಯಣದಲ್ಲಿರುವಂತೆ ಗಮನಿಸುವುದಾದರೆ, ರಾಮನ ಜನನ ಕಾಲದಲ್ಲಿ ಚೈತ್ರಮಾಸವು ದ್ವಾದಶ ಮಾಸವಾಗಿತ್ತು. ಮುಂದೆ ಆರನೆಯ ಶತಮಾನದಲ್ಲಿ ವರಾಹ ಮಿಹಿರನು ವಸಂತವಿಸುವತ್ ಅಶ್ವಿನಿಯಲ್ಲಿ ಬರುವುದರಿಂದ ಚೈತ್ರಶುದ್ಧ ಪಾಂಡ್ಯದಿಂದ ನವವರ್ಷಾರಂಭವನ್ನು ಮಾಡಿದನು. ಶಾಲಿವಾಹನ ಶಕಾನುಯಾಯಿ ದಕ್ಷಿಣ ಭಾರತದವರು ಚೈತ್ರಶುದ್ಧ ಪ್ರತಿಪದೆಯಿಂದ ನವವರ್ಷಾರಂಭ ಮಾಡಿದರೆ, ವಿಕ್ರಮ ಶಕಾನುಯಾಯಿ ಉತ್ತರ ಭಾರತದವರು ಚೈತ್ರದ ಬದಲು, ಕಾರ್ತಿಕ ಶುದ್ಧ ಪ್ರತಿಪದೆಯಿಂದ ಹೊಸವರ್ಷವನ್ನು ಆರಂಭಿಸಿದರು. 'ಯುಗ' ಎಂದರೆ 'ವರ್ಷ' ಎಂದೂ ಆ ಯುಗ ಎನ್ನುವ ರಥಕ್ಕೆ ಉತ್ತರಾಯಣ ಮತ್ತು ದಕ್ಷಿಣಾಯನ ಎಂಬ ಎರಡು ಕಾಲ ಚಕ್ರಗಳಿರುತ್ತವೆ.

ತಾಯಿ ವಸುಂಧರೆಯು ತನ್ನ ಗರ್ಭದಲ್ಲಿ ರಹಸ್ಯವಾಗಿಟ್ಟುಕೊಂಡಿರುವ ನಿಗೂಢ ಶಕ್ತಿಯಿಂದ ನೀರಿಲ್ಲದ ಒಣಭೂಮಿಯ ನಡುವಿನಿಂದಲೇ ತನ್ನ ಸಸ್ಯಕಾಶಿಯ ಮೂಲಕ ಮೈತುಂಬಿಸಿ, ಹಸುರು ಚಿಗುರಿಸಿ ನಗುತ್ತಾಳೆ, ಅದು ಸುಡುಸುಡು ಬೇಸಿಗೆಯಲ್ಲಿ. ಅದನ್ನು ವಸಂತವೆಂದೋ ಚೈತ್ರವೆಂದೋ ನಮ್ಮ ಕವಿಗಳು ಕರೆದು ವರ್ಣಿಸಿ ಸಂಭ್ರಮಿಸುತ್ತಾರೆ. ಆ ಚಿಗುರಾದರೂ ಎಂಥ ಕೋಮಲ ಮಧುರವಾಗಿರುವ ಅದು ಸೂರ್ಯನ ಕ್ರೂರ ಬಿಸಿಲನ್ನು ಸಹಿಸಿ ತನ್ನ ಇಕ್ಕೆಲಗಳಲ್ಲಿ ಹೂ ಬಿಟ್ಟು ಗಾಳಿಯಲ್ಲಿ ತೂಗಾಡುತ್ತಾ ವರ್ಣರಂಜಿತವಾಗುತ್ತವೆ. ಪ್ರತಿ ವರ್ಷದ ಸರದಿಯಂತೆ ಸಸ್ಯ ಸಂಕುಲ ತನ್ನ ಸಹಜ ಕಾಯಕಕ್ಕೆ ಮುಂದಾಗುತ್ತದೆ. ಭೂತಾಯಿಯ ಹಸುರು ಮೈದುಂಬುತ್ತದೆ. ಎತ್ತ ನೋಡಿದರೂ ಹಸುರುಮಯವಾಗಿ, ನೆಲದ ಹಾಸು, ಮರಗಿಡ ಬಳ್ಳಿ ಸಮಸ್ತವೂ ಹಸುರಾಗಿ ತಾನೇ ತಾನಾಗುತ್ತದೆ. ಭೂರಮೆಯ ಬಯಕೆಯನ್ನು ಈಡೇರಿಸದೇ ತಾನು ಬದುಕಲಾರೆ ಎಂಬಂತೆ ವರುಣ ಮಹಾಶಯನು ಮುಂಗಾರು ಧಾರೆಯಾಗಿ ಸಿಂಪಡಿಸಿ, ಹರಿದು ಚೆಲ್ಲಾಟವಾಡ ತೊಡುಗುತ್ತಾನೆ. ಆಗ ತನ್ನ ಮೈತುಂಬ ನೀರು ಕುಡಿದು ಮುಕ್ಕಳಿಸುವಂತೆ ಭೂರಮೆ ಹಸಿರಾಗಿ ಹಸುರುನ್ನು ಮೈದೂಗುತ್ತಾಳೆ.

ನಿಸರ್ಗದ ವೈಶಿಷ್ಟ್ಯತೆಯ ದೂರದ ಪಕ್ಷಿನೋಟಕ್ಕೆ ರಾಚುವ, ಬಯಲಲ್ಲಿರುವ ಹಸಿರೆಲ್ಲ ಒಂದೇ ಬಣ್ಣವೆಂಬಂತೆ ತೋರುತ್ತದೆ. ಆದರೆ ಅದರ ಹತ್ತಿರ ಹೋದಾಗ, ಅದರ ಸೂಕ್ಷ್ಮತೆಯಲ್ಲಿ ಪ್ರತಿ ಸಸ್ಯಸಂಕುಲವು ತನ್ನ ಭಿನ್ನತೆಯನ್ನು ಕಾಯ್ದುಕೊಂಡಿರುವುದು ಕಂಡುಬರುತ್ತದೆ. ಕಣ್ಣಿಗೆ ಕಾಣುವ ಎಲ್ಲಾ ಜಾತಿಯ ಸಸ್ಯಸಂಪತ್ತಿನ ಸಂಕುಲವು ತನ್ನ ಭಿನ್ನತೆಯನ್ನು ಕಾಯ್ದುಕೊಂಡಿರುವುದು ನಿಸರ್ಗದ ಇರುವಿಕೆಯಷ್ಟೇ ಸತ್ಯ ಸಂಗತಿಯಾಗಿದೆ. ಎಲ್ಲಾ ಜಾತಿಯ ಸಸ್ಯ ಸಂಪತ್ತು ಹಸುರೆಂಬಂತೆ ತೋರಿದರೂ ಹುಲ್ಲಿನಂತೆ ಗಿಡವಿಲ್ಲ. ಒಂದು ಜಾತಿಯ ಮರದಂತೆ ಮತ್ತೊಂದು ಜಾತಿಯ ಮರದ ಹಸುರಿಲ್ಲ. ಒಂದು ಬಳ್ಳಿಯ ಹಸುರಂತೆ ಮತ್ತೊಂದು ಬಳ್ಳಿಯ ರೂಪವಿಲ್ಲ. ಇದು ಭಾರತೀಯ ಸಂಸ್ಕೃತಿಯಿದ್ದಂತೆ. ಏಕತೆಯ ರೂಪದಲ್ಲಿರುವ ವಿವಿಧ ಬಣ್ಣಗಳಿರುವಂತೆ, ಭಿನ್ನ ಭಿನ್ನ ರೇಖೆಗಳಿರುವಂತೆ ಏಕತೆಯಲ್ಲಿ ಆನೇಕತೆಗಳೇ ಇಂದಿನ ವಿಶೇಷತೆಗಳೆನಿಸಿಬಿಡುತ್ತವೆ. ಈ ಅನೇಕತೆಯ ಒಟ್ಟು ರೂಪದಲ್ಲೊಂದು ಸಾದೃಶ್ಯತೆ ಇರುವುದರಿಂದಲೇ ಹಸುರು ಒಂದೇ ರೂಪದ್ದು ಎಂದರೂ ಅದನ್ನು ವೀಕ್ಷಿಸಿದಾಗ ನಯನಕ್ಕೆ ತಂಪೆರೆಯುತ್ತದೆ. ಹಸುರು ಜೀವಂತಿಕೆಯ ಸಂಕೇತವಾಗಿರುವುದನ್ನು ಮನಬಂದಂತೆ ಉಪಯೋಗಿಸಿಕೊಂಡಿರುವುದೇ ಇಂದಿನ ವಿಪರ್ಯಾಸವೆನಿಸಿದೆ. ನಮ್ಮ ಸುತ್ತಮುತ್ತಿಲಿನ ಸಸ್ಯ ಶ್ಯಾಮಲತ್ವವನ್ನು ನಾವು ಕಾಪಾಡಿಕೊಳ್ಳುವುರಿಂದ ನಮಗೆ ಒಳಿತಿದೆ ಎಂಬುದನ್ನು ಮನನ ಮಾಡಿಕೊಳ್ಳಬೇಕಿದೆ. ಪರಿಸರ ನಮಗೆ ಉಸಿರು ನೀಡಿದೆ ಎಂಬ ಸಾಕ್ಷ್ಯಪ್ರಜ್ಞೆ ನಮಗೆ ಇಲ್ಲವೆಂದಾದರೆ ನಾವು ನಾಗರಿಕರಲ್ಲವೆಂದೇ ಅರ್ಥ. ■




Download From : www.kpscvaani.com




Download From : www.kpscvaani.com

# ಪದಬಂಧ-17



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಚಿನ್ನದ ಗಣಿಗಾರಿಕೆಗೆ ಈ ಜಿಲ್ಲೆ ಪ್ರಸಿದ್ಧಿಯಾಗಿದೆ (3)
3. ಕುಂಟೆಯಿಂದ ಹರತೆ ಹೊಡೆ (3)
6. ಮರದ ಹತ್ತಿರ ನಡೆದ ಯುದ್ಧ (3)
7. ಜಾನಪದ ಹಾಡುಗಳ ಒಂದು ಪ್ರಕಾರ (3)
8. ಬಿಡುವು ಹೀಗೆ ದೊರೆತಿದೆ (3)
11. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ ರಾಜ್ಯದಲ್ಲಿ ಉದ್ಘಾಟನೆಗೊಂಡ ಸ್ಥಳ (5)
14. ಈ ಪರಿ ಕಾಣುತ್ತಿರುವ ಆವರಣ ರೇಖೆ (3)
17. ಭವ ಕೊನೆಗಿದ್ದಾಗಿನ ಸಾಧ್ಯತೆ! (3)
18. ಮಾತು ಕೇಳಿಸಿಕೊಂಡಿರುವ ಸೋದರಮಾವ (3)
19. ತುಸು ಬೆಳಕಿರುವ ಮುಂಜಾನೆ (3)
20. ನಮ್ಮ ರಾಷ್ಟ್ರೀಯಧ್ವಜಗಳನ್ನು ಕೈಯಲ್ಲಿ ನೇಯ್ದು ತಯಾರಿಸುವ ಈ ಗ್ರಾಮವು ಧಾರವಾಡ ಜಿಲ್ಲೆಯಲ್ಲಿದೆ (3)

## ಮೇಲಿಂದ ಕೆಳಕ್ಕೆ

1. ಕೋವಿಡ್ –19 ಗೆ ನೀಡಲಾಗುತ್ತಿರುವ ಲಸಿಕೆ ಹೆಸರು (3)
2. ದ್ರವ ಒಸರುವ ಜಿಹ್ವೆ (3)
3. ಹರನ ಮುಂದಿರಿಸಿದ ಮಣ್ಣಿನ ಬಾನಿ (3)
4. ಗುಲಾಬಿ ಹೂ ಹಿಡಿದಿರುವ ಸೇವಕ (3)
5. ಗಣಿಯ ಹತ್ತಿರ ಕಲಿತಿರುವ ಲೆಕ್ಕ ಶಾಸ್ತ್ರ (3)
9. ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ಈ ದೇವಾಲಯ ದಕ್ಷಿಣಭಾರತದ ಜ್ಯೋತಿರ್ಲಿಂಗ ಎಂದೇ ಪ್ರಸಿದ್ಧವಾಗಿದೆ (4)
10. ಜೇನು ಬೆಟ್ಟ ಎಂಬರ್ಥದ ಈ ತಾಲ್ಲೂಕು ಕೇಂದ್ರವು ತುಮಕೂರು ಜಿಲ್ಲೆಯಲ್ಲಿದೆ (4)
12. ರಾಜ ಮಂತ್ರಿ ಕಾಲಾಳು ಮುಂತಾದ ಕಾಯಿಗಳಿಂದ ಆಡುವ ಒಳಾಂಗಣ ಆಟ (4)
13. ತತ್ಪರತೆಯಿಂದ ಮಾಡುವ ವಿಧ್ಯಾಭ್ಯಾಸ '(3)
14. ವನದ ಹತ್ತಿರ ಬೀಸಿದ ಗಾಳಿ (3)
15. ಸೊಕ್ಕು ಹೀಗೆ ಬಂದಿದೆ (3)
16. ರಾಜನ ಸಭೆ (3)

## ಉತ್ತರ

**ಮೇಲಿಂದ ಕೆಳಕ್ಕೆ**

1. ಕೋವ್ಯಾಕ್ಸಿನ್ 2. ರಸನ 3. ಹರವಿ 4. ಗುಲಾಮ 5. ಗಣಿತ 9. ರಾಮೇಶ್ವರಂ 10. ಮಧುಗಿರಿ 12. ಚದುರಂಗ 13. ವ್ಯಾಸಂಗ 14. ಪವನ 15. ಧಿಮಾಕು 16. ಓಲಗ

**ಎಡದಿಂದ ಬಲಕ್ಕೆ**

1. ಕೋಲಾರ 3. ಹರಗು 6. ಸಮರ 7. ಲಾವಣಿ 8. ವಿರಾಮ 11. ವಿಧುರಾಶ್ವತ್ಥ 14. ಪರಿಧಿ 17. ಸಂಭವ 18. ಮಾತುಲ 19. ನಸುಕು 20. ಗರಗ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Download From : www.kpscvaani.com



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆವತಿಯಿಂದ ಮಾರ್ಚ್ 10 ರಂದು ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಇತರೆ ಪ್ರಶಸ್ತಿಗಳನ್ನು ಪ್ರಧಾನ ಮಾಡಿದರು. ಉಪ ಮುಖ್ಯಮಂತ್ರಿ ಗೋವಿಂದ ಎಂ ಕಾರಜೋಳ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಶಶಿಕಲಾ ಜೊಲ್ಲೆ ಅವರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು




ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಮಂಡಲದ ವತಿಯಿಂದ ಆಯೋಜಿಸಿದ್ದ ಎಕ್ಸಿಲರೇಟರ್ ಬೆಂಗಳೂರು ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಾರ್ಚ್ 10 ರಂದು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಣ್ಣ ಕೈಗಾರಿಕೆ ಸಚಿವರಾದ ಸಿ.ಸಿ.ಪಾಟೀಲ್ ಎಫ್.ಕೆ.ಸಿ.ಸಿ.ಐ ನ ಅಧ್ಯಕ್ಷರಾದ ಪೆರಿಕಲ್ ಎಂ. ಸುಂದರ್, ಕೌಶಲ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ರತ್ನಪ್ರಭಾ ಅವರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು

Download From : www.kpscvaani.com

RNI No. KAR/KAN/2017/75029
Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

# ಒಗ್ಗಟ್ಟಿನಿಂದ ನಾವೆಲ್ಲರೂ ಕರ್ನಾಟಕವನ್ನು ಕೋವಿಡ್-19 ಮುಕ್ತಗೊಳಿಸೋಣ



**ಶ್ರೀ ಬಿ.ಎಸ್. ಯಡಿಯೂರಪ್ಪ**
ಮಾನ್ಯ ಮುಖ್ಯಮಂತ್ರಿಗಳು

ಕಳೆದ ಒಂದು ವರ್ಷದಿಂದ ಕೋವಿಡ್-19ರ ವಿರುದ್ಧ ನಾವೆಲ್ಲರೂ ಒಗ್ಗಟ್ಟಿನಿಂದ ಹೋರಾಡುತ್ತಾ ಬಂದಿದ್ದೇವೆ. ವಿಶೇಷವಾಗಿ ನಮ್ಮ ಎಲ್ಲಾ ಕೋವಿಡ್-19 ಯೋಧರ ಪರಿಶ್ರಮ, ಬದ್ಧತೆಗಳಿಗೆ, ಲಸಿಕೆ ಅಭಿವೃದ್ಧಿಪಡಿಸಿದ ವೈದ್ಯರು, ವಿಜ್ಞಾನಿಗಳ ಸಾಮರ್ಥ್ಯಕ್ಕೆ ಕೃತಜ್ಞತೆಗಳನ್ನು ಸಲ್ಲಿಸೋಣ. **ಆದರೆ ಕೋವಿಡ್ 19 ಪ್ರಕರಣಗಳ ಸಂಖ್ಯೆ ಮತ್ತೊಮ್ಮೆ ಏರುಗತಿಯಲ್ಲಿ ಇದ್ದು, ನಿಯಂತ್ರಣಕ್ಕೆ ನಾಗರಿಕರ ಸಹಕಾರ ಅತ್ಯವಶ್ಯಕ.**



ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ|| ಕೆ. ಸುಧಾಕರ್ ರವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್-19 ಲಸಿಕೆಯ ಮೊದಲನೇ ಡೋಸ್ ಪಡೆಯುತ್ತಿರುವುದು.

**ಕೋವಿಡ್-19 ವಿರುದ್ಧ ಈ ಸಮರ ಇನ್ನೂ ಮುಗಿದಿಲ್ಲ. ಈಗ ನಾವು ಮೈಮರೆತರೆ ಇಷ್ಟು ದಿನದ ಪ್ರಯತ್ನಗಳಿಗೆ ಅರ್ಥವಿಲ್ಲದಂತಾಗುತ್ತದೆ. ಕೋವಿಡ್-19 ಸುರಕ್ಷತಾ ಕ್ರಮಗಳನ್ನು ಪಾಲಿಸಿ, ವೈರಸ್ ಹರಡುವುದನ್ನು ನಿಲ್ಲಿಸಿ.**




ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕೋವಿಡ್-19 ಲಕ್ಷಣಗಳು ಕಂಡುಬಂದಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವುದನ್ನು ತಡ ಮಾಡಿದಷ್ಟೂ ಅಪಾಯಕಾರಿ. ತಕ್ಷಣವೇ ಪರೀಕ್ಷೆ ಮಾಡಿಸಿಕೊಳ್ಳಿ. ವೈದ್ಯರ ಸಲಹೆಯನ್ನು ಪಾಲಿಸಿ. ನಿಮ್ಮ ಕುಟುಂಬ ಮತ್ತು ನಿಮ್ಮ ಹತ್ತಿರದವರನ್ನು ರಕ್ಷಿಸಿ.

ನೀವು 60 ವರ್ಷಗಳ ಮೇಲ್ಪಟ್ಟವರಾಗಿದ್ದರೆ ಹಾಗೂ 45 ವರ್ಷಗಳಿಗೂ ಮೇಲ್ಪಟ್ಟು ಸಹ-ಅನಾರೋಗ್ಯಗಳಿದ್ದರೆ

## ಸ್ವಯಂಪ್ರೇರಿತವಾಗಿ ಕೋವಿಡ್-19 ಲಸಿಕೆ ಪಡೆಯಿರಿ

## ವಿವಿಧ ಸಮಾರಂಭಗಳು ಹಾಗೂ ಆಚರಣೆಗಳ ಸಂದರ್ಭದಲ್ಲಿ ಅನುಸರಿಸಬೇಕಾದ ಮಾನದಂಡಗಳು

| ಸಮಾರಂಭಗಳು/ಆಚರಣೆಗಳು | ಅವಕಾಶ ನೀಡಬಹುದಾದ ಸಾರ್ವಜನಿಕರ ಸಂಖ್ಯೆ | ಷರಾ |
|---|---|---|
| ಸಾಮಾಜಿಕ ಸಮಾರಂಭಗಳು/ಆಚರಣೆಗಳು | | ಭಾರತ ಸರ್ಕಾರದ ಮಾರ್ಗಸೂಚಿಯಂತೆ 3.25 sq.meter per person ಮಾನದಂಡವನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ. |
| ಮದುವೆ | 500 ಮೀರದಂತೆ | ತೆರೆದ ಪ್ರದೇಶಗಳು |
| | 200 ಮೀರದಂತೆ | ಸಭಾಂಗಣಗಳು/ಹಾಲ್‌ಗಳು ಇತ್ಯಾದಿ ಮುಚ್ಚಿದ ಪ್ರದೇಶಗಳು |
| ಜನ್ಮದಿನ ಹಾಗೂ ಇತರ ಆಚರಣೆಗಳು | 100 ಮೀರದಂತೆ | ತೆರೆದ ಪ್ರದೇಶಗಳು |
| | 50 ಮೀರದಂತೆ | ಸಭಾಂಗಣಗಳು/ಹಾಲ್‌ಗಳು ಇತ್ಯಾದಿ ಮುಚ್ಚಿದ ಪ್ರದೇಶಗಳು |
| ನಿಧನ/ಶವಸಂಸ್ಕಾರ | 100 ಮೀರದಂತೆ | ತೆರೆದ ಪ್ರದೇಶಗಳು |
| | 50 ಮೀರದಂತೆ | ಸಭಾಂಗಣಗಳು/ಹಾಲ್‌ಗಳು ಇತ್ಯಾದಿ ಮುಚ್ಚಿದ ಪ್ರದೇಶಗಳು |
| ಅಂತ್ಯಕ್ರಿಯೆ | 50 ಮೀರದಂತೆ | |
| ಇತರೆ ಸಮಾರಂಭಗಳು | 100 ಮೀರದಂತೆ | ಹಾಲ್‌ನ ವಿಸ್ತೀರ್ಣಕ್ಕೆ ಅನುಗುಣವಾಗಿ |
| ಧಾರ್ಮಿಕ ಆಚರಣೆಗಳು / ಸಮಾರಂಭಗಳು | 500 ಮೀರದಂತೆ | ತೆರೆದ ಪ್ರದೇಶಗಳು |
| ರಾಜಕೀಯ ಆಚರಣೆಗಳು / ಸಮಾರಂಭಗಳು | 500 ಮೀರದಂತೆ | ತೆರೆದ ಪ್ರದೇಶಗಳು |

**ಜ್ವರ, ನೆಗಡಿ, ಕೆಮ್ಮು ತರಹದ ಕೋವಿಡ್-19 ಲಕ್ಷಣಗಳಿದ್ದಲ್ಲಿ ಆಪ್ತಮಿತ್ರ ಸಹಾಯವಾಣಿ 14410 ಗೆ ಕರೆ ಮಾಡಿ**

**ಹೆಚ್ಚಿನ ಮಾಹಿತಿಗಾಗಿ 24X7 ಉಚಿತ ಆರೋಗ್ಯ ಸಹಾಯವಾಣಿ 104 ಕ್ಕೆ ಕರೆ ಮಾಡಿ**

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು"
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ

Download From : www.kpscvaani.com